ಅಖಿಲ ಭಾರತ ಪತ್ರಿಕೆ


ಫೆಬ್ರವರಿ 2024



# ಅರೋವಿಲ್ಲೆ

## (ಭೂಮಿಗೆ ಅವಶ್ಯವಿರುವ ತಾಣ)

**ಬೆಲೆ : 15/-**



ಫೋಟೋ: ಇಮೇಜಿಂಗ್ ಸಾವಿತ್ರಿ

ಅವನಾತ್ಮ ಊರ್ಧ್ವಗಮನದಲಿ ಶೃಂಗದುತ್ತುಂಗ ಮೇರುವಲ್ಲಿ

**– ಪುಟ್ಟು ಕುಲಕರ್ಣಿ**

**ಅಖಿಲ ಭಾರತ ಪತ್ರಿಕೆ**
**ಫೆಬ್ರವರಿ 2024**

ಸಂಪುಟ: 34 ಸಂಚಿಕೆ: 02


# ಪರಿವಿಡಿ

## ಅರೋವಿಲ್ಲೆ

(ಭೂಮಿಗೆ ಅವಶ್ಯವಿರುವ ತಾಣ)

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಅರೋವಿಲ್ಲೆಯ ಜನ್ಮ** 7
ಅನು: ಪುಟ್ಟು ಕುಲಕರ್ಣಿ

**ಅರೋವಿಲ್ಲೆಯ ಪ್ರಗತಿ** 10
ಅನು: ವಿಶಾಲಾಕ್ಷೀ ಸತ್ಯನ್

**ಅರೋವಿಲ್ಲೆಯ ಕಾರ್ಯ** 24
ಅನು: ಪ್ರವೀಣ ಪಾಟೀಲ

**ಅರೋವಿಲ್ಲೆಯ ಸಂದೇಶ** 31
ಅನು: ಡಾ॥ ಮಹಾದೇವ ಸಕ್ರಿ

**ಅರೋವಿಲ್ಲೆಯ ಆತ್ಮ** 40
ಅನು: ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 48
ಅನು: ಜಾನ್ವಿ

**ಶ್ರೀ ಅರವಿಂದರ 'ಪ್ರೇಮ ಮತ್ತು ಮೃತ್ಯು'** 54
ಅನು: ಸಮಷ್ಟಿ

**ತ್ರಾಟಕ ಸೂರ್ಯ** 68
– ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 76



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಫೆಬ್ರವರಿ 28, 1968 ರಂದು ಶ್ರೀಮಾತೆಯವರಿಂದ ಉಗಮಗೊಂಡಿರುವ 'ಉಷಾ ನಗರಿ'ಯ ಕುರಿತು ಈಗಾಗಲೇ ಹಲವರಿಂದ ಅವರವರ ಅಭಿಪ್ರಾಯಗಳಲ್ಲಿ ಅಭಿವ್ಯಕ್ತಗೊಳಿಸಲ್ಪಟ್ಟಿದೆ. ಈ ವಿಷಯವಾಗಿ ಶ್ರೀಮಾತೆಯವರ ಅಭಿವ್ಯಕ್ತಿಗಳನ್ನು ಮತ್ತು ಸಂವಾದಗಳನ್ನು ಈ ಸಂಚಿಕೆಯಲ್ಲಿ ಸೂಕ್ತವಾಗಿ ಸಂಯೋಜಿಸುವ ಮೂಲಕ, ಅರೋವಿಲ್ಲೆಯ ಕುರಿತು ಸುಸ್ಪಷ್ಟವಾದ ಹಾಗು ಸಮಗ್ರವಾದ ಅಭಿವ್ಯಕ್ತಿಗಳನ್ನು ಇನ್ನೂ ಪರಿಪಕ್ವವಾದ ದೃಷ್ಟಿಯನ್ನು ಸ್ಥಾಪಿಸಲು ಈ ಸಂಚಿಕೆಯಲ್ಲಿ ಯೋಜಿಸಲಾಗಿದೆ. (ಎಐಎಮ್)

**– ಅನು: ಪುಟ್ಟು ಕುಲಕರ್ಣಿ**

ಇಲ್ಲಿ ಕೇಂದ್ರದಲ್ಲಿರುವ ಬಿಂದುವು ಏಕತೆಯ ಪ್ರತೀಕವಾಗಿದೆ, ಇದೇ ಪರಮೋಚ್ಚ ಪರಮವೂ ಆಗಿದೆ.

ಅಂತರ್ಗತವಾಗಿರುವ ವೃತ್ತವು ನಗರದ ಸೃಷ್ಟಿ ಸ್ವರೂಪವನ್ನು ಮತ್ತು ಅದರ ಕುರಿತಾದ ಪರಿಕಲ್ಪನೆಯನ್ನು ಪ್ರತಿನಿಧಿಸುತ್ತಿದೆ.

ಮಂಡಲಾಕಾರದಲ್ಲಿರುವ ದಳಗಳು ಅಭಿವ್ಯಕ್ತಿ ಶಕ್ತಿಯನ್ನು, ಸಾಕ್ಷಾತ್ಕಾರವನ್ನು ಪ್ರತಿನಿಧಿಸುತ್ತಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/212** **– ಶ್ರೀಮಾತೆ**

ಪ್ರತಿಯೊಬ್ಬರಲ್ಲಿಯೂ ಪಾರದರ್ಶಕ ಸ್ವರೂಪದ ಪ್ರಾಮಾಣಿಕತೆಯು ಇರುವದು ಅತ್ಯಾವಶ್ಯಕವಾಗಿದೆ. ಸದ್ಯ ಇರುವ ಸ್ಥಿತಿಯಲ್ಲಿ ಈ ಪ್ರಾಮಾಣಿಕತೆಯಲ್ಲಿ ಇರುವ ಕೊರತೆಯೇ ಈ ಎಲ್ಲ ಕಷ್ಟಗಳಿಗೂ ಕಾರಣವಾಗಿದೆ.

ಅಪ್ರಾಮಾಣಿಕತೆಯೇ ಇಂದು ಎಲ್ಲ ಮಾನವರಲ್ಲಿ ನೆಲೆಗೊಂಡಿದೆ. ಸೂಕ್ಷ್ಮವಾಗಿ ನೋಡಿದರೆ, ಇಡೀ ಪೃಥ್ವಿಯ ಮೇಲೆ ಕೇವಲ ನೂರು ಜನ ಮಾತ್ರ ಸಂಪೂರ್ಣ ಪ್ರಾಮಾಣಿಕತೆಯಲ್ಲಿ ಇದ್ದಾರೆ ಎನ್ನುವದು ಗೋಚರವಾಗುತ್ತಿದೆ. ಮಾನವನ ಮೂಲ ಸ್ವಭಾವವೇ ಅವನನ್ನು ಅಪ್ರಾಮಾಣಿಕ ಸ್ಥಿತಿಯಲ್ಲಿ ಇಡುತ್ತದೆ. ಇದೊಂದು ತುಂಬ ಸಂಕೀರ್ಣಮಯವಾಗಿರುವ ವಿಷಯ. ಏಕೆಂದರೆ ಮಾನವನು ಈ ದೋಷದಿಂದಾಗಿ ತನ್ನನ್ನು ತಾನೇ ಮೋಸಗೊಳಿಸಿಕೊಳ್ಳುತ್ತಿದ್ದಾನೆ. ಸತ್ಯವನ್ನು ಉದ್ದೇಶಪೂರ್ವಕ–ವಾಗಿಯೇ ಮುಚ್ಚಿಡುತ್ತಿದ್ದಾನೆ. ತನಗೆ ತಾನೇ ಪಲಾಯನಕ್ಕಾಗಿ ಕ್ಷಮೆಯ ದಾರಿಯನ್ನು ಅರಸುತ್ತಿದ್ದಾನೆ.

'ಯೋಗವು' ಮಾತ್ರ ಪ್ರತಿಯೋರ್ವ ಜೀವಿಯಲ್ಲಿಯೂ ಪ್ರಾಣಿಕತೆಯನ್ನು ರೂಪಿಸುವ ಪಥವಾಗಿದೆ. ಪ್ರಾಮಾಣಿಕನಾಗಿರುವದು ಎಂದರೆ ತುಂಬ ಕಷ್ಟದಾಯಕವಾದ ಸಂಗತಿ ಎನ್ನುವದೂ ಸತ್ಯ, ಆದರೆ ಬೌದ್ಧಿಕವಾಗಿಯಾದರೂ ಕಿಂಚಿತ್ ಪ್ರಾಮಾಣಿಕತೆಯಲ್ಲಿ ಇರಬೇಕಾಗುತ್ತದೆ – ಅರೋವಿಲ್ಲೆಯೂ ಇದನ್ನೇ ಅಪೇಕ್ಷಿಸುತ್ತಿದೆ. ಇದನ್ನೇ ಅವರಿಂದ ಹಕ್ಕೊತ್ತಾಯದಲ್ಲಿ ಬಯಸುತ್ತದೆ.

ಸದ್ಯ ಅಸ್ತಿತ್ವದಲ್ಲಿರುವ ಬಲವು ಬಲವತ್ತರವಾಗಿದೆ; ಈ ಹಿಂದೆ ಎಂದಿಗೂ ಇರದ ವರ್ತಮಾನವು ಈಗ ಇಲ್ಲಿದೆ; ಅವತರಣಗೊಳ್ಳುತ್ತಿರುವ ಮತ್ತು ಜೀವಿಗಳಿಗೆ ಅನುಭಾವವನ್ನು ರೂಪಿಸುವ ಹಂತವನ್ನು ಈ ಅಪ್ರಮಾಣಿಕತೆಯು ಕ್ರಿಯೆಯು ತಡೆಯುತ್ತಿದೆ. ಇಡೀ ಜಗತ್ತು ಸಂಪೂರ್ಣವಾಗಿ ಮಿಥ್ಯಾ ಪ್ರಪಂಚದಲ್ಲಿ ತೀವ್ರತೆರನಾಗಿ ನುಗ್ಗುತ್ತಿದೆ. ಮಾನವ–ಮಾನವರ ಮಧ್ಯಯೇ ಪ್ರಚಲಿತದಲ್ಲಿ ಅಸ್ತಿತ್ವದಲ್ಲಿರುವ ಎಲ್ಲ ಸಂಬಂಧಗಳೂ ಈ ಮಿಥ್ಯತ್ವವನ್ನು ಮತ್ತು ವಂಚನೆಯನ್ನು ಸಂಪೂರ್ಣವಾಗಿ ಆಧರಿಸಿಕೊಂಡಿವೆ. ಅವರೆಲ್ಲರೂ ಅಪೇಕ್ಷಿಸುತ್ತಿರುವದು ಶಾಂತಿಯನ್ನೇ ಆದರೂ ಜೊತೆಜೊತೆಗೆ ಆಯುಧಗಳನ್ನೂ ತಮ್ಮ ಸಲುವಾಗಿ ಹೊಂದಲು ಅವರಿಚ್ಛಿಸುತ್ತಾರೆ. ಆದರೆ ಪಾರದರ್ಶಕವಾಗಿರುವ ಪ್ರಾಮಾಣಿಕ ಸ್ವರೂಪದ ವಾತಾವರಣವು ಮಾನವ ಪ್ರಪಂಚದಲ್ಲಿ ಮತ್ತು ದೇಶ ದೇಶಗಳ ಮಧ್ಯದಲ್ಲಿ ರೂಪಿತವಾದಲ್ಲಿ ಮಾತ್ರ ಆಗಮಿಸಲಿರುವ ರೂಪಾಂತರಣದ ಜಗತ್ತನ್ನು ಕಾಣಬಹುದು.

ಇಂತಹ ಒಂದು ಅಪರೂಪದ ಪ್ರಪ್ರಥಮ ಪ್ರಯೋಗವಾಗಿ ಈ ಅರೋವಿಲ್ಲೆ ಇದೆ. ಯಾವಾಗ ಮಾನವನು ರೂಪಾಂತರಣಕ್ಕಾಗಿ ತುಡಿಯುತ್ತಾನೆಯೋ ಮತ್ತು ಅದನ್ನು ಪ್ರಾಮಾಣಿಕತೆಯಿಂದಲೇ ಸಂಶೋಧಿಸುತ್ತಾನೆಯೋ ಆಗ ಮಾತ್ರ ಒಂದು 'ನವೀನ ಜಗತ್ತು' ಸೃಷ್ಟಿಯಾಗುವದು – ಖಚಿತವಾಗಿ ಇದು ನೆರವೇರುತ್ತದೆ. ಪಶು ಸ್ವಭಾವದಿಂದ ಮಾನವನ ಸ್ವಭಾವಕ್ಕೆ ವಿಕಾಸಗೊಳ್ಳಲು, ಪರಿವರ್ತನಗೊಳ್ಳಲು ಕಲ್ಪ ಕಲ್ಪಗಳೇ ಸಂದಿವೆ; ಇಂದು ಮಾನವನು, ಅವನ ಮನಸ್ಸಿನ ಸಾಮರ್ಥ್ಯಕ್ಕೆ ಕೃತಜ್ಞನಾಗಿರಬೇಕು, ಇದರ ಮೂಲಕವೇ ವೇಗೋತ್ಕರ್ಷಗೊಳ್ಳುತ್ತಾ ವಸ್ತು–ವಿಷಯಗಳನ್ನು ವಿಕಾಸಗೊಳಿಸಿಕೊಳ್ಳುತ್ತಾ ರೂಪಾಂತರಣದ ಹಂತಕ್ಕೆ – ಅಂದರೆ ದೇವನಾಗುವ ಹಂತಕ್ಕೆ ಪ್ರಗತಿಗೊಳ್ಳಬಹುದಾಗಿದೆ.

ಮನಸ್ಸಿನ ಸಹಕಾರದ ಮೂಲಕ ಘಟಿಸಲ್ಪಡುವ, ಸ್ವಯಂ–ವಿಶ್ಲೇಷಣೆಯಲ್ಲಿ ಪರಿಪಕ್ವಗೊಳ್ಳುವ ಮೂಲಕ ಪ್ರಥಮ ಹಂತದಲ್ಲಿ ಈ ರೂಪಾಂತರಣವು ಆದಿಗೊಳ್ಳುತ್ತದೆ; ತದನಂತರದಲ್ಲಿ, ಸೂಕ್ಷ್ಮಾತಿಸೂಕ್ಷ್ಮವಾಗಿರುವ ಸಂವೇದನೆಗಳು

ರೂಪಾಂತರಣಗೊಳ್ಳಬೇಕಾಗುತ್ತದೆ, ಇದಾದ ಮೇಲೆ, ಬಹುತೇಕವಾಗಿ ಎಲ್ಲವೂ ಆದ ಮೇಲೆ, ಭೌತಿಕ ಸ್ವರೂಪದ ರೂಪಾಂತರಣ; ನಮ್ಮ ದೇಹದ ಪ್ರತಿಯೊಂದು ಕೋಶವೂ ಪ್ರಜ್ಞೆಯ ಸ್ವರೂಪಕ್ಕೆ ಪರಿವರ್ತಗೊಳ್ಳುತ್ತವೆ. ಅದೇ ಕಾರ್ಯವನ್ನೇ ಇಲ್ಲಿ ರೂಪಿಸುವುದರ ಸಲುವಾಗಿ ನಾನು ಕಾರ್ಯ ಮಾಡುತ್ತಿದ್ದೇನೆ. ಇದು ಸಾವಿನ ಮೇಲೆ ಜಯವನ್ನು ಸಾಧಿಸುವದು. ಇದು ಮತ್ತೊಂದು ಕಥಾನಕವೇ ಆಗಿದೆ; ಅಂದರೆ ಬರಲಿರುವ ಭವಿಷ್ಯದ ಮಾನವ ಕುಲಕ್ಕಾಗಿ ಇದೆ, ಬಹುತೇಕವಾಗಿ ಅದು ಶತಮಾನದ ಅವಧಿಯಾಗಿರಲೂಬಹುದು, ಆದರೂ ಅದು ನಮ್ಮನ್ನು ಸಮೀಪಿಸುತ್ತಿದೆ.

ಈ ಗಮ್ಯವನ್ನು ತಲುಪುವ ನೆಲೆಗೆ ಇಡುವ ಪ್ರಥಮ ಹೆಜ್ಜೆಯೇ ಅರೋವಿಲ್ಲೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 28 ಫೆಬ್ರವರಿ, 1968**

## ಅರೋವಿಲ್ಲೆಯ ಪರಿಕಲ್ಪನೆ

'ಒಂದು ಚಿಂತನಶೀಲ ಆದರ್ಶ ನಗರ'ವನ್ನು ಕಟ್ಟುವ ಒಂದು ಕನಸು ನನಗೆ ಬಹು ದಿನಗಳಿಂದಲೂ ಇತ್ತು, ಆದರೆ ಅದು ಶ್ರೀ ಅರವಿಂದರ ಜೀವಿತಾವಧಿ–ಯಲ್ಲಾಗಿತ್ತು, ಜೊತೆಗೆ ಶ್ರೀ ಅರವಿಂದರೇ ಅದರ ಕೇಂದ್ರವಾಗಿದ್ದರು. ತದನಂತರದಲ್ಲಿ, ಅದರ ಕುರಿತು ಆಸಕ್ತಿ ಇರಲಿಲ್ಲ. ಆದರೆ, ಮತ್ತೆ ಆ ಅರೋವಿಲ್ಲೆಯ ಆದರ್ಶ ನಗರದ ಕುರಿತ ಚಿಂತನವನ್ನು ಪುನಃ ನಿರ್ಧರಿಸಿ, (ಇದನ್ನು "ಅರೋವಿಲ್ಲೆ" ಎಂದು ಕರೆದದ್ದು ನಾನೇ), ಆದರೆ ಅದು ಬೇರೊಂದು ಆಯಾಮದಲ್ಲಾಗಿತ್ತು. ಅಂತಹ ಸ್ಥಳಕ್ಕಾಗಿ ಹುಡುಕಾಟ ನಡೆಸುವದಕ್ಕಿಂತ, ಅಲ್ಲಿರುವ ಸರೋವರವೇ ಅಂತಹ ಒಂದು ನಗರವು ಉದಿತಗೊಳ್ಳಲು ಕಾರಣವಾಯಿತು. ಈ ಅವಧಿಯವರೆಗೂ ನಾನು ಅದರ ಕುರಿತು ಮಗುದೊಂದು ಆಸಕ್ತಿಯನ್ನು ಹೊಂದಲಿಲ್ಲ, ಕಾರಣವೆಂದರೆ ನಾನು ಯಾವುದನ್ನೂ ನೇರವಾಗಿ ಸ್ವೀಕರಿಸಿರಲಿಲ್ಲ. ಆಮೇಲೆ, ಆ ಎಚ್ ಎನ್ನುವವರು ಅದನ್ನು ಅವಳ ತಲೆಯಲ್ಲಿ ತುಂಬಿ, ಆ ಸರೋವರದ ಸ್ಥಳದಲ್ಲಿ ಒಂದು ಮನೆಯಲ್ಲಿ ವಾಸಿಸುವ ಕುರಿತು ಯೋಚಿಸಿ, ಅದೇ ಸ್ಥಳದಲ್ಲಿ, ಅವರ ಮನೆಗೆ ಹೊಂದಿ–ಕೊಂಡಂತೆಯೇ ನನಗೊಂದು ಮನೆಯನ್ನು ನೋಡಿ, ನನಗೆ ಆಹ್ವಾನ ಕೊಟ್ಟರು. ಜೊತೆಗೆ ಅವಳು ಕಂಡ ಕನಸನ್ನೆಲ್ಲವನ್ನೂ ನನಗೆ ಲಿಖಿತ ರೂಪದಲ್ಲಿ ಕಳಿಸಿದ್ದಳು. ಅದರ ಒಂದೆರಡು ಸಾಲುಗಳು ಅವತರಣದ – ಒಂದು ಸೃಷ್ಟಿಯ – ಕುರಿತ ನನಗೆ ಇದ್ದ ನನ್ನ ಬಾಲ್ಯವಾಸ್ಥೆಯ ಹಳೆಯ ನೆನಪುಗಳನ್ನು ಜಾಗೃತಗೊಳಿಸಿತ್ತು. ಅದು ಯಾವ ವಯಸ್ಸಾಗಿತ್ತು ಎನ್ನುವದು ಈಗ ಜ್ಞಾಪಕದಲ್ಲಿಲ್ಲ. ಅದೂ ಈ ಶತಮಾನದ

ಆದಿಯ ಅವಧಿಯಲ್ಲಿ ಅವತರಣಗೊಳ್ಳಲು ಯತ್ನಿಸುತ್ತಿದ್ದಾಗ ಮತ್ತು ಆವಾಗ ನಾನು ಥಿಯೋನ್ ಜೊತೆಗೆ ಇದ್ದೆ. ಅದರ ಕುರಿತು ತದನಂತರದಲ್ಲಿ ಎಲ್ಲವನ್ನೂ ಮರೆತಿದ್ದೆ. ಆದರೆ ಈ ಪತ್ರದ ಮೂಲಕ ಅದು ಮತ್ತೆ ನೆನಪಿಗೆ ಬಂದಿದೆ. ತಕ್ಷಣವೇ ನನಗೆ ಈ ಅರೋವಿಲ್ಲೆಯ ಯೋಜನೆ ಹೊಳೆಯಿತು. ಅದರ ಕುರಿತು ನನ್ನದೇ ಆದ ಒಂದು ಸಾಮಾನ್ಯ ಯೋಜನೆ ಇದೆ; ಇದರ ಕುರಿತೆ ನಾನು "ಆರ್" ಎನ್ನುವವರಿಗೆ ಬರೆದು ತಿಳಿಸಿ, ಇದರ ಸಲುವಾಗಿ ಒಂದು ಸುಯೋಜಿತ ಯೋಜನೆಯನ್ನು ರೂಪಿಸಲು ಲಿಖಿತವಾಗಿಯೇ ತಿಳಿಸಿದ್ದೆ. "ಆರ್" ಎನ್ನುವವರು ಸಿವಿಲ್ ಇಂಜಿನೀಯರ್ ಆಗಿದ್ದರು. ಹೀಗಾಗಿಯೇ ಅವರಿಗೆ ಬರೆದು ತಿಳಿಸಿದ್ದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 23 ಜೂನ್, 1965**

ನೈಜ ಅಧಾತ್ಮಿಕತೆಯು ಆ ದಿವ್ಯ–ಕಾರ್ಯದ ಸೇವೆಗೈಯುವದರಲ್ಲಿ ನೆಲೆಸಿರುತ್ತದೆ.

ಸರ್ವರಿಗಾಗಿಯೂ ಕಾರ್ಯ ಮಾಡುವದನ್ನು ನಿರಾಕರಿಸುವದು ಕೇವಲ ಸ್ವಾರ್ಥದ ತೋರಿಕೆಯಾಗಿರುತ್ತದೆ, ಅಲ್ಲಿ ಯಾವುದೇ ಆಧ್ಯಾತ್ಮಿಕ ಮೌಲ್ಯವೂ ಇರುವದಿಲ್ಲ.

ಇಲ್ಲಿ ಪ್ರಪ್ರಥಮವಾಗಿ ಅರೋವಿಲ್ಲೆಯಲ್ಲಿ ಬದುಕುವ ಅರ್ಹತೆಯೆಂದರೆ ತನ್ನನ್ನು ತಾನೇ ಮಾನವ ಸಹಜವಾಗಿರುವ ಅಹಂಕಾರದಿಂದ ಮುಕ್ತಗೊಳಿಸಿಕೊಳ್ಳುವದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/210**

*ಆಶ್ರಮದ ಚಿಂತನಕ್ಕೂ ಮತ್ತು ಅರೋವಿಲ್ಲೆಯ ಚಿಂತನಕ್ಕೂ ಮಧ್ಯೆ ಇರುವ ಮೂಲಭೂತ ವ್ಯತ್ಯಾಸವೇನು?*

ದಿವ್ಯತ್ವದ ಸಲುವಾಗಿ ಸೇವೆಗೈಯುವ ವಿಷಯದ ದೃಷ್ಟಿಕೋನದಲ್ಲಿ ಇವೆರಡರ ಮಧ್ಯೆ ಅಂತಹ ಯಾವುದೇ ವ್ಯತ್ಯಾಸ ಇಲ್ಲ.

ಆದರೆ, ಆಶ್ರಮವಾಸಿಗಳು ಬಹುತೇಕವಾಗಿ ತಮ್ಮನ್ನು ಯೋಗದ ಸಲುವಾಗಿ (ಇದರಲ್ಲಿ ಸಹಜವಾಗಿಯೇ ವಿದ್ಯಾರ್ಥಿಗಳನ್ನು, ಯಾರು ಇಲ್ಲಿ ಅಧ್ಯಯನದ ಸಲುವಾಗಿ ಇರುವರೋ ಅವರನ್ನು ಹೊರತು ಪಡಿಸಿ) ಸಮರ್ಪಿಸಿಕೊಂಡಿದ್ದಾರೆ.

ಅದೇ ಅರೋವಿಲ್ಲೆಯಲ್ಲಿ, ಸಾಮೂಹಿಕ ಅನುಭವಗಳ ಮಧ್ಯೆ ರೂಪುಗೊಳ್ಳುವ ಮನುಕುಲದ ಪ್ರಗತಿಯ ಸಲುವಾಗಿಯೇ ಇರುವವರಿಗೆ ಪ್ರವೇಶವು ಲಭ್ಯವಾಗುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 10 ನವೆಂಬರ್, 1969**

# ಅರೋವಿಲ್ಲೆಯ ಜನ್ಮ

**– ಅನು: ಪುಟ್ಟು ಕುಲಕರ್ಣಿ**

**ಅರೋವಿಲ್ಲೆಯ ನಿಯಮಾವಳಿಗಳು**

1) ಅರೋವಿಲ್ಲೆಯು ಯಾರ ಸ್ವತ್ತೂ ಆಗಿರುವದಿಲ್ಲ. ಅರೋವಿಲ್ಲೆಯು ಪರಿಪೂರ್ಣ ಮಾನವೀಯತೆಯ ಐಕ್ಯತೆಯ ಸಲುವಾಗಿ ಇದೆ. ಆದರೆ ಅರೋವಿಲ್ಲೆಯಲ್ಲಿ ವಾಸಿಸುವವರು ಆ ದಿವ್ಯ–ಚೇತನದದ ಸೇವಕನಾಗುವ ಇಚ್ಛೆಯನ್ನು ಹೊಂದಿರಬೇಕು.

2) ಅರೋವಿಲ್ಲೆಯು ನಿರಂತರ ಪ್ರಗತಿ, ನಿರಂತರ ಶಿಕ್ಷಣದ ಮತ್ತು ಚಿರಯೌವನದ ಒಂದು ಸ್ಥಳವಾಗಿರುವದು.

3) ಅರೋವಿಲ್ಲೆಯು ಭೂತ ಮತ್ತು ಭವಿಷ್ಯತ್ತುಗಳ ಮಧ್ಯೆ ಸೇತುವೆಯಾಗಿರಲು ಬಯಸುತ್ತದೆ. ಸರ್ವ ಸಂಶೋಧನೆಗಳ ಫಲಿತವನ್ನು ಮತ್ತು ಅನುಷ್ಠಾನ ಸ್ವರೂಪದಲ್ಲಿ ಮತ್ತು ಅದರ ಸೂತ್ರಾನ್ವಿತ ರೂಪದಲ್ಲಿಯೇ ಸ್ವೀಕರಿಸುವದು, ಅರೋವಿಲ್ಲೆಯು ಒಟ್ಟಿನಲ್ಲಿ ಭವಿಷ್ಯದ ಸಾಕ್ಷಾತ್ಕಾರಗಳಿಗಾಗಿ ಸ್ಥೈರ್ಯದುಂಬಿಕೊಂಡೇ ಉದಿಸುತ್ತಿದೆ.

4) ಮಾನವನ ಜೀವನದ ಸಲುವಾಗಿ ನಡೆಯುವ ಲೌಕಿಕ ಮತ್ತು ಆಧ್ಯಾತ್ಮಿಕ ಸಂಶೋಧನೆಗಳ ಸಲುವಾಗಿ ಆ ಮೂಲಕ ಒಂದು ನೈಜ ಮಾನವ – ಐಕ್ಯತೆಗಾಗಿ ಅವುಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಈ ಅರೋವಿಲ್ಲೆ ರೂಪಿತಗೊಂಡ ಸ್ಥಳವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/193–94**

1) ಅರೋವಿಲ್ಲೆಯು ನೇರವಾಗಿ ಯಾರಿಗೂ ಸೇರಿರುವ ಸ್ವತ್ತು ಆಗಿರುವದಿಲ್ಲ, ಇದು ಇಡೀ ಮಾನವ ಕುಲಕ್ಕೆ ಸಂಬಂಧಿಸಿದೆ, ....

ಹೀಗಾಗಿ ಇದು ಲೌಕಿಕದ (ಭೌತಿಕದ) ಸಂಗತಿಯಾಗಿದೆ. ಅರೋವಿಲ್ಲೆಯು 'ಯಾವುದೇ ದೇಶದ ಸಲುವಾಗಿ ಅಲ್ಲ' ಎನ್ನುವ ಪದವನ್ನು ನಾನು ರೂಪಿಸಿಲ್ಲ,

ಏಕೆಂದರೆ ಭಾರತವು ಇದರಿಂದ ಉದ್ವಿಗ್ನಗೊಳ್ಳಬಹುದು. ನಾನು ಇಲ್ಲಿ ರೂಪಿಸಿರುವ 'ಯಾರಿಗೂ ಸಂಬಂಧಿಸಿದ್ದಲ್ಲ' ಎನ್ನುವ ಪದದಲ್ಲಿ 'ಯಾರಿಗೂ' ಎನ್ನುವ ಪದವು ತೇಲು ಪದವಾಗಿದ್ದು, ಇದನ್ನು 'ಯಾವುದೇ ಮಾನವನಿಗೂ' ಅಥವಾ 'ಯಾವುದೇ ದೇಶಕ್ಕೂ' ಎಂದು ಹೇಳುವದಕ್ಕೆ ಅಲ್ಲ. ಮುಖ್ಯವಾಗಿ ಇಲ್ಲಿ ಒತ್ತುಕೊಟ್ಟು ಹೇಳಿರುವದೇನೆಂದರೆ 'ಅರೋವಿಲ್ಲೆಯು ಮಾನವೀಯತೆಗೆ ಸಂಬಂಧಿಸಿದೆ ಅದರಲ್ಲೂ ಐಕ್ಯತೆಯ ಹಂತದ ಏಕತ್ವದ ನೆಲೆಯಲ್ಲಿ ಇದೆ ಎನ್ನುವದು ಏನನ್ನೂ ನಿರ್ಧರಿಸುವದಿಲ್ಲ! ಮಾನವ ಸಮುದಾಯವೂ ಈ ವಿಷಯವು ಅಸಾಧ್ಯವೆಂದೇ ಒಟ್ಟರ್ಥದಲ್ಲಿ ಇದನ್ನು ಸಮ್ಮತಿಸುವದಿಲ್ಲ, ಅದಕ್ಕಾಗಿ ನಾನು ಉದ್ದೇಶಪೂರ್ವಕ–ವಾಗಿಯೇ ಇದನ್ನು ಹೇಳಿದ್ದೇನೆ.'

ಇನ್ನು "ನಾಗರಿಕರು" ಎನ್ನುವ ವಿಷಯದಲ್ಲಿ ನಾನು ಏನನ್ನೂ ಹೇಳಿಲ್ಲ, ಒಟ್ಟನಲ್ಲಿ ನಾನು ಇಲ್ಲಿ ಅಭಿವ್ಯಕ್ತ ಪಡಿಸುತ್ತಿರುವದೇನೆಂದರೆ; .... ಅರೋವಿಲ್ಲೆಯಲ್ಲಿ ವಾಸಿಸಬೇಕೆನ್ನುವವರು ಕಡ್ಡಾಯವಾಗಿ ಆ ದಿವ್ಯ–ಚೇತನದ ಸೇವಕರಾಗಿಯೇ ವಾಸಿಸುವ ಇಚ್ಛೆಯನ್ನು ಹೊಂದಿರಬೇಕು.

ಅವರೆಲ್ಲ "ದಿವ್ಯತ್ವ"ದ ಕುರಿತು ವಿರೋಧದ ಅಡೆತಡೆಗಳನ್ನು ಒಡ್ಡಬಹುದು, ಆದರೆ ನಾನು ಅದೆಲ್ಲಕ್ಕೂ ಹೆದರುವದಿಲ್ಲ!, ಅದೆಲ್ಲವೂ ಕೇಂದ್ರ ಸ್ಥಾನದಲ್ಲಿ ಇರುವ ಆ ಮಾತೃಮಂದಿರದ ವಿವರಣೆಯಾಗಿದೆ. ಈ ಮಾತೃಮಂದಿರವು ಆ ದಿವ್ಯ–ಚೇತನವನ್ನು ಪ್ರತಿನಿಧಿಸುತ್ತಿದೆ. ಇದೆಲ್ಲವನ್ನೂ ಶಬ್ದಗಳಲ್ಲಿ ಹೇಳಲಾಗುವದಿಲ್ಲ, ಆದರೆ ಅದು ಹೀಗೇ ಇರುವದು.

ಆಮೇಲೆ;

2) ಅರೋವಿಲ್ಲೆಯು 'ನಿರಂತರ ಶಿಕ್ಷಣದ' ಮೂಲಕ ಖಚಿತವಾದ ಪ್ರಗತಿಯ ಸ್ಥಳವಾಗಿ, ಮತ್ತು ಯುಗಯುಗಾಂತರಗಳಲ್ಲಿಯೂ ಸದಾ ತಾರುಣ್ಯಪೂರ್ಣತೆಯಿಂದ (ತ್ರಿದಶಾ ಹಂತ) ಇರುವದು.

3) ಗತಕ್ಕೂ ಮತ್ತು ಭವಿಷ್ಯಕ್ಕೂ ಸಂಪರ್ಕ ಸೇತುವಾಗಿ ಇರಲು ಈ ಅರೋವಿಲ್ಲೆ ಬಯಸುವದು. ಅದರಲ್ಲೂ ಶೋಧನೆಯ ಮತ್ತು ಸಂಶೋಧನೆಯ ಫಲಿತಗಳನ್ನು .. ಹೌದು ಎಲ್ಲ ಸಂಶೋಧನೆಗಳ ಅಂದರೆ, ತತ್ತ್ವಜ್ಞಾನದ, ಆಧ್ಯಾತ್ಮಿಕ, ನೈತಿಕ, ವೈಜ್ಞಾನಿಕ.. ಒಟ್ಟಿನಲ್ಲಿ ಗತದ ಪಥಗಳಲ್ಲಿ ನಡೆವ ಎಲ್ಲಾ ಸಂಶೋಧನೆಗಳ ಫಲಿತಗಳನ್ನು ಆದರಿಸುವ ಮೂಲಕ ವಿಕಾಸವಾಗುವದು.

... ಬಹಿರಂಗದಲ್ಲಾಗಲೀ (ಲೌಕಿಕದಲ್ಲಾಗಲೀ) ಮತ್ತು ಅಂತರಂಗದ ವಿಷಯಗಳಲ್ಲಾಗಲೀ ನಡೆಯು ಸಂಶೋಧನೆಗಳ ಮೂಲಕ, ಅರೋವಿಲ್ಲೆಯು ಭವಿಷ್ಯದ ಸಾಕ್ಷಾತ್ಕರಗಳ ಕಡೆಗೆ ನವ ಯುಗವನ್ನು ಕಾಣುವದು.

ಅಂತಿಮವಾಗಿ, ಇಲ್ಲೆ ಎರಡು ದೃಷ್ಟಿಕೋನಗಳಿವೆ; "ಅರೋವಿಲ್ಲೆಯು ಜ್ಞಾನದ ಆಧಾರದಲ್ಲಿ ನಡೆಯುವ ಸಂಶೋಧನೆಗಳ ತಾಣವಾಗುವದು ಮತ್ತು ಮನುಕುಲದ ಮಧ್ಯದಲ್ಲಿ ಸೌಹಾರ್ದಯುತವಾದ, ಮಾನವೀಯತೆಯಿಂದ ಸ್ಪಂದಿಸುವ ಮತ್ತು ಸದ್ಭಾವದಲ್ಲಿ ಪರಸ್ಪರರನ್ನು ಅರ್ಥೈಸಿಕೊಳ್ಳುತ್ತ ಸಾಗುವ ಪಥಗಳನ್ನು ಅಸ್ತಿತ್ವ–ಗೊಳಿಸುತ್ತಾ ಪ್ರಗತಿಗೊಳ್ಳುವದು."

ಇನ್ನೊಂದು ವಿಷಯವೆಂದರೆ, "ಮಾನವೀಯ ಐಕ್ಯತೆಯ ನೈಜ ಅಸ್ತಿತ್ವದ ಸ್ವರೂಪದ ಜೀವಂತ ಜೀವಗಳನ್ನು ರೂಪಿಸುವದಾಗಿದೆ."

ಹೀಗಾಗಿ ನಾವೆಲ್ಲ ಕೊಂಚ ಪರಿವರ್ತನಗೊಳ್ಳುವೆವು.

4) ಅರೋವಿಲ್ಲೆಯು ಭೌತಿಕ ಮತ್ತು ಆಧ್ಯಾತ್ಮಿಕ ಸಂಶೋಧನೆಗಳ ಮೂಲಕ ನೈಜ ಮಾನವೀಯತೆಯ ಐಕ್ಯತೆಯನ್ನು ರೂಪಿಸುವ ಸಂಶೋಧನೆಗಳ ತಾಣವಾಗಿರುವದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 7 ಫೆಬ್ರವರಿ, 1968**

**ಅರೋವಿಲ್ಲೆಯಲ್ಲಿ ವಾಸಿಸಲು ನಿಬಂಧನೆಗಳು**

ಮನೋವೈಜ್ಞಾನಿಕ ದೃಷ್ಟಿಕೋನದಲ್ಲಿ, ಇಲ್ಲಿ ಅವಶ್ಯವಿರುವ ನಿಬಂಧನೆಗಳೆಂದರೆ;

(1) ಮನುಕುಲಕ್ಕೆ ಅವಶ್ಯವಿರುವ ಏಕತೆಗಾಗಿ ಸಮ್ಮತಿ ಹೊಂದುವದು ಮತ್ತು ಆ ಏಕತೆಯನ್ನು ಲೌಕಿಕ ಬದುಕಿನಲ್ಲಿಯೂ ಅನುಷ್ಠಾನಗೊಳಿಸುವ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಸಹಕಾರಿಯಾಗಿರುವದು;

(2) ಭವಿಷ್ಯದಲ್ಲಿ ಘಟಿಸಲಿರುವ ಸರ್ವ ಸಾಕ್ಷಾತ್ಕಾರಗಳಿಗೂ ಸಹಸ್ಪಂದಿಯಾಗಿರುವದಕ್ಕೆ ಇಚ್ಛೆ ಹೊಂದುವದು.

ಈ ರೀತಿಯ ಸಾಕ್ಷಾತ್ಕಾರಗಳು (ಅನುಭಾವ/ಅನುಭೂತಿಗಳಿಗೂ) ಆಯಾ ಸಂದರ್ಭದ ಲೌಕಿಕ ನಿಬಂಧನೆಗಳು ಅನ್ವಯಗೊಳ್ಳುವವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/192 – ಶ್ರೀಮಾತೆ**

# ಅರೋವಿಲ್ಲೆಯ ಪ್ರಗತಿ

**– ಅನು: ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

## ಅರೋವಿಲ್ಲೆಯಲ್ಲಿನ ಮಾನವ ಸಹಜ ಸಮಸ್ಯೆಗಳು

ಒಂದು ಸಾಮಾನ್ಯ ಮತ್ತು ಸಮಗ್ರ ರೀತಿಯಲ್ಲಿ, ತೊಂದರೆಗಳು ಯಾವಾಗಲೂ ಅನುಗ್ರಹಗಳೆಂದೇ ಹೇಳಬಹುದು. ಮಾನವ ದೌರ್ಬಲ್ಯದಿಂದ (ಹೇಗೆ ಹೇಳುವುದು) ಅವು ನೆರವು ನೀಡುವ ಗುಣವನ್ನು ಹೊಂದಿರುವದಿಲ್ಲ. ಸದಾ ಅನುಗ್ರಹಗಳಾಗಿವೆ ಕಷ್ಟಗಳು. ಈ ಬಾರಿ ನಾನು ಬಹಳ ಕಾಲದಿಂದ ಭೂಮಿಯ ಮೇಲೆ ನೆಲೆಸಿರುವೆ. ಯಾವಾಗಲೂ, ಸದಾಕಾಲ ನಿರಂತರವಾಗಿ, ಒಮ್ಮೆಯೂ ಬೇರೆಯಾಗದೇ, ಆ ಕಷ್ಟಗಳೆಲ್ಲವೂ ಅನುಗ್ರಹಗಳೇ ಆಗಿವೆ, ವಿನಾ ಬೇರೇನೂ ಅಲ್ಲ ಎಂಬ ಅರಿವು ನನಗೆ ಅಂತಿಮವಾಗಿ ಗೋಚರಿಸಿದೆ ಬೇರೆಯ ತರಹ ನನಗೆ ಅನಿಸುವದೂ ಇಲ್ಲ ಕಾಣುವದೂ ಇಲ್ಲ. ಏಕೆಂದರೆ ನನ್ನ ಇಡೀ ಜೀವನದಲ್ಲಿನ ಅನುಭವವು ಅದೇ ಆಗಿದೆ. ಪ್ರಾರಂಭದಲ್ಲಿ ನಾನು ತಳಮಳಸಿ ಹೀಗೆ ಹೇಳಿರಬಹುದು: ಇದು ಹೇಗೆ ಸಾಧ್ಯ? ನಾನು ಸತ್ಸಂಕಲ್ಪದಿಂದ ತುಂಬಿರುವವಳಾಗಿ ಇರುವೆ. ಆದರೂ ಕಷ್ಟಗಳು ಒಂದರ ಮೇಲೆ ಒಂದು ಬರುತ್ತಲೇ ಇವೆ. “ಆದರೆ ನಂತರದಲ್ಲಿ, ನನಗೆ ನಾನೇ ಕೆನ್ನೆಗೆ ಹೊಡೆದುಕೊಂಡು ಹೀಗೆ ಅಂದುಕೊಂಡಿರುವೆ;” ನೀನೊಂದು ಪೆದ್ದು, ಅದು ನಿನ್ನ ಚಾರಿತ್ರ್ಯ ಮತ್ತು ಕಾರ್ಯಗಳಿಗೆ ಹೆಚ್ಚಿನ ಪರಿಪೂರ್ಣತೆಯನ್ನು ತರಲು ಆಗಮಿಸಿವೆ ಅಷ್ಟೇ. (ಮೌನ)

ಅರೋವಿಲ್ಲೆಗೆ ಆಶ್ರಮದಿಂದ ಕೆಲವರನ್ನು ತಳ್ಳಲಾಯಿತು. ಅವರು ಕೆಲಸ ಕಾರ್ಯಗಳಿಗೆ ಅಡ್ಡಿಯನ್ನು ಉಂಟುಮಾಡುವರು ಎಂಬುದು ನಿಜವೆಂದು ನಾನು ಅಂಗೀಕರಿಸುವೆ. ಅವರನ್ನು ಅರೋವಿಲ್ಲೆಗಿಂತ ಬೇರೆ ಇನ್ನೆಲ್ಲಿಗಾದರೂ ಕಳುಹಿಸಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ಹೊರಗಿನ ಉಳಿದ ಪ್ರಪಂಚಕ್ಕೆ ಇದು ಅಷ್ಟೇನು ಉತ್ತಮವೆನಿಸುವದಿಲ್ಲ. ಆದರೂ ಪರವಾಗಿಲ್ಲ! ಸ್ವತಂತ್ರವಾದ ವಾತಾವರಣದಲ್ಲಿ ಅವರನ್ನು ಸಹಿಸಿಕೊಳ್ಳಬಹುದೇನೋ, ಪ್ರಾಯೋಗಿಕವಾಗಿ ವ್ಯಕ್ತಿಗತವಾಗಿ ಪ್ರತಿಯೊಬ್ಬರೊಂದಿಗೆ ಮಾತನಾಡಬೇಕು. ....

*ನೈರ್ಮಲ್ಯತೆಗೂ ಇದೇ ಅನ್ವಯಿಸುವದು.*

ಆ ವಿಷಯಗಳ ಜವಾಬ್ದಾರಿಯನ್ನು ಇನ್ನು ಯಾರಿಗೂ ವಹಿಸಲೂ ಸಾಧ್ಯವಿಲ್ಲವೇ?

*ಹೌದು, ಶ್ರೀಮಾತೆ, ನಮ್ಮ ಬಳಿ ಏನಿದೆಯೋ ಅದರಿಂದಲೇ ನಾವು ಆ ಕಾರ್ಯವನ್ನು ನಿರ್ವಹಿಸಬೇಕಾಗಿದೆ.*

ಹೌದು, ನಾವು ನಂಬಬಹುದಾದ ಜನರಿಂದ ವ್ಯವಸ್ಥಿತಗೊಳಿಸಬಹುದು. ಇತರರು ಅದರಿಂದ ಅತೃಪ್ತರಾದರೆ, ಅವರು ಹೊರಡಬಹುದು. ನಾನು ಏನು ಹೇಳುತ್ತಿರುವೆ ಎಂದು ನಿನಗೆ ಅರ್ಥವಾಗುತ್ತಿದೆಯೇ? ನೇರವಾಗಿ "ಹೊರಡಿ" ಎಂದು ಹೇಳುವ ಬದಲು (ಅನೇಕ ಕಾರಣಗಳಿಂದ ಅದು ಬಹಳ ಕಷ್ಟ). ಅವರು ಅಂಗೀಕರಿಸದ ಅಧಿಕಾರದ ಅಡಿಯಲ್ಲಿ ಅವರನ್ನು ಹೂಡಿದರೆ ಅವರು ಹೋಗಲೇ ಬೇಕಾಗುವದು. ಅವರು ಪ್ರಾರಂಭದಲ್ಲಿ ಪ್ರತಿಭಟಿಸುವರು, ಆದರೆ ನಾವು ದೃಢವಾಗಿ ಇರಬೇಕು. "ಹೀಗೆ ಮಾಡಿದರೆ ಸಮರ್ಪಕ".

ಇದನ್ನು ಮಾಡಬಹುದಾದ ಜನರನ್ನು ನಾವು ಹುಡುಕಬೇಕು. ಅವಶ್ಯಕವಾದ ಚಾರಿತ್ರ್ಯದ ಶಕ್ತಿಯನ್ನು ಹೊಂದಿರುವ ಜನರನ್ನು ಹುಡುಕಬೇಕು. ನಾವು ಅವರನ್ನು ಒಮ್ಮೆ ಹುಡುಕಿದೆವೆಂದರೆ ಅವರಿಗೆ ಅಧಿಕಾರವನ್ನು ನೀಡಬಹುದು. ಇತರರು ಅದನ್ನು ಒಪ್ಪದಿದ್ದರೆ ಅವರು ಹೊರಡಲೇಬೇಕು. ಅದು ಅಷ್ಟೇ. ಆದರೆ ಆಸ್ಥಾನವನ್ನು ಕ್ರಿಯಾಶೀಲವಾಗಿ ನಿರ್ವಹಿಸಬಲ್ಲ ವ್ಯಕ್ತಿ ಅಥವಾ ಜನರನ್ನು ನಾವು ಕಂಡುಹಿಡಿಯುವವರೆಗೂ ಈಗಾಗಲೇ ಇರುವ ಜನರನ್ನು ನಾವು ಹೊರಗೆ ಹಾಕಲು ಸಾಧ್ಯವಿಲ್ಲ.

**ಅರೋವಿಲ್ಲೆಯನ್ನು ಪ್ರವೇಶಿಸುವಿಕೆ ಮತ್ತು ಅಲ್ಲಿಂದ ಹೊರಗೆ ಹೋಗುವಿಕೆ**

*ಆದರೆ ಅರೋವಿಲ್ಲೆಗೆ ಪ್ರವೇಶ ನೀಡುವ ಸಮಸ್ಯೆಯಿದೆ.*

ಓ – ಅದೇನು?

*ಉದಾಹರಣೆಗೆ, ಪ್ರಾರಂಭದಿಂದಲೂ ಕೆಲವು ಜನರು ನಮಗೆ ಅನಪೇಕ್ಷಿತ–ವಾಗಿದ್ದರು. ಆದರೂ ಕೆಲವು ವೇಳೆ ಈ ಜನರು ಅಂಗೀಕೃತವಾಗುತ್ತಿದ್ದರು. ಇದಕ್ಕೇನಾದರೂ ಕಾರಣವಿದೆಯೇ?*

ಪರೀಕ್ಷಿಸಲು, ಓರೆ ಹಚ್ಚಲಿಕ್ಕಾಗಿ ಮಾತ್ರ, ಇನ್ನು ಯಾವ ಕಾರಣಕ್ಕಾಗಿಯೂ ಅಲ್ಲ.

*ಆದರೆ, ಶ್ರೀಮಾತೆ, ಪರೀಕ್ಷೆಗಾಗಿ ಒಮ್ಮೆ ಅವರು ಇಲ್ಲಿಗೆ ಬಂದರೆ, ಅವರನ್ನು ಯಾರೂ ಇನ್ನೆಂದೂ ಹೊರಗೆ ಕಳಿಸಲಾಗುವದಿಲ್ಲ!*

ಓ ಇಲ್ಲ, ಅವರು ಸಮರ್ಪಕವೆನಿಸದಿದ್ದರೆ, ಅವರನ್ನು ಕಳಿಸಿಬಿಡಬಹುದು. ಕೆಲವರು ಆಶ್ರಮದಲ್ಲಿ ಸಂಪೂರ್ಣವಾಗಿ ಅನಪೇಕ್ಷಿತವಾಗಿದ್ದರು. ಅವರನ್ನು ನಾನು ಆಶ್ರಮದಿಂದ ಕಳಿಸಲೇಬೇಕಾಗಿತ್ತು. ಅವರ ಬಗ್ಗೆ ನಾನು ಈಗ ಮಾತನಾಡುತ್ತಿರುವೆ. ಅವರು ಅರೋವಿಲ್ಲೆಗೆ ಹೋದರು. ಈ ಜನರು ಇಲ್ಲಿಂದ ಹೊರಟುಹೋಗಬೇಕು ಅಥವಾ ನಾನು ಹೇಳಿದ ಹಾಗೆ, ಇಲ್ಲಿ ಅವರಿಗೆ ಜಾಗವಿಲ್ಲ ಎಂಬ ಭಾವನೆಯು ಅವರಿಗೇ ಸ್ವತಃ ಅನಿಸಬೇಕು. ಆದರೆ ಪರೀಕ್ಷೆಗಾಗಿ ಅಂಗೀಕೃತವಾದ ಹೊಸಬರು ಅನಪೇಕ್ಷಿತರಾದರೆ ಅವರನ್ನು ಕಳಿಸಿಬಿಡಬೇಕು. ಬಹಳ ವರ್ಷಗಳಿಂದ ಇಲ್ಲಿ ಇರುವವರ ಬಗ್ಗೆ ನಾನು ಹೇಳಿದ್ದು. ಆದರೆ ಕೆಲವರು ಹೊಸಬರನ್ನು ಪರೀಕ್ಷೆಗಾಗಿ ತೆಗೆದುಕೊಳ್ಳಲಾಯಿತು. ಅಸಮರ್ಪಕವೆನಿಸಿದರೆ ಅವರು ಹೊರಡಬಹುದು. ಅವರು ಹೊರಡಲೇಬೇಕು. ಅವರನ್ನು ಹೊರಗೆ ಕಳಿಸಲು ನಾನೇ ನಿನಗೆ ಸಂಪೂರ್ಣ ಅಧಿಕಾರವನ್ನು ನೀಡುವೆ.

ಗಮನಿಸು, ಕೆಲವು ಜನರು ನನ್ನ ಬಳಿಗೆ ಬರುವರು. ನನಗೆ ಅವರ ಹೆಸರುಗಳು ಗೊತ್ತಿಲ್ಲ. ಅವರು ಏನು ಮಾಡುವರೆಂದು ನನಗೆ ತಿಳಿಯದು. ಅವರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಿಮ್ಮಿಬ್ಬರಲ್ಲಿ ಯಾರಾದರೊಬ್ಬರ ಮೂಲಕ ಪ್ರವೇಶವನ್ನು ಪಡೆಯಲು ಹೊಸ ಮನವಿ ಪತ್ರಗಳು ನನ್ನ ಬಳಿ ಬರಬೇಕು. ಆದರೆ ದುರದೃಷ್ಟವಶಾತ್, ಅನೇಕ ಜನರು ನನಗೆ ಪತ್ರವನ್ನು ಬರೆಯುವರು. ನನಗೆ ಗೊತ್ತಿಲ್ಲ. ನೋಡು, ನನಗೆ ಹೆಸರುಗಳು ನೆನಪಿರುವದಿಲ್ಲ. ಅವರು ಯಾರೆಂದು ಗೊತ್ತಾಗಿ, ಅವರು ಏನು ಮಾಡುತ್ತಾರೆ? ಮುಂತಾದ ವಿಷಯಗಳು ತಿಳಿದಾಗ ಮಾತ್ರ ನನಗೆ ನೆನಪಿರುತ್ತದೆ. ಆದರೆ ಈ ಜನರ ಬೆಲೆ ನಿನಗೆ ತಿಳಿದಿದ್ದರೆ ಇವರು ಹೀಗಿರುವರು ಅಥವಾ ಬೇರೆ ತರಹ ಎಂದು ನೀನು ನನಗೆ ಹೇಳಿದರೆ ನಾನು ನಿನ್ನನ್ನು ನಂಬುತ್ತೇನೆ. ಈ ವ್ಯಕ್ತಿ ಅನಪೇಕ್ಷಿತ ಎಂದು ನೀನು ನನಗೆ ಹೇಳಿದರೆ, ಸರಿ, ಆತನು ಹೊರಟು ಹೋಗಬೇಕು. ಆದರೆ ಮೊದಲೇ ನನಗೆ ತಿಳಿಸಿರಬೇಕು. ಏಕೆಂದರೆ ಅವರ ಮನವಿಯನ್ನು ನನಗೆ ತಲುಪಿಸಲು ಜನರು ಒಬ್ಬ ವ್ಯಕ್ತಿಯ ಬಳಿಗೆ ಹೋಗುವರು ನಂತರ ಇನ್ನೊಬ್ಬರ ಹತ್ತಿರ.

ನನಗೆ ಅದರ ಜಾಡು ತಿಳಿದಿರುವದಿಲ್ಲ. ನನಗೆ ಗೊತ್ತಿಲ್ಲ. ಇದರ ಚಿತ್ರಣವೀಗ ನಿನಗೆ ತಿಳಿದಿರಬೇಕು. ನಾನೊಂದು ಸಾಮಾನ್ಯ ಉತ್ತರವನ್ನು ನೀಡುವೆ. ಏಕೆಂದರೆ ಅದು ಬೇರೆ ಇನ್ಯಾರೋ ಎಂಬ ಭಾವನೆ ನನಗೆ ಇರುವದು. ಅವರು ಅದನ್ನು

ಬೇರೆಯೇ ತರಹ ಅರ್ಥ ಮಾಡಿಕೊಳ್ಳುವರು. ನನಗೆ ಜ್ಞಾಪಕವಿಲ್ಲ. ತತ್‌ಕ್ಷಣದಲ್ಲಿ ನಾನು ಹೆಸರುಗಳನ್ನು ಮರೆಯುವೆ. ನಾನು ಮರೆತು ಹೋಗಿರುವೆ. ಅದೆಲ್ಲಕ್ಕಿಂತ ಹೆಚ್ಚು ವಿಶಾಲವಾದುದರಿಂದ ನನ್ನ ತಲೆಯು ತುಂಬಿದೆ. ಅದು ನಿನಗೆ ಗೊತ್ತು. ಅರೋವಿಲ್ಲೆಯನ್ನು ಪ್ರವೇಶಿಸಲು ಬಯಸುವ ಹೊಸ ಮನವಿ ಪತ್ರಗಳನ್ನು ನನಗೆ ತಲುಪಿಸಲು ಒಬ್ಬ ವ್ಯಕ್ತಿ ಇರಬೇಕು. ಒಬ್ಬರು ಅಥವಾ ಇಬ್ಬರು (ಇಬ್ಬರಾದರೆ ಅತ್ಯುತ್ತಮ).

ಯಾರನ್ನು ನೀವು ಅನಪೇಕ್ಷಿತ ಎಂದು ತೀರ್ಮಾನಿಸುವಿರೋ ಅವರನ್ನು ಕಳಿಸಿಬಿಡಲು ನನ್ನ ಒಪ್ಪಿಗೆ ಇದೆ.

ಅವರಿಗೆ ನೀವು ಕೊನೆಯ ಪಕ್ಷ ಒಂದು ತಿಂಗಳ ಅವಕಾಶ ನೀಡಬೇಕು. ಕೊನೆಯ ಪಕ್ಷ ಒಂದು ತಿಂಗಳು ಆದರೆ ಸ್ವಲ್ಪ ಕುಟಿಲತೆ ಅಥವಾ ಅಪ್ರಾಮಾಣಿಕತೆಯನ್ನು ಅವರು ತೋರಿದರೂ, ಅಂದರೆ “ನಾನು ಇದನ್ನು ಮಾಡುವದಿಲ್ಲ”, “ನಾನು ಇದನ್ನು ಮಾಡುವೆ”, “ನಾನು ಅದನ್ನು ಮಾಡುವೆ” ... ಎಂದು ಹೇಳಿದರೆ ಅವರಿಗೆ “ಹೊರಡಿ” ಎಂದು ಹೇಳಿಬಿಡಿ. ನಿನಗೆ ಅರ್ಥವಾಯಿತೇ? “ನೀನು ನನ್ನನ್ನು ಕೇಳಲೂ ಬೇಕಾಗಿಲ್ಲ, ಅವರನ್ನು ಕಳಿಸಿಬಿಡಬಹುದು. ನನಗೆ ಹೀಗೆ ತಿಳಿಸಿದರಾಯಿತು.” “ಇಂತಹ ವ್ಯಕ್ತಿಯು ಸ್ವೀಕಾರಾರ್ಹವಲ್ಲದವನು ಎಂಬುದಾಗಿ” ನಾನು ನಿನಗೆ ಆ ಅಧಿಕಾರವನ್ನು ನೀಡುತ್ತಿದ್ದೇನೆ. ನಾನು ವಿರೋಧಿಸುವದಿಲ್ಲ. ಆದರೆ ನನಗೆ ತಿಳಿಸಿರಬೇಕು. ಏಕೆಂದರೆ ನನ್ನ ಬಳಿಗೆ ಅಸಂಖ್ಯಾತ ಜನರು ಬರುವರು.... ಅವರು ಕುಟಿಲತೆಯನ್ನು ಹೊಂದಿರುವರು. ನೀನು ಗಮನಿಸು; ಅವರ ಮನವಿಯನ್ನು ನನಗೆ ತಲುಪಿಸಲು ಬೇರೊಬ್ಬ ವ್ಯಕ್ತಿಯನ್ನು ಹುಡುಕುವರು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 4 ಏಪ್ರಿಲ್, 1972**

ಪ್ರತಿಯೊಬ್ಬರನ್ನು ಅಂಗೀಕರಿಸಲು ಪ್ರತಿಯಬ್ಬನು ಆತನ ಪ್ರಜ್ಞೆಯ ಅತ್ಯುನ್ನತ ಸ್ತರಕ್ಕೆ ಏರಬೇಕು; ಆ ಎತ್ತರಗಳಲ್ಲೇ ಸಾಮರಸ್ಯವು ಸೃಷ್ಟಿಯಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/205 – ಶ್ರೀಮಾತೆ**

**ಅಪೇಕ್ಷೆಗಳ ಜೀವನಕ್ಕಾಗಿ ಅಲ್ಲ ಸುಪ್ರ ಮಾನವತೆಗಾಗಿ ಸಿದ್ಧಪಡಿಸು**

ಉದ್ದೇಶಪೂರ್ವಕವಾಗಿ ಕಷ್ಟಗಳನ್ನು ಹೇರಲು ನಾನು ಬಯಸುವದಿಲ್ಲ. ನನಗೆ ಗೊತ್ತು, ನಮ್ಮನ್ನು ಉದ್ಧರಿಸಲು ಅವು ಬರುವವು. ಆದರೆ ತದ್ವಿರುದ್ಧವಾಗಿ ಅವುಗಳನ್ನು ಆಹ್ವಾನಿಸಬಾರದು. ಅವುಗಳನ್ನು ಕರೆಯಲೇಬಾರದು. ಸಂದರ್ಭಗಳನ್ನು ಎಷ್ಟು ಸುಲಭಸಾಧ್ಯವಾಗಿ ಮಾಡಬಹುದೋ ಅಷ್ಟು ಸುಲಭಗೊಳಿಸಬೇಕು. ಆದರೆ ಕಷ್ಟದಿಂದ ನಾವು ತಳಮಳಿಸಬಾರದು. ಅದೇ ಗಮನಿಸಬೇಕಾದ ವಿಷಯ. ಕಷ್ಟಗಳನ್ನು ಅಂಗೀಕರಿಸಬೇಕೆಂದು ನಾನು ಹೇಳುತ್ತಿಲ್ಲ. ಅವುಗಳನ್ನು ಆಹ್ವಾನಿಸಲೇ ಬೇಡ, ಬೇಡವೇ ಬೇಡ. ಜೀವನವೇ ಸಾಕಷ್ಟು ದುಸ್ತರವಾಗಿದೆ. ಆದರೆ ಕಷ್ಟವೊಂದು ಬಂದಾಗ, ನೀನು ಎದೆಗುಂದದೆ ಧೈರ್ಯವಾಗಿ ಎದುರಿಸಬೇಕು.

ಒಗ್ಗೂಡಿದ ಅಭೀಪ್ಸೆ .... ಸೌಂದರ್ಯ, ಸಾಮರಸ್ಯ, ನಿಯಮಬದ್ಧತೆಗಾಗಿ ನಾವು ಶ್ರಮಿಸಬೇಕು. ಇವೆಲ್ಲವೂ ತತ್‌ಕ್ಷಣದಲ್ಲಿ ಇಲ್ಲ. ನೀನು ಗಮನಿಸು, ನಾವು ವ್ಯವಸ್ಥಾಪಕರಾಗಿರುವದರಿಂದ, ಇತರರು ಏನು ಮಾಡಬೇಕೆಂದು ನಾವು ಅಪೇಕ್ಷಿಸುವೆವೋ ಅದಕ್ಕೆ ನಾವು ಉದಾಹರಣೆಯಾಗಿರಬೇಕಾದುದು ನಮ್ಮ ಕಾರ್ಯ. ಸ್ವಂತ ಪ್ರತಿಕ್ರಿಯೆಗಳಿಂದ ನಾವು ಮೇಲೇರಬೇಕು. ದೈವೀ ಸಂಕಲ್ಪದ ಲಯಬದ್ಧತೆಯಲ್ಲೇ ನಾವು ಮುನ್ನಡೆಯಬೇಕು. ದೈವೀ ಸಂಕಲ್ಪದ ಪಳಗಿದ ಉಪಕರಣವಾಗಿರಬೆಕು. ಯಾವುದೇ ವೈಯಕ್ತಿಕ ಪ್ರತಿಕ್ರಿಯೆಯಿಲ್ಲದೆ ನಾವು ಅವೈಯಕ್ತಿಕವಾಗಿರಬೇಕು. ನಾವು ಸಂಪೂರ್ಣವಾಗಿ ಪ್ರಾಮಾಣಿಕರಾಗಿರಬೆಕು. ಯಾವುದನ್ನು ಭಗವಂತನು ಅಪೇಕ್ಷಿಸುವನೋ ಅದಾಗಲಿ ಎಂಬ ಮನೋಭಾವನೆ ಇರಬೇಕು ಅಷ್ಟೇ. ನಾವು ಅದಾಗಬಹುದಾದರೆ ಆಗ ನಾವು ನೈಜವಾಗಿ ಹೇಗಿರಬೇಕೋ ಹಾಗಿರುವೆವು ಎಂದು ಹೇಳಬಹುದು ಮತ್ತು ನಾವು "ಅದು" ಆಗಬೇಕಾಗಿದೆ. ಉಳಿದಿದ್ದಕ್ಕೆ .... ಉಳಿದ ಎಲ್ಲದಕ್ಕೆ ನಾವು ನಮಗೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುವೆವು.

ಅದು ಸುಲಭಸಾಧ್ಯವಾದುದಲ್ಲ ಎಂಬುದು ನನಗೆ ಗೊತ್ತಿದೆ. ಆದರೆ ಸುಲಭವಾದ ಕಾರ್ಯಗಳನ್ನು ಮಾಡಲು ನಾವು ಇಲ್ಲಿ ಇಲ್ಲ. ಸುಲಭದ ಜೀವನವನ್ನು ಅಪೇಕ್ಷಿಸುವವರಿಗೆ ಇಡೀ ಪ್ರಪಂಚವೇ ಇದೆ. ಸುಲಭವಾದ ಜೀವನವನ್ನು ಸಾಗಿಸಲು ನಾನು ಅರೋವಿಲ್ಲೆಗೆ ಬಂದಿರುವೆ ಎಂದು ಜನರು ಭಾವಿಸಬಾರದು ಎಂಬುದು ನನ್ನ ಅಭಿಪ್ರಾಯ. ಪ್ರಗತಿಗಾಗಿ ಒಂದು ದೈತ್ಯ ಪ್ರಯತ್ನವನ್ನು ಮಾಡಲು ಬಂದಿರುವೆ ಎಂದುಕೊಳ್ಳಬೇಕು. ಅದೇ ಅದರ ಅರ್ಥ.

ಅದನ್ನು ಒಪ್ಪಿ ಹಾಗೆ ಮಾಡದಿದ್ದವರು ಹೊರಟು ಹೋಗಬೇಕು. ಅದೇ ಇಲ್ಲಿಯ ರೀತಿ ನೀತಿ. ಪ್ರಗತಿಯ ಅವಶ್ಯಕತೆಯು ಎಷ್ಟು ಬಲವಾಗಿರಬೇಕು, ಸತ್ತೆಯ ದೈವೀಕರಣವು ಎಷ್ಟು ತೀವ್ರವಾಗಿರಬೇಕು ಎಂದರೆ ಯಾರಿಗೆ ಹಾಗೆ ಮಾಡಲು ಸಾಧ್ಯವಿಲ್ಲವೋ (ಆ ಸಂಕಲ್ಪವಿಲ್ಲವೋ) ಅವರು ತಮ್ಮಂತೆ ತಾವೇ ಇಲ್ಲಿಂದ ಹೊರಟು ಹೋಗಲಿ ಎಂಬುದು ನನ್ನ ಅಪೇಕ್ಷೆ. "ಓ, ಇದು ನಾನು ಅಂದುಕೊಂಡಂತೆ ಇಲ್ಲ". ಆದರೆ ಈಗ ಹೇಗಿದೆ ಎಂದರೆ, ಸುಲಭ ಜೀವನವನ್ನು ಅಪೇಕ್ಷಿಸುವವರು ತಮಗೆ ಇಷ್ಟ ಬಂದಂತೆ ಮಾಡಬೇಕೆನ್ನುವವರು "ಅರೋವಿಲ್ಲೆಗೆ ನಾವು ಹೋಗೋಣ" ಎನ್ನುತ್ತಿರುವರು. ಆದರೆ ನಿಜಕ್ಕೂ ಇದಕ್ಕೆ ವ್ಯತಿರಿಕ್ತವಾಗಿ ಇರಬೇಕು. ಪ್ರಗತಿಗಾಗಿ ಮಾಡುವ ಸುಪ್ರಮಾನಸ ಪ್ರಯತ್ನ ಅರೋವಿಲ್ಲೆಗೆ ಬರುವದು ಎಂಬುದನ್ನು ಜನರು ಮನಗಾಣಬೇಕು.

ನಮ್ಮ ಮನೋಭಾವ ಮತ್ತು ಪ್ರಯತ್ನದ ಪ್ರಾಮಾಣಿಕತೆಯು ವ್ಯತ್ಯಾಸವನ್ನು ಉಂಟುಮಾಡುವದು. ಅಪ್ರಾಮಾಣಿಕತೆ ಮತ್ತು ಕುಟಿಲತೆಗೆ ಇಲ್ಲಿ ಜಾಗವಿಲ್ಲ ಎಂಬುದನ್ನು ಜನರ ಭಾವನೆಯಾಗಬೇಕು. ಅವೆಲ್ಲ ಇಲ್ಲಿ ಉಪಯೋಗ ರಹಿತ ಮಾನವತೆಯನ್ನು ದಾಟಿ ಮುಂದೆ ಹೋಗಲು ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟ ಜನರಿಗೆ ಮೋಸ ಮಾಡಲು ಸಾಧ್ಯವಿಲ್ಲ.

ಮನವೊಲಿಸಲು ಇರುವದು ಒಂದೇ ದಾರಿ "ಅದಾಗಿರುವದು".

ಆಗ ನಾವು ಬಲವನ್ನು ಹೊಂದಿರುವೆವು. ನಮ್ಮ ಕಡೆ ಎಲ್ಲಾ ದೈವೀ ಶಕ್ತಿಯು ಇರುವದು.

ಸುಪ್ರ ಮಾನವತೆಯನ್ನು ಸಿದ್ಧಪಡಿಸಲು ನಾವು ಇಲ್ಲಿ ಇರುವೆವು. ಅಪೇಕ್ಷೆಗಳು ಮತ್ತು ಸುಲಭ ಜೀವನದೊಳಗೆ ಪುನಃ ಬೀಳಲು ಅಲ್ಲ – ಹಾಗಾಗಬಾರದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 4 ಏಪ್ರಿಲ್, 1972**

**ನಿಯಮಗಳು, ಆಯ್ಕೆಗಳು ಮತ್ತು ಸ್ವ–ನಿಯಂತ್ರಣಗಳು**

ಅರೋವಿಲ್ಲೆಗೆ ನಿಯಮಗಳನ್ನು ರೂಪಿಸುವ ಅಪೇಕ್ಷೆ ನನಗಿರಲಿಲ್ಲ. ಆದರೆ ಕೆಲವು ಖಚಿತವಾದ ನಿಯಮಗಳನ್ನು ರಚಿಸಲೇ ಬೇಕಾಗಿದೆ. ಏಕೆಂದರೆ.... ಇಲ್ಲದಿದ್ದರೆ ತೊಂದರೆಗಳು ಉಂಟಾಗುವವು. ನನಗೇನು ಮಾಡಬೇಕೆಂದು ತಿಳಿಯುತ್ತಿಲ್ಲ.

ನಾನು ಏನು ಹೇಳಬೇಕೆಂದಿದ್ದೆನೋ ಅದು ಬಂದಿದೆ. ಅದು ಬಹಳ ಸುಲಭ. (ಶ್ರೀಮಾತೆಯವರು ಬರೆದಿರುವ ಒಂದು ಪತ್ರವನ್ನು ಕೈಗೆ ತೆಗೆದುಕೊಳ್ಳುವರು). ಅದು ಹೀಗಿದೆ: (ಅದು ಬಹಳ ಸಣ್ಣ ವಿಷಯಗಳ ಬಗ್ಗೆ).

"ಅರೋವಿಲ್ಲೆಯಲ್ಲಿ ಜೀವಿಸುವದು ಮತ್ತು ಮದ್ಯಪಾನಿಯಾಗುವದು ಇವೆರಡರ ನಡುವೆ ಒಂದನ್ನು ಆರಿಸಿಕೊಳ್ಳಬೇಕು." ಇವೆರಡು ಒಂದಕ್ಕೊಂದು ಹೊಂದಿಕೊಳ್ಳುವದಿಲ್ಲ.

*ಅದು ಮುಗ್ಧ ಮದ್ಯಪಾನವಲ್ಲ. ಘರ್ಷಣೆ ಮತ್ತು ಹುಚ್ಚುತನದ ಫಲವನ್ನು ನೀಡುವಂತಹದ್ದು ಎಂದೇ ನನ್ನ ಮಾತಿನ ಅರ್ಥ.*

ಆದ್ದರಿಂದ, ನಾವು ಈ ಹಾದಿಯಲ್ಲಿ ಮುಂದುವರೆದರೆ, ನಾವು ಇದನ್ನು ಸಹ ಹೇಳಬಹುದು (ಶ್ರೀಮಾತೆ ಇನ್ನೊಂದು ಪತ್ರವನ್ನು ತೆಗೆದುಕೊಳ್ಳುವರು):

ಸುಳ್ಳಿನಲ್ಲಿ ಜೀವಿಸುವದು ಮತ್ತು ಅರೋವಿಲ್ಲೆಯಲ್ಲಿ ಜೀವಿಸುವದು ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕು. ಏಕೆಂದರೆ ಇವೆರಡು ಒಂದಕ್ಕೊಂದು ವಿರೋಧವಾದವು.

ಇದು ಸತ್ಯವಾಗಲಿ!

*ಮರೆಯಲಿಕ್ಕಾಗಿ ಮದ್ಯಪಾನ ಮಾಡುವರು ಎಂದು ನಾವು ಹೇಳಬಹುದು; ಆದರೆ ಮರೆಯಲು ಯಾರೂ ಅರೋವಿಲ್ಲೆಗೆ ಬರುವದಿಲ್ಲ, ಅದಕ್ಕೆ ವಿರುದ್ಧವಾಗಿ ನೆನಪನ್ನು ವೃದ್ಧಿಸಲು ಅರೋವಿಲ್ಲೆಗೆ ಬರುವರು.*

ಹೌದು, ಅದನ್ನು ನಾವು ಆ ರೂಪದಲ್ಲಿಯೇ ಹೇಳಬೇಕು.

ಆದರೆ ಆಯ್ಕೆಯ ಬಗ್ಗೆ ಒತ್ತಾಯಿಸಿ ಹೇಳಬೇಕೆಂಬುದು ಮಾತ್ರವೇ ಉದ್ದೇಶ. ಅರೋವಿಲ್ಲೆಯಲ್ಲಿ ಜೀವಿಸುವುದು ಒಂದು ಆಯ್ಕೆ. ಅದೊಂದು ಆಯ್ಕೆ. ನೀನು ಅಂಗೀಕರಿಸುವ ಮನೋಭಾವ, ನೀನು ಮಾಡುವ ನಿರ್ಧಾರ. ಅರೋವಿಲ್ಲೆಯಲ್ಲಿ ಜೀವಿಸುವದು ಒಂದು ಆಯ್ಕೆ. ನೀನೊಂದು ನಿರ್ದಿಷ್ಟ ಜೀವನವನ್ನು ಆರಿಸಿಕೊಳ್ಳುವೆ. ನೀನು ಒಮ್ಮೆ ಒಂದನ್ನು ಆರಿಸಿಕೊಂಡೆಯೆಂದರೆ, ಇತರ ಕೆಲವು ಹೊಂದಾಣಿಕೆಯಾಗುವದಿಲ್ಲ. ಏನೇ ಆಗಲಿ, ಅರೋವಿಲ್ಲೆಯಲ್ಲಿ ಜೀವಿಸುವದು ಒಂದು ಕ್ರಿಯೆ, ನೀನು ಮಾಡುವ ನಿರ್ಧಾರ, ಒಂದು ಕಾರ್ಯ.

ಆದರೆ ಇದು (ಶ್ರೀಮಾತೆ ತನ್ನ ಬಳಿಯಿದ್ದ ಪತ್ರದತ್ತ ಕೈ ತೋರಿಸುವರು) ಮಾನವ ಜನಾಂಗದ ಈಗಿನ ಮನಸ್ಥಿತಿಗೆ ತೋರಿಸುತ್ತಿರುವ ಒಂದು ರಿಯಾಯಿತಿ.

ಏಕೆಂದರೆ, ನಿಜ ಹೇಳಬೇಕೆಂದರೆ, ಅರೋವಿಲ್ಲೆಯಲ್ಲಿ ವ್ಯಕ್ತಿಗತವಾದ ನಿದರ್ಶನಗಳು ಮಾತ್ರ ಇರಬೇಕು. ನಾನು ಹೇಳಬೇಕೆಂದಿರುವದು ಇದು: ಮದ್ಯಪಾನಿಗಳಾಗಿರುವ ಜನರು ಅರೋವಿಲ್ಲೆಯಲ್ಲಿ ಇರಬಹುದು.

ಆದರೆ ಅವರು ಅರೋವಿಲ್ಲೆಯಲ್ಲಿ ಜೀವಿಸಲು ಅರ್ಹರೂ ಆಗಿರಬಹುದು. ಆದುದರಿಂದ ನಾವು ಒಂದು ಸಾಮಾನ್ಯ ನಿಯಮವನ್ನು ರೂಪಿಸಲು ಸಾಧ್ಯವಿಲ್ಲ. ಆದರೆ ನಾವು ಒಂದು ಸಾಮಾನ್ಯ ನಿಯಮವನ್ನು ರೂಪಿಸದಿದ್ದರೆ, ಅಂಗೀಕೃತವಾಗಿರುವವರಿಗೆ ಯಾವ ಆಧಾರದ ಮೇಲೆ ನಾವು ತಿಳಿಸಿ ಹೇಳಲು ಸಾಧ್ಯ? ಅದೇ ಸಮಸ್ಯೆ: "ಇಲ್ಲ ನೀನು ಬದಲಾಗಬೇಕು. ನೀನು ಇದನ್ನು ನಿಲ್ಲಿಸು, ಇಲ್ಲವಾದರೆ ನೀನು ಅರೋವಿಲ್ಲೆಯಲ್ಲಿ ನೆಲೆಸಲು ಸಾಧ್ಯವಿಲ್ಲ."

*ಮದ್ಯಕ್ಕೆ ಅನ್ವಯಿಸುವದೇ ಮಾದಕ ದ್ರವ್ಯಗಳಿಗೂ ಸಹ ಅನ್ವಯಿಸುವದು. ಇತರ ಇನ್ನೂ ಅನೇಕ ವಿಷಯಗಳಿಗೂ ಸಹ ಅನ್ವಯಿಸುವದು.*

ಅನೇಕರು, ಹೌದು ಅನೇಕಾನೇಕರು. ಇದೊಂದು ಪ್ರಾರಂಭ ಮಾತ್ರವಾಗಿದೆ. ನಿನಗೆ ಅರ್ಥವಾಯಿತೇ? ನಾವು ಅವಶ್ಯಕತೆಯ ಎದುರು ನಿಲ್ಲಲೇ ಬೇಕಾಗುವದು ಎಂಬುದನ್ನು ಗಮನಿಸಿರುವೆ .... ಆಯ್ಕೆಯನ್ನು ಒತ್ತಾಯಪೂರ್ವಕವಾಗಿ ಹೇರಲೇಬೇಕು. ಅಂದರೆ, ಇದು ಅಥವಾ ಅದನ್ನು ನೀನು ಆಯ್ಕೆ ಮಾಡಲೇಬೇಕು ಎಂದು ಹೇಳಬೇಕು.

ಮಾದಕ ದ್ರವ್ಯಗಳಿಗೂ ಇದು ಅನ್ವಯಿಸುವದು. ಕೆಲವು ಜನರಿಗೆ ಪರಿಣಾಮಗಳು ಅಪಾಯಕರವಲ್ಲ ಮತ್ತು ತೊಂದರೆಯನ್ನು ಉಂಟುಮಾಡುವದಿಲ್ಲ.

ಅಂತಿಮವಾಗಿ, ಪ್ರತಿಯೊಬ್ಬರ ಸ್ವಾತಂತ್ರ್ಯವೂ ಪರಿಮಿತವಾಗಿದೆ. ಎಷ್ಟರಮಟ್ಟಿಗೆ ಎಂದರೆ ಅದು ಇತರರ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಾರದು ಅಷ್ಟೇ. ಅದೇ ಪರಿಮಿತಿ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 6 ಏಪ್ರಿಲ್, 1968**

## ಪ್ರಜ್ಞೆ, ಪ್ರಗತಿ ಮತ್ತು ಆರೋಹಣ

*ಆದುದರಿಂದ ಅತ್ಯಂತ ಸರಳ ಸೂತ್ರವೇನೆಂದರೆ ಅರೋವಿಲ್ಲೆಯಲ್ಲಿನ ಜೀವನಕ್ಕೆ ಸ್ವ–ಮರೆವು ತದ್ವಿರುದ್ಧವಾದುದು. ಮರೆಯಲು ಅಥವಾ ತನ್ನನ್ನು ತಾನು ಮರೆಯಲು ಅರೋವಿಲ್ಲೆಗೆ ಯಾರು ಹೋಗಬಾರದು. ಯಾವುದೇ ರೀತಿಯ ಸ್ವ–ಮರೆವು, ಅದು ಯಾವುದೇ ರೂಪದಲ್ಲಿರಬಹುದು.*

ಆಹ್, ಆದರೆ ಸ್ವ–ಮರೆವು, “ನೀನು ಅದನ್ನು ನೀತಿಯ ಆಧಾರದ ಮೇಲೆ ತೆಗೆದುಕೊಂಡರೆ (ಶ್ರೀಮಾತೆ ನಗುವರು).”

*ಓರ್ವನ ನೈಜ ಆತ್ಮವನ್ನು ಮರೆಯುವದು.*

(ಶ್ರೀಮಾತೆ ನಗುವರು) ಯಾರಾದರೂ ಸೂತ್ರೀಕರಿಸಲು ಪ್ರಾರಂಭಿಸಿದರೆಂದರೆ .... ಅಥವಾ ಹೀಗೆ ಹೇಳಿದರೆ ಹೆಚ್ಚು ಸಮರ್ಪಕ.

“ಅರೋವಿಲ್ಲೆಯ ಜೀವನಕ್ಕೆ ಅಜ್ಞಾನದಲ್ಲಿಯ ಯಾವುದೇ ಅನ್ವೇಷಣೆಯು ವ್ಯತಿರಿಕ್ತವಾದುದು.”

ಅದು ಹೆಚ್ಚು ಸಾರ್ವತ್ರಿಕ: ನಾವು ಇನ್ನೂ ಹೆಚ್ಚು ಸಾಮಾನ್ಯೀಕರಣ ಗೊಳಿಸಬೇಕೆಂದರೆ ನಾವು ಹೀಗೆ ಹೇಳಬಹುದು.

ಅರೋವಿಲ್ಲೆಯ ಜೀವನಕ್ಕೆ ಯಾವುದೇ ಹಿಂಬದಿಯ ಚಲನೆ ಅಥವಾ ಅವರೋಹಣವು ವ್ಯತಿರಿಕ್ತ. ಏಕೆಂದರೆ ಅದು ಭವಿಷ್ಯತ್ಕಾಲದ ಕಡೆಗಿನ ಆರೋಹಣದ ಜೀವನ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 6 ಏಪ್ರಿಲ್, 1968**

*ದೈವೀ ಮಾತೆ, ಮಾನವನ ಆಧ್ಯಾತ್ಮಿಕತೆಯ ಅಂಗೀಕಾರವನ್ನು ಅರೋವಿಲ್ಲೆಯ ಕಟ್ಟಡವು ಎಷ್ಟರಮಟ್ಟಿಗೆ ಅವಲಂಬಿಸಿದೆ.*

ಆಧ್ಯಾತ್ಮಿಕತೆ ಮತ್ತು ಲೌಕಿಕ ಜೀವನದ ನಡುವಿನ ವಿರೋಧ, ಎರಡರ ನಡುವಿನ ವಿಭಜನೆ ನನಗೆ ಅರ್ಥಭರಿತ ಎನಿಸುವದೇ ಇಲ್ಲ. ಏಕೆಂದರೆ, ನೈಜವಾಗಿ ಜೀವನ ಮತ್ತು ಆತ್ಮ ಎರಡೂ ಒಂದೇ. ಅತ್ಯುನ್ನತ ಆತ್ಮವು ಅಭಿವ್ಯಕ್ತವಾಗುವದು ಭೌತಿಕ ಕಾರ್ಯದಿಂದ ಮತ್ತು ಅದರೊಳಗೆಯೇ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 20 ಏಪ್ರಿಲ್, 1968**

### ನಿಯಮಬದ್ಧತೆ ಮತ್ತು ವ್ಯವಸ್ಥೆ

ನಾವು ಏನನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾಗಿದೆಯೋ ಆ ಗುರಿಯ ನೋಟವನ್ನು ಎಂದೂ ಮರೆಯದೆ ಮಾಡಬೇಕಾಗಿರುವದನ್ನು ನೆರವೇರಿಸುವದೇ ಬಹಳ ಮುಖ್ಯವಾದ ಕಾರ್ಯ.

*

*ಒಂದು ಕಾರ್ಯ ವಿಧಾನ, ವ್ಯವಸ್ಥೆ ಮತ್ತು ಹೊಂದಾಣಿಕೆಯು (ಸಮನ್ವಯತೆ) ಅರೋವಿಲ್ಲೆಯ ನಿರ್ಮಾಣಕ್ಕೆ ಅವಶ್ಯಕವೇ?*

ನಿಯಮಬದ್ಧತೆಯು ಜೀವನಕ್ಕೆ ಅವಶ್ಯಕ. ಜೀವಿಸಲು, ತನ್ನ ಎಲ್ಲಾ ಕ್ರಿಯೆಗಳಲ್ಲಿ, ಒಂದು ಕಠಿಣ ನಿಯಮಬದ್ಧತೆಗೆ ಸ್ವತಃ ದೇಹವೇ ಒಳಗಾಗಿದೆ. ಈ ನಿಯಮಬದ್ಧತೆಗೆ ಯಾವುದೇ ವಿರಾಮ ನೀಡಿದರೂ ಖಾಯಿಲೆಯು ಉಂಟಾಗುವದು.

*ಕಾರ್ಯದ ಒಂದು ನಿಯಮಬದ್ಧತೆ ವ್ಯವಸ್ಥೆ. ಆದರೆ ಅರೋವಿಲ್ಲೆಯಲ್ಲಿ ಅನಿಯಂತ್ರಿತ ಮತ್ತು ಕೃತಕ ವ್ಯವಸ್ಥೆಗಳನ್ನು ದಾಟಿ ಮುಂದೆ ಸಾಗಬೇಕೆಂಬ ಅಭೀಪ್ಸೆಯು ಹೆಚ್ಚಾಗಿ ಇದೆ.*

ಭವಿಷ್ಯತ್ಕಾಲದ ಸತ್ಯವನ್ನು ಪ್ರಕಟಗೊಳಿಸಲು ಉನ್ನತ ಪ್ರಜ್ಞೆಯ ಕಾರ್ಯವನ್ನು ಅಭಿವ್ಯಕ್ತಗೊಳಿಸುವ ವ್ಯವಸ್ಥೆಯನ್ನು ನಾವು ಅಪೇಕ್ಷಿಸುವೆವು.

*ಈ ಸಾಮೂಹಿಕ ಪ್ರಜ್ಞೆಯು ಗೋಚರಿಸಿ ನಾವು ಜೊತೆಗೂಡಿ ಸಮರ್ಪಕವಾಗಿ ಕೆಲಸ ಮಾಡುವ ಹಾಗೆ ಆಗುವವರೆಗೂ ಏನು ಮಾಡಬೇಕು?*

ಸಾಮೂಹಿಕ ನಿಯಮಬದ್ಧತೆಗೆ ಶರಣಾಗಿರುವ ಮತ್ತು ಅತ್ಯಧಿಕವಾಗಿ ಜಾಗೃತವಾಗಿರುವ ಕೇಂದ್ರದ ಸುತ್ತಲೂ ಗುಂಪು ಗೂಡಿರುವ ಶ್ರೇಣಿ ವ್ಯವಸ್ಥೆಯ ಸಂಸ್ಥೆ.

*ಪರಿಣಾಮಕಾರಿ ಎಂದೆನಿಸಿರುವ ಸಾಂಸ್ಥಿಕ ವಿಧಾನಗಳನ್ನು ನಾವು ಉಪಯೋಗಿಸಬೇಕೇ? ಆದರೆ ಅವು ಯಂತ್ರಗಳ ಬಳಕೆ ಮತ್ತು ಮಾನವ ತರ್ಕವನ್ನು ಅವಲಂಬಿಸಿದೆ.*

ಇದೊಂದು ತಾತ್ಕಾಲಿಕ ವ್ಯವಸ್ಥೆ. ನಾವು ಇದನ್ನು ತಾತ್ಕಾಲಿಕವಾಗಿ ಮಾತ್ರ ಉಪಯೋಗಿಸಬೇಕು.

*ವ್ಯಕ್ತಿಗತ ನೇತೃತ್ವವು ಸ್ವತಂತ್ರವಾಗಿ ಪ್ರಕಟವಾಗಲು ಅವಕಾಶ ಕೊಡಬೇಕೇ? ಮತ್ತು ಸ್ವಂತ ಕ್ರಿಯೆಯ ಹಿಂದೆ ಚಲನಾತ್ಮಕ ಶಕ್ತಿಯಾಗಿ ಸ್ಫೂರ್ತಿ ಮತ್ತು ಅಂತರ್ ದರ್ಶನಗಳು ಇರಬೇಕೇ? ಆಸಕ್ತ ಪಕ್ಷವು ಸಮರ್ಪಕವಲ್ಲ ಎಂದು ತೀರ್ಮಾನಿಸಿದ ಎಲ್ಲಾ ಚಿಂತನೆಗಳನ್ನು ತ್ಯಜಿಸಿಬಿಡಬೇಕೇ?*

ಇದು ಕಾರ್ಯಗತವಾಗಲು, ಅರೋವಿಲ್ಲೆಯ ಎಲ್ಲಾ ಕಾರ್ಯಕರ್ತರು ದೈವೀ ಸತ್ಯದ ಪ್ರಜ್ಞಾಭರಿತ ಯೋಗಿಗಳಾಗಿರಬೇಕು.

*ಅಪೇಕ್ಷಿಸಿ, ಹೂಡಿ, ಪ್ರಯತ್ನಿಸಬಹುದಾದ ಒಂದು ಸಾಮಾನ್ಯ ಸಂಸ್ಥೆಯ ಕಾಲವು ಈಗ ಕೂಡಿಬಂದಿದೆಯೇ? ಅಥವಾ ಸಮರ್ಪಕ ಮನೋಭಾವ ಮತ್ತು ಜನರಿಗಾಗಿ ಕಾಯಬೇಕೇ?*

ಕಾರ್ಯವು ನೆರವೇರಲು ಒಂದು ಸಂಸ್ಥೆಯು ಅವಶ್ಯಕ – ಅದರ ಸ್ವತಃ ಆ ಸಂಸ್ಥೆಯು ನಮ್ಯತೆಯನ್ನು ಹೊಂದಿದ್ದು ಪ್ರಗತಿಪರವಾಗಿರಬೇಕು.

ಪರಿಹಾರವು ಕಾಯುವದೇ ಆಗಿದ್ದಲ್ಲಿ, ಸಾಂಸ್ಥಿಕ ತತ್ವಗಳನ್ನು ವಿವರಿಸುವದು ಅಗತ್ಯವೇ? ಅದರಿಂದ ನಿಯಂತ್ರಿಸಲಾಗದ ಅವ್ಯವಸ್ಥೆಯನ್ನು ತಡೆಹಿಡಿಯ–ಬಹುದಲ್ಲವೇ?

ಸಮಗ್ರ ಸತ್ಸಂಕಲ್ಪವನ್ನು ಅರೋವಿಲ್ಲೆಯಲ್ಲಿ ಜೀವಿಸುತ್ತಾ ಕೆಲಸ ಮಾಡಲು ಅಪೇಕ್ಷಿಸುವವರೆಲ್ಲರೂ ಹೊಂದಿರಬೇಕು. ಸತ್ಯವನ್ನು ಅರಿತು ಅದಕ್ಕೆ ಶರಣಾಗುವ ನಿರಂತರ ಅಭೀಪ್ಸೆಯನ್ನು ಅವರು ಹೊಂದಿರಬೇಕು. ಕಾರ್ಯದಲ್ಲಿಯ ಅಡೆತಡೆಗಳನ್ನು ಎದುರಿಸಬಲ್ಲ ನಮ್ಯತೆ ಮತ್ತು ಅಂತಿಮ ಸತ್ಯದ ಕಡೆ ಮುನ್ನಡೆಸುವ ಪ್ರಗತಿಗೆ ಅವಶ್ಯಕವಾದ ನಿರಂತರ ಸಂಕಲ್ಪವನ್ನು ಹೊಂದಿರಬೇಕು.

ಮತ್ತು, ಅಂತಿಮವಾಗಿ ಒಂದು ಆದೇಶದ ನುಡಿ: ಇತರರು ಮಾಡುವ ತಪ್ಪುಗಳಿಗಿಂತಲೂ ನೀನು ಮಾಡುವ ತಪ್ಪುಗಳ ಕಡೆ ಹೆಚ್ಚು ಗಮನವಿರಲಿ. ತನ್ನ ಸ್ವಂತ ಪರಿಪೂರ್ಣತೆಯನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಿ ಪ್ರತಿಯೊಬ್ಬರೂ ಕೆಲಸ ಮಾಡಿದರೆ, ತನ್ನಂತೆ ತಾನೇ ಇಡೀ ಪರಿಪಕ್ವ ಪರಿಪೂರ್ಣತೆಯು ಸಿದ್ಧಿಸುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/198–200**

**ಅರೋವಿಲ್ಲೆ ಮತ್ತು ಮತಗಳು**

ಮಾನವ ಪ್ರಜ್ಞೆಯ ಅಭಿವೃದ್ಧಿಯಲ್ಲಿ ಚಾರಿತ್ರಿಕ ಅಧ್ಯಯನದ ಭಾಗವಾಗಿದೆ ಮತಗಳ ವಸ್ತುನಿಷ್ಠ ಅಧ್ಯಯನ. ಮತಗಳು ಮಾನವ ಕುಲದ ಚರಿತ್ರೆಯ ಒಂದು ಭಾಗವನ್ನೇ ಸೃಷ್ಟಿಸುವದು. ಮತಗಳನ್ನು ಅರೋವಿಲ್ಲೆಯಲ್ಲಿ ಆ ರೀತಿಯ ಅವಕುಂಠನದೊಂದಿಗೆ ಅಧ್ಯಯನ ಮಾಡಲಾಗುವದು. ಅನುಸರಿಸಬೇಕಾದ ಅಥವಾ ಅನುಸರಿಸಬಾರದಾಗಿರುವ ನಂಬಿಕೆಗಳಾಗಿ ಅಲ್ಲ.

ಆದರೆ ಮಾನವ ಪ್ರಜ್ಞೆಯ ಅಭಿವೃದ್ಧಿಯಲ್ಲಿನ ಪ್ರಕ್ರಿಯೆಯ ಭಾಗವಾಗಿ ಆಗಬೇಕು. ಇದು ಮಾನವನನ್ನು ಆತನ ಉನ್ನತ ಆಂತರಿಕ ದರ್ಶನದ ಕಡೆ ಮುನ್ನಡೆಸಬೇಕು.

ಅನನ್ಯ ಸತ್ಯವೆಂದು ತೋರ್ಪಡಿಸಲಾಗುವ ವಿಶ್ವದ ಅಥವಾ ಪ್ರಪಂಚದ ಯಾವುದೇ ಪರಿಕಲ್ಪನೆಗೆ ನಾವು ಮತ ಎಂಬ ಹೆಸರನ್ನು ನೀಡುವೆವು. ಅದರಲ್ಲಿ ಸಂಪೂರ್ಣ ನಂಬಿಕೆ ಇರಬೇಕು. ಏಕೆಂದರೆ ಸಾಮಾನ್ಯವಾಗಿ ಈ ಸತ್ಯವು ಒಂದು ಅಂತರ್ ದರ್ಶನದ ಫಲ ಎಂದು ಹೇಳಲಾಗುವದು.

ಭಗವಂತನ ಅಸ್ತಿತ್ವವನ್ನು ಬಹು ಪಾಲು ಮತಗಳು ಅಂಗೀಕರಿಸುವವು. ಆತನಿಗೆ ವಿಧೇಯನಾಗಿರಲು ಅನುಸರಿಸಬೇಕಾದ ನಿಯಮಗಳನ್ನು ಸಹ ಒಪ್ಪುವವು. ಆದರೆ ಕೆಲವು ದೈವ ರಹಿತ ಮತಗಳು ಸಹ ಇವೆ. ಉದಾಹರಣೆಗೆ ಸಾಮಾಜಿಕ–ರಾಜಕೀಯ ಸಂಸ್ಥೆಗಳು. ಅವು ಸ್ವತಃ ತಮಗೇನೇ ವಿಧೇಯರಾಗಿರಬೇಕೆಂದು ಪ್ರತಿಪಾದಿಸುವವು.

ತನ್ನದೇ ಆದ ರೀತಿಯಲ್ಲಿ ಸ್ವತಂತ್ರವಾಗಿ ಸತ್ಯವನ್ನು ಅರಸುವದು ಮತ್ತು ಸ್ವತಂತ್ರವಾಗಿ ಅದನ್ನು ಸಮೀಪಿಸುವದು ಮಾನವನ ಹಕ್ಕು. ಆದರೆ ಪ್ರತಿಯೊಬ್ಬನ ಅನ್ವೇಷಣೆಯು ಆತನಿಗೆ ಮಾತ್ರ ಒಳಿತನ್ನು ಉಂಟು ಮಾಡುವದು. ಅದನ್ನು ಇತರರ ಮೇಲೆ ಒತ್ತಾಯ ಪೂರ್ವಕವಾಗಿ ಹೇರಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/206–07**

## ನೈಜ ಆರೋವಿಲ್ಲಿನ ಪ್ರಜೆ

1. ಮೊದಲ ಅವಶ್ಯಕತೆ: ಸಾಮಾಜಿಕ, ನೈತಿಕ, ಸಾಂಸ್ಕೃತಿಕ, ಜನಾಂಗೀಯ ಮತ್ತು ವಂಶ ಪಾರಂಪರ್ಯದ ಗೋಚರತೆಗಳ ಹಿಂದೆ ತಾನು ನಿಜವಾಗಿ ಏನಾಗಿರುವೆ ಎಂಬುದರ ಆಂತರಿಕ ಅನ್ವೇಷಣೆ.

ಕೇಂದ್ರ ಬಿಂದುವಿನಲ್ಲಿ ಸ್ವತಂತ್ರ, ವಿಶಾಲ ಮತ್ತು ಅರಿತ ಒಂದು ಸತ್ತೆಯಿದೆ. ಅದು ನಮ್ಮ ಅನ್ವೇಷಣೆಗಾಗಿ ಕಾಯುತ್ತಿದೆ. ಅದು ನಮ್ಮ ಸತ್ತೆಯ ಕ್ರಿಯಾಶೀಲ ಕೇಂದ್ರವಾಗಬೇಕು ಮತ್ತು ಅರೋವಿಲ್ಲೆಯಲ್ಲಿನ ನಮ್ಮ ಜೀವನದ ಕೇಂದ್ರವೂ ಸಹ ಆಗಬೇಕಾಗಿದೆ.

2. ನೈತಿಕ ಮತ್ತು ಸಾಮಾಜಿಕ ನಡವಳಿಕೆಗಳಿಂದ ಸ್ವತಂತ್ರವಾಗಿರಲು ಅರೋವಿಲ್ಲೆಯಲ್ಲಿ ಜೀವಿಸುವದು ಉತ್ತಮ. ಆದರೆ ಈ ಸ್ವಾತಂತ್ರ್ಯವು ಅಹಂಕಾರದ ಹೊಸ ಗುಲಾಮತನ, ಅಪೇಕ್ಷೆಗಳು ಮತ್ತು ಧ್ಯೇಯಗಳನ್ನು ಹೊಂದಿರಬಾರದು.

ಒಬ್ಬನ ಆಪೇಕ್ಷೆಗಳನ್ನು ಪೂರೈಸುವಿಕೆಯು ಆಂತರಿಕ ಅನ್ವೇಷಣೆಯ ಹಾದಿಯನ್ನು ಮುಚ್ಚಿಬಿಡುವದು. ಅದನ್ನು ಪರಿಪೂರ್ಣ ನಿರಾಸಕ್ತ ಭಾವದ (ಉದಾಸೀನದ) ಪಾರದರ್ಶಕತೆ ಮತ್ತು ಶಾಂತಿಯಲ್ಲಿ ಮಾತ್ರ ಸಾಧಿಸಬಹುದು.

3. ವ್ಯಕ್ತಿಗತ ಒಡೆತನ ಅಥವಾ ಸ್ವತ್ತು ಎಂಬ ಭಾವವನ್ನು ಅರೋವಿಲಿಯನ್ ತೊರೆಯಬೇಕು. ಭೌತಿಕ ಜಗತ್ತಿನಲ್ಲಿಯ ನಮ್ಮ ಜೀವನಕ್ಕೆ ನಾವು ಯಾವ ಸ್ಥಾನವನ್ನು ಅಲಂಕರಿಸುವೆವು ಎಂಬುದಕ್ಕೆ ಅನುಗುಣವಾಗಿ ಜೀವನ ಮತ್ತು ಕಾರ್ಯಗಳಿಗೆ ಅನಿವಾರ್ಯವಾದುದು ನಮಗೆ ದೊರಕುವದು.

ನಮ್ಮ ಆಂತರಿಕ ಸತ್ತೆಯ ಸಂಪರ್ಕದಲ್ಲಿ ಹೆಚ್ಚು ಹೆಚ್ಚಾಗಿ ಇದ್ದಷ್ಟೂ ನಮಗೆ ಅಧಿಕ ನಿರ್ದಿಷ್ಟ ಕೌಶಲ್ಯವನ್ನು ನೀಡಲಾಗುವದು.

4. ಕಾರ್ಯ, ದೈಹಿಕ ಕಾರ್ಯವೂ ಸಹ, ಆಂತರಿಕ ಅನ್ವೇಷಣೆಗೆ ಬೇಕೇ ಬೇಕು. ಒಬ್ಬನು ಕೆಲಸ ಮಾಡದಿದ್ದರೆ, ತನ್ನ ಪ್ರಜ್ಞೆಯನ್ನು ಭೌತಿಕ ವಸ್ತುವಿನಲ್ಲಿ ಹೂಡದಿದ್ದರೆ, ಎರಡನೆಯದು ಅಭಿವೃದ್ಧಿಯಾಗುವದೇ ಇಲ್ಲ. (ಒಬ್ಬನ ದೇಹದ ಮೂಲಕ ಪ್ರಜ್ಞೆಗೆ ಸ್ವಲ್ಪ ಭೌತ ವಸ್ತುವನ್ನು ವ್ಯವಸ್ಥಿತಗೊಳಿಸಲು ಅನುವು ಮಾಡಿಕೊಟ್ಟರೆ ಬಹಳ ಒಳ್ಳೆಯದು.) ಒಬ್ಬನ ಸುತ್ತಲೂ ನಿಯಮಬದ್ಧತೆಯನ್ನು ಸ್ಥಿರಪಡಿಸುವಿಕೆಯು ಆತನ ಆಂತರ್ಯದ ನಿಯಮಬದ್ಧತೆಯನ್ನು ತರಲು ನೆರವಾಗುವದು.

ಬಾಹ್ಯ ಮತ್ತು ಕೃತಕ ನಿಯಮಗಳಿಗೆ ಅನುಗುಣವಾಗಿ ಯಾರೂ ತಪ್ಪು ಜೀವನವನ್ನು ವ್ಯವಸ್ಥಿತಗೊಳಿಸಬಾರದು. ಆದರೆ ವ್ಯವಸ್ಥಿತವಾದ ಆಂತರಿಕ ಪ್ರಜ್ಞೆಗೆ ಅನುಗುಣವಾಗಿ ಮಾಡಬೇಕು. ಏಕೆಂದರೆ ಉನ್ನತ ಪ್ರಜ್ಞೆಯ ಹತೋಟಿಗೆ ಜೀವನವನ್ನು ಒಳಪಡಿಸದೆ ಹಾಗೇ ಬದುಕನ್ನು ಸಾಗಿಸಿದರೆ ಅದು ಚಂಚಲ–ವಾಗುವದು ಮತ್ತು ವ್ಯಕ್ತಪಡಿಸಲಾಗದಂತಾಗುವದು. ಅದು ಒಬ್ಬನ ಕಾಲವನ್ನು ವ್ಯರ್ಥಗೊಳಿಸಿದಂತಾಗುವದು. ಅಂದರೆ ಪ್ರಜ್ಞಾಭರಿತ ಉಪಯೋಗವಿಲ್ಲದೆ ಭೌತಿಕ ವಸ್ತುವು ಹಾಗೇ ಉಳಿದುಬಿಡುವದು.

5. ನವ ಜೀವಿಗಳ ಆಗಮನಕ್ಕೆ ಇಡೀ ಭೂಮಿಯು ತನ್ನನ್ನು ತಾನು ಸಿದ್ಧಪಡಿಸಿಕೊಳ್ಳಬೇಕು. ಈ ಆಗಮನವನ್ನು ಶೀಘ್ರಗೊಳಿಸಲು ಅರೋವಿಲ್ಲೆಯು ಪ್ರಜ್ಞಾಯುಕ್ತವಾಗಿ ಕೆಲಸ ಮಾಡಬಯಸುತ್ತದೆ.

6. ಈ ನವ ಜೀವಿಗಳು ಯಾವುವೆಂದು ಸ್ವಲ್ಪ ಸ್ವಲ್ಪವಾಗಿ ನಮ್ಮ ಅರಿವಿಗೆ ಬರುವದು. ಈ ನಡುವೆ ನಾವು ಮಾಡಬೇಕಾದ ಅತ್ಯುತ್ತಮ ಕೆಲಸವೆಂದರೆ ದೈವತ್ವಕ್ಕೆ ಸಂಪೂರ್ಣವಾಗಿ ಸಮರ್ಪಿಸುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/207–08 – ಶ್ರೀಮಾತೆ**

**ಸ್ವಪ್ನದ ದೈವ**

ಎಲ್ಲಾ ರಾಷ್ಟ್ರೀಯ ವೈರತ್ವ, ಎಲ್ಲಾ ಸಾಮಾಜಿಕ ಅಧಿವೇಶನಗಳು ಎಲ್ಲಾ ವ್ಯತಿರಿಕ್ತ ನೈತಿಕತೆಗಳು ಮತ್ತು ವಿರೋಧಿ ಮತಗಳಿಂದ ದೂರವಾದ ವಸತಿ ಸೌಕರ್ಯದಲ್ಲಿ ಜೀವಿಸಲು ಜನರಿಗೆ ಒಂದು ಜಾಗ ಭೂಮಿಯ ಮೇಲೆ ಅವಶ್ಯಕ. ಆ ಜಾಗವು ಎಲ್ಲಾ ಪುರಾತನ ಗುಲಾಮಗಿರಿಯಿಂದ ಸ್ವತಂತ್ರವಾಗಿರಬೆಕು. ಅಭಿವ್ಯಕ್ತವಾಗಲು ಬಯಸುತ್ತಿರುವ ದೈವೀ ಪ್ರಜ್ಞೆಯ ಅನ್ವೇಷಣೆ ಮತ್ತು ಅಭ್ಯಾಸಕ್ಕೆ ಜನರು ಸಂಪೂರ್ಣವಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳುವಂತಿರಬೇಕು ಆ ಸ್ಥಳ.

"ಅರೋವಿಲ್ಲೆ ಆ ಜಾಗವಾಗಬೇಕೆಂದು ಬಯಸುತ್ತಿದೆ. ನಾಳೆಯ ಸತ್ಯವನ್ನು ಜೀವಿಸುವ ಅಭೀಪ್ಸೆಯನ್ನು ಹೊಂದಿರುವ ಎಲ್ಲರಿಗೂ ಅದು ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿದೆ."

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 17 ಸೆಪ್ಟೆಂಬರ್, 1969**

ದೈವತ್ವದೊಂದಿಗಿನ ಸಮ್ಮಿಲನದಿಂದ ಪಡೆದುದು ಮಾತ್ರವೇ ನೈಜ ಸ್ವಾತಂತ್ರ್ಯ.

ಪ್ರತಿಯೊಬ್ಬನೂ ಅಹಂಕಾರವನ್ನು ಜಯಿಸುವದರಿಂದ ಮಾತ್ರವೇ ದೈವತ್ವದೊಂದಿಗೆ ಸಮ್ಮಿಳಿತವಾಗಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/215 – ಶ್ರೀಮಾತೆ**

# ಅರೋವಿಲ್ಲೆಯ ಕಾರ್ಯ

**– ಅನು: ಪ್ರವೀಣ ಪಾಟೀಲ, ಮಾನವಿ**

**ಸತ್ಯದ ಒಂದು ಬೀಜ**

ನನಗೊಂದು ದೈವ ಪ್ರೇರಣೆಯಾಯಿತು, ಅಂದರೆ ಅದು ಒಂದು ದರ್ಶನದ ರೀತಿಯಲ್ಲಿ ಇತ್ತು.

ಬಹಿರಂಗದ ಕಾರಣಗಳಿಂದ ನೋಡುವದಾದರೆ, ನಾನು ಪಶ್ಚಾತ್ತಾಪದ ಸ್ಥಿತಿಯಿಂದ ನೋಡುತ್ತಿದ್ದೆ. ಅಲ್ಲಿ ಎಲ್ಲ ಆ ರಾಷ್ಟ್ರಗಳು ಅದೆಷ್ಟು ಶೋಚನೀಯ ಸ್ಥೀತಿಯಲ್ಲಿ ಸಿಲುಕಿಕೊಂಡಿವೆ, ಇದು ನಿಜವಾಗಿಯೂ ಪೃಥ್ವಿಯ ಅಪಾಯಕಾರೀ ಮತ್ತು ನೋವಿನ ಸಂಗತಿಯಾಗಿದೆ. ಅಲ್ಲಿ ಒಂದು ತರಹದ ಎಲ್ಲವನ್ನು ಆವರಿಸಿದ ದರ್ಶನವು ತೋರಿಸಿದ್ದೇನೆಂದರೆ– ಹೇಗೆ ರಾಷ್ಟ್ರಗಳು (ಇಡೀ ಮಾನವ ಕುಲವನ್ನು ರಾಷ್ಟ್ರವೆಂದು ಪರಿಗಣಿಸಿ) ಹೆಚ್ಚುತ್ತಿರುವ ‘ಅಸತ್ಯದ’ ರೀತಿಯಲ್ಲಿ ಕಾರ್ಯ ಮಾಡಿವೆ ಮತ್ತು ಮಾಡುತ್ತಿವೆ; ಮತ್ತು ತಮ್ಮೆಲ್ಲಾ ಕ್ರಿಯಾಶೀಲ ಶಕ್ತಿಯನ್ನು ಉಪಯೋಗಿಸಿ ವಿನಾಶದ ಉಪಕರಣಗಳನ್ನು ತಯಾರಿಸಿದ್ದವು, ಇದರ ಹಿಂದೆ ಅವರು ಮನದಲ್ಲಿ, ಬಾಲಿಶ ತಿಳುವಳಿಕೆಯಿಂದ, ವಿನಾಶವು ಬಹಳಷ್ಟು ಭಯಾನಕವಾಗಿದ್ದರೆ, ಅದನ್ನರಿತು ಮುಂದೆ ಯಾರೂ ಈ ರೀತಿ ಮಾಡುವದಿಲ್ಲ ಎಂದುಕೊಂಡಿದ್ದರು. ಅದು ಅವರಿಗೆ ಗೊತ್ತಿಲ್ಲ (ಅವರಿಗೆ ತಿಳಿದಿರಬೇಕಾಗಿತ್ತು, ಆದರೆ ತಿಳಿದಿಲ್ಲ) ಎಲ್ಲಾ ವಸ್ತುಗಳಲ್ಲಿ ಒಂದು ಪ್ರಜ್ಞೆ ಇರುತ್ತದೆ ಮತ್ತು ಪ್ರಕಟಗೊಳ್ಳುವ ಸಾಮರ್ಥ್ಯವೂ ಇರುತ್ತದೆ. ಎಲ್ಲಾ ವಿನಾಶದ ಉಪಕರಣಗಳು ತಮ್ಮನ್ನು ಉಪಯೋಗಿಸಿ ಎಂದು ಒತ್ತಡ ಹಾಕುತ್ತಿರುತ್ತವೆ, ಮಾನವರು ಅದನ್ನು ಉಪಯೋಗಿಸಲು ಒಪ್ಪದಿದ್ದರೂ, ಅವರಿಗಿಂತ ಮಿಗಿಲಾದ ಶಕ್ತಿಯು ಉಪಯೋಗಿ ಎಂದು ದೂಡುತ್ತಿರುತ್ತದೆ.

ಆಗ, ಇದೆಲ್ಲವನ್ನು ನೋಡಿ, ದುರಂತದ ಸನ್ನಿಹಿತೆಯನ್ನು ಅರಿತು, ಈ ತಪ್ಪನ್ನು ನಿವಾರಿಸಲು ಒಂದು ಉನ್ನತವಾದುದನ್ನು ಇಳಿಸಿ ತರಬೇಕೆನ್ನುವ ಕರೆ ಅಥವಾ ಅಭೀಪ್ಸೆಯು ಒಡಮೂಡಿತು, ಮತ್ತು ಅದು ಒಂದು ಉತ್ತರದ ರೂಪದಲ್ಲಿ ಬಂದಿತು...., ನಾನು ಅದನ್ನು ಕಿವಿಯಾರೆ ಕೇಳಿದ್ದೇನೆಂದು ಹೇಳಲಾಗುವದಿಲ್ಲ. ಆದರೆ ಅದು ಸ್ಪಷ್ಟವಾಗಿದೆ, ಬಹಳಷ್ಟು ಶಕ್ತಿಶಾಲಿಯಾಗಿದೆ ಮತ್ತು ನಿಖರವಾಗಿದ್ದುದರಿಂದ ಅದನ್ನು ಅಲ್ಲಗಳೆಯಲು ಆಗಲಿಲ್ಲ. ಅದನ್ನು ಶಬ್ದದಲ್ಲಿ ಅನುವಾದಿಸಿದರೆ ಹೇಗೆ ಹೇಳಬಹುದು, “ಈ ಕಾರಣದಿಂದಲೇ ನೀನು ಅರೋವಿಲ್ಲೆಯನ್ನು ಸೃಷ್ಟಿಸಿರುವೆ”.

ಜೊತೆಗೆ ಈ ಸ್ಪಷ್ಟ ದರ್ಶನದಿಂದಲೇ ಅರೋವಿಲ್ಲೆಯು ಒಂದು ಶಕ್ತಿಯ ಮತ್ತು ಸೃಷ್ಟಿಯ ಕೇಂದ್ರವಾಗಿದೆ, ಹಾಗು (ಅದನ್ನು ನಾನು ಹೇಗೆ ವಿವರಿಸಲಿ?), ಇದು ಒಂದು ಸತ್ಯದ ಬೀಜ ಮತ್ತು ಅದು ಮೊಳೆತು, ಬೆಳವಣಿಗೆಯಾಗುತ್ತಿರುವ ಚಲನೆಯೇ ದುರಂತವನ್ನು ಸೃಷ್ಟಿಸುವ ಶಸ್ತ್ರಾಸ್ತ್ರಗಳ ವಿರುದ್ಧವಾದ ಪ್ರತಿಕ್ರಿಯೆಯಾಗಿರುತ್ತದೆ.

ಇದು ನನಗೆ ಒಂದು ಆಸಕ್ತಿಯುತವಾಗಿ ಕಂಡಿತು. ಏಕೆಂದರೆ, ಅರೋವಿಲ್ಲೆಯ ಹುಟ್ಟು ಯಾವುದೇ ವಿಚಾರದಿಂದ ಬಂದುದಲ್ಲ; ಯಾವಾಗಲೂ ಇರುವಂತೆಯೇ ಅದು ಕೇವಲ "ಶಕ್ತಿಯ" ಕಾರ್ಯವಾಗಿದೆ. ಒಂದು ರೀತಿಯಲ್ಲಿ ಪರಿಪೂರ್ಣ ಪ್ರಕಟಣೆಯಾಗಿದೆ. ಅದು ಎಷ್ಟು ಶಕ್ತಿಶಾಲಿಯಾಗಿತ್ತೆಂದರೆ (ಅರೋವಿಲ್ಲೆಯೆ ಎಂಬ ವಿಚಾರವು ಶ್ರೀಮಾತೆಯವರಿಗೆ ಆಮೇಲೆ ಪ್ರಕಟವಾದಾಗ) ನಾನು ಜನರಿಗೆ ಹೀಗೆ ಹೇಳುತ್ತಿದ್ದೆ, 'ನಿಮಗೆ ಅದರಲ್ಲಿ ನಂಬಿಕೆ ಇರದಿದ್ದರೂ ಎಲ್ಲಾ ಪರಿಸರವು ಅನಾನುಕೂಲಕರವಾಗಿದ್ದರೂ, ನನಗೆ ಗೊತ್ತಿದೆ, ಅರೋವಿಲ್ಲೆ ಖಚಿತವಾಗಿಯೂ ಆಗುತ್ತದೆ. ಅದು ನೂರು ವರ್ಷಗಳಾದರೂ ಆಗಬಹುದು, ಸಾವಿರ ವರ್ಷಗಳಾದರೂ ಆಗಬಹುದು, ನನಗೆ ಗೊತ್ತಿಲ್ಲ, ಆದರೆ ಅರೋವಿಲ್ಲೆ ಮಾತ್ರ ಇದ್ದೇ ಇರುತ್ತದೆ, ಇದ್ದೇ ಇರುತ್ತದೆ. ಏಕೆಂದರೆ ಇದು ನಿಯತಿಲಿಖಿತವಾಗಿದೆ'. ಹಾಗಾಗಿ ಯಾವುದೇ ವಿಚಾರ ಮಾಡದೇ 'ಆದೇಶ'ಕ್ಕೆ ವಿಧೇಯರಾಗಿ ಇದನ್ನು ಮಾಡಲಾಗಿದೆ. ಮತ್ತು ಯಾವಾಗ ಇದನ್ನು ನನಗೆ ಹೇಳಲಾಯಿತೊ (ನಾನು ಹೇಳುತ್ತಿರುವದೇನೆಂದರೆ 'ಇದು ನನಗೆ ಹೇಳಲಾಯಿತು' ಅದರೆ, ನಾನು ಹೇಳುತ್ತಿರುವದು ನಿನಗೆ ಅರ್ಥವಾಯಿತು ಎನಿಸುತ್ತಿದೆ) ಅದು ನನಗೆ ತಿಳಿಸಲೆಂದೇ ಇಚ್ಛಿಸಿತ್ತು. ಅದೇನೆಂದರೆ, – 'ಅರೋವಿಲ್ಲೆಯನ್ನು ನೀನು ಏಕೆ ಮಾಡಿರುವೆ' ಅದರ ಬಗೆಗೆ ನಿನಗೆ ಅರಿವಿಲ್ಲ, ಆದರೆ ಅದಕ್ಕಾಗಿಯೇ.. ಏಕೆಂದರೆ, ಅದು ದುರಂತದ ಸನ್ನಿಹಿತತೆಯ ವಿರುದ್ಧದ ಒಂದು ಅಂತಿಮ ಭರವಸೆಯಾಗಿತ್ತು, ಈ ಸೃಷ್ಟಿಗಾಗಿ ಎಲ್ಲಾ ರಾಷ್ಟ್ರಗಳಲ್ಲಿ ಸ್ವಲ್ಪ ಅಭಿರುಚಿಯು ಮೂಡಿತೆಂದರೆ, ಸ್ವಲ್ಪ ಸ್ವಲ್ಪವಾಗಿ ಅದು ಶಕ್ತಿಯನ್ನು ಪಡೆದುಕೊಂಡು ಯಾವ ತಪ್ಪನ್ನು ಮಾಡಿದ್ದಾರೆಯೋ ಅದರ ವಿರುದ್ಧವಾಗಿಯೆ ಪ್ರತಿಕ್ರಿಯಿಸುತ್ತಿರುತ್ತದೆ.

*

**ಒಂದು ಅಗೋಚರ ಕ್ರಿಯೆ**

ನನಗೆ ಅದನ್ನು ತೋರಿಸಲ್ಪಟ್ಟಾಗ, ಸಹಜವಾಗಿ, ನಾನು ಅದನ್ನು ಅರ್ಥೈಸಿಕೊಂಡೆ; ಅರೋವಿಲ್ಲೆಯ ಸೃಷ್ಟಿಯು ಯಾವ ರೀತಿಯಲ್ಲಿ ಅಗೋಚರವಾಗಿ ಕ್ರಿಯೆಯನ್ನು

ಮಾಡುತ್ತಿದೆ ಎನ್ನುವದನ್ನು ಅರಿತೆ, ಅದೆಂತಹ ಕ್ರಿಯೆ, ಅದು ಭೌತಿಕ ಅಥವಾ ಬಹಿರಂಗದ ಕ್ರಿಯೆಯಲ್ಲ; ಅದು ಅಗೋಚರದಲ್ಲಿ ನಡೆಯುವ ಕ್ರಿಯೆ, ಮತ್ತು ಆವಾಗಿನಿಂದ ಎಲ್ಲಾ ರಾಷ್ಟ್ರಗಳಿಗೆ ಇದನ್ನು ಅವರೆಲ್ಲಾ ಯಾರಿಂದಲೂ ನಾವು ಕಲಿಯುವ ಅವಶ್ಯಕತೆ ಇಲ್ಲವೆಂದು ತಿಳಿದಿದ್ದಾರೆ. ಆದ್ದರಿಂದ ಅಂತರ್ಮುಖಿಯಾಗಿ ಅಗೋಚರದಲ್ಲಿ ಈ ಕಾರ್ಯವು ನಡೆದಿದೆ.

ಇದು ಹೊಸದಾಗಿ ನಡೆದ ಘಟನೆ, ಎರಡು ಅಥವಾ ಮೂರು ದಿನದ ಹಿಂದಿನ ಮಾತು, ಇದನ್ನು ಬಹಳ ಸ್ಪಷ್ಟವಾಗಿಯೇ 'ಹೇಳಲಾಗಿತ್ತು', ಅದರ ಅರ್ಥ ನೋಡಿದರೆ, ಅದನ್ನು ಹೀಗೆ ತೋರಿಸಿದರು (ದೃಶ್ಯವನ್ನು ನೋಟಕ್ಕೆ ತೋರಿಸಲಾಗಿತ್ತು ಎನ್ನುವ ಸಂಕೇತದಲ್ಲಿ), ಆವಾಗಿನಿಂದ ಅರೋವಿಲ್ಲೆಯ ಮೇಲೆ ನನ್ನ ಅಭಿರುಚಿ ಹೆಚ್ಚಾಗಿದೆ. ಏಕೆಂದರೆ ನನ್ನ ತಿಳುವಳಿಕೆಯ ಪ್ರಕಾರ ಇದು ಕೇವಲ ಆದರ್ಶದ ಸೃಷ್ಟಿಯಲ್ಲ, ಆದರೆ ಪ್ರಾಯೋಗಿಕ ವಿದ್ಯಮಾನವಾಗಿದೆ, ಒಂದು ಭರವಸೆಯಲ್ಲ, ಬದಲಿಗೆ ಒಂದು ಸಂಕಲ್ಪವಾಗಿದೆ. ಇದು ಒಂದು ಕೆಟ್ಟ ಮಾನಸಿಕ ನ್ಯೂನ್ಯತೆಯ ಪರಿಣಾಮವನ್ನು – ಅಂದರೆ, ಅಪಾಯದಿಂದ ಕಾಪಾಡುವಂತೆ – ಕಾಪಾಡುತ್ತದೆ! ಸಮಭಾರ ಮಾಡಲು ಪ್ರಯತ್ನಿಸುತ್ತದೆ. ಭಯವು ಅಪಾಯವನ್ನು ಆಕರ್ಷಿಸುತ್ತದೆಯೇ ವಿನಾ ಕಾಪಾಡುವದಿಲ್ಲ. ಹೀಗಾಗಿ ಎಲ್ಲ ರಾಷ್ಟ್ರಗಳು ಮತ್ತು ಸರ್ಕಾರಗಳು ಆ ದುರಂತದ ಭಯದಿಂದ ಒಂದಾದ ಮೇಲೊಂದು ತಪ್ಪುಗಳನ್ನು ಎಸಗುತ್ತಿವೆ.

ಇದೆಲ್ಲವನ್ನು ಹೇಳುವದರ ಹಿಂದೆ ಇರುವ ಸರಳ ಉದ್ದೇಶವೇನೆಂದರೆ, ಅರೋವಿಲ್ಲೆಯ ಕಾರ್ಯದಲ್ಲಿ ಎಲ್ಲ ರಾಷ್ಟ್ರಗಳೂ ಸಹಕರಿಸಿದರೆ, ಕೇವಲ ಸಾಧಾರಣ ಮಟ್ಟದದಲ್ಲಿಯಾದರೂ ಸಹಕರಿಸಿದರೆ, (ಫ್ರೆಂಚ್ ಸರಕಾರವು ಈ ಕಾರ್ಯಕ್ಕೆ ಹಣವನ್ನು ದಾನ ಮಾಡಿದೆ) ಅದು ಅವರಿಗೆ ಒಳ್ಳೆಯದನ್ನು ಮಾಡುತ್ತದೆ, ಅದು ಇನ್ನೂ ಒಳ್ಳೆಯದನ್ನು ಮಾಡಬಹುದು. ಅವರು ಮಾಡುವ ತೋರಿಕೆಯ ಕಾರ್ಯಕ್ಕಿಂತಲೂ ಅವರಿಗೆ ಹೆಚ್ಚಿನ ಒಳಿತೇ ಆಗುತ್ತಿದೆ.

*

**ರಾಷ್ಟ್ರಗಳ ಸಹಕಾರ**

*ನೀವು ದುರಂತದ ಸನ್ನಿಹಿತದ ಬಗ್ಗೆ ಮಾತನಾಡುತ್ತ ಇರುವಿರಿ, ಈ ರೀತಿಯಲ್ಲಿ ವಿಚಾರಿಸುತ್ತಿದ್ದರೆ, ಅರೋವಿಲ್ಲೆಯು ಕಾರ್ಯರೂಪದಲ್ಲಿ ಬರಲು ಇನ್ನೂ ಬಹಳಷ್ಟು ದಿನಗಳು ಬೇಕಾಗಬಹುದಲ್ಲವೇ?*

ಇಲ್ಲ! ಇಲ್ಲ! ನಾನು ಮಾತನಾಡುತ್ತಿರುವದು ರಾಷ್ಟ್ರಗಳು ಏನಾದರೊಂದನ್ನು ಸೃಷ್ಟಿಸಲು ಬೇಕಾಗಿರುವ ಸಹಕಾರವಾಗಿದೆ. ಇದು ಅರೋವಿಲ್ಲೆ ಸಂಪೂರ್ಣವಾದ ಮೇಲೆ ಅಲ್ಲ; ರಾಷ್ಟ್ರ ರಾಷ್ಟ್ರಗಳು ಸೇರಿ ಏನಾದರೊಂದನ್ನು ಸೃಷ್ಟಿಸಲು ಸಹಕರಿಸ–ಬೇಕಾಗಿದೆ. ಏನಾದರೊಂದನ್ನು ಸೃಷ್ಟಿಸುವ ತಳಹದಿಯು 'ಸತ್ಯ'ವಾಗಿರಬೇಕೆ ವಿನಾ 'ಅಸತ್ಯದ' ಪೈಪೋಟಿಯಲ್ಲಿ ಅಲ್ಲ; ಅರೋವಿಲ್ಲೆ ಯಾವಾಗ ಸಿದ್ಧವಾಗುತ್ತದೆ ಎನ್ನುವ ಪ್ರಶ್ನೆ ಇದಲ್ಲ, ಅದು ಸಿದ್ಧವಾದಾಗ, ಬೇರೆ ನಗರಗಳಂತೆ ಇದು ಒಂದು ನಗರವಾಗಿರುತ್ತದೆ ಮತ್ತು 'ಸತ್ಯ'ದ ಸಾಮರ್ಥ್ಯದ ಮೇಲೆ ಅದರ ಶಕ್ತಿಯು ಅವಲಂಬಿತವಾಗಿರುತ್ತದೆ. ಆದರೆ ಅದು.. ಅದು.. ಕಾದು ನೋಡಬೇಕಾಗಿದೆ.

ಇಲ್ಲಿ ಮುಖ್ಯವಾಗಿರುವ ವಿಷಯವೆಂದರೆ, ಎಲ್ಲರೂ ಸೇರಿಕೊಂಡು ಸತ್ಯದ ತಳಹದಿಯ ಮೇಲೆ ಏನಾದರೊಂದನ್ನು ರೂಪಿಸಿಕೊಳ್ಳಬೇಕಿದೆ. ಅವರಿಗೆ ಜೊತೆಗೂಡಿ ಅಭಿರುಚಿ ಯಾವುದರಲ್ಲಿ ಇದೆಯೆಂದರೆ, ಅಸತ್ಯದ ತಳಹದಿಯ ಮೇಲೆ ವಿನಾಶಕಾರಿ ಶಕ್ತಿಯನ್ನು ಸೃಷ್ಟಿ ಮಾಡುವದಲ್ಲಿರುತ್ತದೆ, ಏಕೆಂದರೆ ಜೊತೆಗೂಡಿದರೂ ಒಬ್ಬರನೊಬ್ಬರು ಇಷ್ಟಪಡುವದಿಲ್ಲ. ಆದರೆ ಅರೋವಿಲ್ಲೆ ಅಂದರೆ ಅಂತಹ ಶಕ್ತಿಯನ್ನು ಸ್ವಲ್ಪವಾದರೂ ಬೇರೆಡೆಗೆ ತಿರುಗಿಸುವ ಮೂಲಕ ಸುಸಂಗತ ಸೃಷ್ಟಿಯನ್ನು ಮಾಡುವದಾಗಿದೆ. (ಇಲ್ಲಿ ಪ್ರಮಾಣ ಮುಖ್ಯವಲ್ಲ, ಗುಣಮಟ್ಟ ಮುಖ್ಯವಾಗಿದೆ) ಇದು ನಿಜವಾಗಿಯೂ ಒಂದು ಭರವಸೆಯಾಗಿದೆ. ಭರವಸೆಯ ಮೇಲೆಯೇ ಸ್ಥಾಪಿತವಾಗಿದೆ. ಏನಾದರೊಂದನ್ನು ಮಾಡಬೇಕಿದೆ. ಅದು ಸಾಮರಸ್ಯದ ಪ್ರಾರಂಭಿಕ ಕಾರ್ಯವಾಗಬೇಕಾಗಿದೆ. ಇಲ್ಲ, ಇಲ್ಲ, ಇದೂ 'ಈಗಲೇ ಆಗುತ್ತಿದೆ', ಹೌದು ಈಗಲೇ ಆಗುತ್ತಿದೆ. ಇದರ ಪ್ರಸರಣದ ಶಕ್ತಿಯು ಶ್ರೇಷ್ಠವಾಗಿದೆ. ರವಾನೆಯ ಕೇಂದ್ರ(ಶ್ರೀಮಾತೆ)ಕಿಂತಲೂ ಪ್ರಸರಣೆಯ ಪಾಲು ಹೆಚ್ಚಾಗಿದೆ. ಇದನ್ನು ವಿಶ್ವದ ಸ್ಥರದಲ್ಲಿ ಅಳತೆ ಮಾಡಿದಾಗ, ರವಾನೆಯ ಕೇಂದ್ರವೂ ಯಾರಿಗೂ ತಿಳಿಯದಾಗಿದೆ, ಜೊತೆಗೆ ಬಹಳಷ್ಟು ಅಸ್ತಿತ್ವದಲ್ಲಿ ಇಲ್ಲ ಎಂದು ಹೇಳಬಹುದು. ಆದರೆ ಕೇಂದ್ರವು ವಿಕಿರಣ ಸೂಸುವಿಕೆ ಮತ್ತು ಪ್ರಸರಣದ ಶಕ್ತಿಯ ಹೋಲಿಕೆಗೆ ಮೀರಿದ ವಿಷಯವಾಗಿದೆ. ಇದು ತುಂಬ ಗಮನಾರ್ಹವಾಗಿರುವ ವಿಷಯವಾಗಿದೆ. ಅರೋವಿಲ್ಲೆಗೆ ಎಲ್ಲೆಡೆಯಿಂದಲೂ ಪ್ರತಿಕ್ರಿಯೆ ಇದೆ. ಹೊಸ ಆಫ್ರಿಕಾ, ಫ್ರಾನ್ಸ್, ರಷ್ಯಾ, ಕೆನಡಾದಿಂದ ಪ್ರತಿಕ್ರಿಯೆಯನ್ನು ಕಾಣಬಹುದು. ಇಟಲಿಯಲ್ಲಿಯೂ..... ಒಟ್ಟಿನಲ್ಲಿ ಎಲ್ಲಾ ಕಡೆಗೆ ಎಲ್ಲಾ ಕಡೆಗೂ ಇದೆ. ಜೊತೆಗೆ ಇದು ಕೇವಲ ವ್ಯಕ್ತಿಗಳಲ್ಲಿ ಮಾತ್ರವಲ್ಲ; ಸಮೂಹಗಳು, ಪ್ರವೃತ್ತಿಗಳಲ್ಲಿ, ಚಳುವಳಿಗಳಲ್ಲಿ, ಜೊತೆಗೆ ಸರಕಾರಗಳಲ್ಲಿಯೂ ಕಾಣಬಹುದು.

ಯಾವುದು ಹಠಮಾರಿತನದಿಂದ ಕೂಡಿದೆ ಎಂದು ಸಾಬೀತಗಿದೆಯೋ (ಅದನ್ನು ನೋಡಿ ಆಶ್ಚರ್ಯವಾಗಿದೆಯೋ) ಅದೇ ವಿಶ್ವ ಸಂಸ್ಥೆ! ಈ ಎಲ್ಲಾ ಜನರೂ ಗತಕಾಲದಲ್ಲಿ ಇರುವವರು... ಓ! ಅವರಿನ್ನೂ ಜಡವಾದ, ಧರ್ಮ ವಿರೋಧಿ ಚಳುವಳಿಗಳಿಂದ ಹೊರಗೆ ಬಂದಿಲ್ಲ. ಮತ್ತು ಅವರು ಅರೋವಿಲ್ಲೆಯ ಕರಪತ್ರವನ್ನು ನೋಡಿ ಅವಹೇಳನಕಾರಿ ಪ್ರತಿಕ್ರಿಯೆಯನ್ನು ಮಾಡಿದವರು; ಅರೋವಿಲ್ಲೆ ಇನ್ನೂ 'ಅತೀಂದ್ರಿಯ' ಮತ್ತು 'ಧಾರ್ಮಿಕ' ಮನೋಭಾವದವರೆಂದು ನಂಬಿದ್ದರು. ಇದೆಂತಹ ಸುಂದರ ವಿಡಂಬನೆಯಾಗಿದೆ.!

ಇದರ ಜೊತೆಗೇ, ಬಾಹ್ಯದ ದೃಷ್ಟಿಯಿಂದ ನೋಡಿದಾಗಲೂ, ಭಾರತ ಮತ್ತು ಪಾಕಿಸ್ತಾನದ ಮಧ್ಯದ ಕದನವು ಸ್ಪಷ್ಟವಾಗಿ (ಇದನ್ನು ನಾನು ಹೇಗೆ ಹೇಳಲಿ? ನನ್ನ ಮೂಲಕ ಆಂಗ್ಲ ಶಬ್ದಗಳು ಬರುತ್ತಿವೆ). "ಆರಂಭಿಸು ಮತ್ತು ಮುನ್ನುಗ್ಗು" 'ಸತ್ಯ'ದ ಶಕ್ತಿಗಳ ಪ್ರಚೋದನೆಯಿಂದ ಚಾಲನೆಯಲ್ಲಿ ಬಂದಿಹುದು, ಇದರಿಂದ 'ಏಷ್ಯಾ ಒಕ್ಕೂಟ'ದ ನಿರ್ಮಾಣವಾಗಿ ಚೈನ ಮತ್ತು ಅದರ ಚಲನವಲನಗಳನ್ನು ಸಮಭಾರ–ಗೊಳಿಸಲು ಸಹಾಯಕವಾಗುವದು. ಈ ಒಕ್ಕೂಟವು ಪಾಕಿಸ್ತಾನ, ನೇಪಾಳ, ಬರ್ಮಾ (ಮ್ಯಾನಮಾರ) ಮತ್ತು ಸಿಲೋನ ದೇಶಗಳನ್ನು ಒಳಗೊಂಡಿರುತ್ತದೆ. ಈ ಒಕ್ಕೂಟವು ಮತ್ತು ಅದರಲ್ಲಿರುವ ಪ್ರತಿ ರಾಷ್ಟ್ರವು ಸ್ವಂತಿಕೆಯಿಂದ ಕೂಡಿದ ಬೆಳವಣಿಗೆಯನ್ನು ಹೊಂದಿದ್ದು, ಪರಿಪೂರ್ಣವಾಗಿ ಸ್ವತಂತ್ರವಾಗಿದ್ದು, ಯಾವುದೇ ರಾಷ್ಟ್ರವೂ ಒಕ್ಕೂಟದ ಪ್ರತಿಯೊಂದೂ ದೇಶದ ಜೊತೆಗೆ ಬೆಳವಣಿಗೆ, ಪರಿಪೂರ್ಣ ಸ್ವಾತಂತ್ರ್ಯ ಹೊಂದಿದ್ದು, ಆದರೆ ಅವು ಶಾಂತಿಗಾಗಿ ಒಂದೆ ಸಾಮಾನ್ಯ ಅಭೀಪ್ಸೆಯನ್ನು ಹೊಂದಿರಬೇಕು. ಮತ್ತು ವಿನಾಶಿ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ. ಇದು ಬಹುತೇಕವಾಗಿ ಸ್ಪಷ್ಟವಾಗಿದೆ. ಇದು ಸಂಕಲ್ಪದ ಇಚ್ಛೆಯಾಗಿತ್ತು. ಆದರೆ ವಿಶ್ವ ಸಂಸ್ಥೆಯ ಹಸ್ತಕ್ಷೇಪದಿಂದ ಎಲ್ಲವೂ ನಿಂತು ಹೋಯಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 21 ಸೆಪ್ಟೆಂಬರ್, 1966**

## ವ್ಯತಿರಿಕ್ತವಾದ ಬ್ಯಾಬೆಲ್ ಗೋಪುರ

ನನ್ನ ಮುಂದೆ ಹಲವು ರೀತಿಯ ವಿನೋದಮಯ ಸಂಗತಿಗಳು ಹಾದು ಹೋಗುತ್ತಿರುವದನ್ನು ನೋಡುತ್ತಲಿದ್ದೇನೆ; ಇದೀಗ ಈ ಪ್ರತಿಫಲನ 'ಓಹ್, ಬ್ಯಾಬೆಲ್ ಗೋಪುರವು ವ್ಯತಿರಿಕ್ತವಾಗಿದೆ, ಹಿಮ್ಮುಖವಾಗಿದೆ. ಶ್ರೀಮಾತೆಯವರು ನಗುತ್ತಲೇ, ಇದು ಆಸಕ್ತಿದಾಯಕವಾಗಿದೆ! ಅವರು ಜೊತೆಗೂಡಿದ್ದರು ಮತ್ತು ಕಟ್ಟುವದಲ್ಲಿ

ಜೊತೆಗೂಡಿದ್ದರು, ಆದರೆ ವಿಭಜನೆಯಾದರು. ಆದರೆ ಈಗ ಅವರು ಕಟ್ಟುದಕ್ಕಾಗಿ ಐಕ್ಯತೆಯಿಂದ ಜೊತೆಗೂಡಿದ್ದಾರೆ, ಇದೇ ಇದೇ 'ಬ್ಯಾಬೆಲ್ ಗೋಪುರ'.. ಹಿಮ್ಮುಖವಾಗಿದೆ!

ಈಗ ನನಗೆ ಗೊತ್ತಾಗುತ್ತಿದೆ, ನನಗೆ ನೆನಪಿಗೆ ಬರುತ್ತಿದೆ. ಭಾರತದಲ್ಲಿ ಹೊಸದಾಗಿ ಪ್ರಕಟಗೊಂಡ ಪ್ರಕಟಗೊಂಡ ಒಂದು ಪುಸ್ತಕವನ್ನು ನೋಡಿದಾಗ, ನನಗೆ ಈ ಎಲ್ಲಾ ಅನುಭವವು ಬಂದಿತು. ಇದು ಆಂಗ್ಲ ಭಾಷೆಯಲ್ಲಿದ್ದು 'ತಹೆ ರೋಲ್ ಆಫ್ ಆನರ್' ಎಂದು ಅದರ ಹೆಸರು. ಈ ಪುಸ್ತಕದಲ್ಲಿ, ಯಾರು ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಡನೆ ಹೋರಾಡಿ ಮಡಿದಿದ್ದಾರೋ, ಅವರ ಭಾವಚಿತ್ರಗಳು ಹಾಗು ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಪ್ರಕಟಿಸಲಾಗಿದೆ. ಪುಸ್ತಕದಲ್ಲಿ ಬಹುತೇಕವಾಗಿ ಭಾವಚಿತ್ರಗಳು ತುಂಬಿದ್ದವು. ಬಹಳ ಸಂಖ್ಯೆಯಲ್ಲಿಯೇ ಇದ್ದವು. (ಕೆಲವೊಂದು ಭಾವಚಿತ್ರಗಳಲ್ಲಿ, ಅವರು ಸತ್ತು ನೆಲದ ಮೇಲೆ ಬಿದ್ದವರನ್ನು ಎತ್ತುತ್ತಿರುವ ಚಿತ್ರಗಳನ್ನು ಪೊಲೀಸರಿಂದ ತೆಗೆಯಲ್ಪಟ್ಟಿದ್ದವು.) ಮತ್ತು ಇವೆಲ್ಲವೂ ಒಂದು ವಿಶೇಷ ವಾತಾವರಣವನ್ನು ತಂದಿತ್ತು; ಆದರೆ ಆ ವಾತಾವರಣವು ನಿರಾಸಕ್ತ ಸದ್ಭಾವದಿಂದ ಕೂಡಿದ ಜನರು ದುರಂತ ದುರ್ವಿಧಿಗೆ ಬಲಿಯಾದಂತೆ ಇತ್ತು. ಇದು ನನಗೆ ಜರ್ಮನ್ ಯುದ್ಧದ ಭಯಾನಕ ರೀತಿಯಲ್ಲಿಯೇ ಆಗಿದುದು ಎಂದೆನಿಸಿತು. ಇವೆಲ್ಲವುಗಳು ಕೆಲ ಅಸುರೀ ಶಕ್ತಿಗಳ ನೇರ–ಪ್ರಭಾವದಿಂದ ಸಂಭವಿಸಿರುತ್ತವೆ; ಆದರೆ ನಮಗೆ ಗೊತ್ತಿರುವಂತೆ, ಅಸುರೀ ಶಕ್ತಿಗಳಿಗೆ ಕೆಲಸ ಮಾಡಲು ಒಂದು ರೀತಿಯಲ್ಲಿ ಅನುಮತಿಯನ್ನು ಕೊಡಲಾಗಿದೆ. ಈ ಭಯಾನಕ ಭಾವವನ್ನು ತರುವದರಿಂದ ಪ್ರಜ್ಞೆಯನ್ನು ತ್ವರಿತವಾಗಿ ಜಾಗೃತಗೊಳಿಸಲು ಸಹಾಯ ಮಾಡುತ್ತದೆ. ಆಗ ಈ ಅನುಭವವು ಬಹಳ ಶಕ್ತಿಶಾಲಿಯಾಗಿತ್ತು. ಜೊತೆಗೆ ಫ್ರಾನ್ಸ್‌ದಲ್ಲಿ ಜರ್ಮನರು ಮಾಡಿದ ದೌರ್ಜನ್ಯಗಳ ಭಾವಚಿತ್ರಗಳು ಇದೇ ರೀತಿಯ ಅನುಭವವನ್ನು ನೀಡಿತ್ತು. ಆಗ ಆಧುನಿಕ ಮಾನವನ ತಪ್ಪಿನ ಬಗೆಗೆ ಒಂದು ದರ್ಶನವಾಯಿತು (ಇಲ್ಲಿ ಆಧುನಿಕವೆಂದರೆ ಸಾವಿರ ವರ್ಷಗಳ ಹಿಂದಿನಿಂದ ಬಂದ ಅದರಲ್ಲೂ ಕೊನೆಯ ನೂರು ವರ್ಷಗಳಲ್ಲಿ ಅದು ತೀವ್ರತರವಾಗಿ ಪ್ರಗತಿಗೊಂಡಿದೆ). ಇದನ್ನು ಸಮವಾಗಿಸಲು, ಒಂದು ಅಭೀಪ್ಸೆಯು ನನ್ನಲ್ಲಿ ಜಾಗೃತವಾಯಿತು. ಹೇಗೆ ಇದನ್ನು ಮಾಡಬೇಕು?... ಏನು ಮಾಡಲು ಸಾಧ್ಯ? ಎಂದುಕೊಳ್ಳುತ್ತಿರುವಾಗ ನನಗೆ ದೊರೆತ ಉತ್ತರ, "ಈ ಉದ್ದೇಶದಿಂದಲೇ ನೀನು ಅರೋವಿಲ್ಲೆಯನ್ನು ಸೃಷ್ಟಿ ಮಾಡಿರುವೆ".

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 21 ಸೆಪ್ಟೆಂಬರ್, 1966**

## ಅರೋವಿಲ್ಲೆಯ ಭವಿಷ್ಯ

ಅರೋವಿಲ್ಲೆಯು ಒಂದು ವಿಶ್ವ ನಗರವಾಗಿರಲು ಇಚ್ಛಿಸುತ್ತದೆ. ಅಲ್ಲಿ ಎಲ್ಲಾ ದೇಶಗಳ ಪುರುಷರು ಮತ್ತು ಮಹಿಳೆಯರು ತಮ್ಮೆಲ್ಲಾ ಪಂಥಗಳ, ಎಲ್ಲಾ ರಾಜಕೀಯ ಮತ್ತು ರಾಷ್ಟ್ರೀಯತೆಯಗಳನ್ನು ದಾಟಿ, ಶಾಂತಿ ಮತ್ತು ವಿಕಾಸಶೀಲ ಸಾಮರಸ್ಯದಿಂದ ಬದುಕಬಹುದು.

ಅರೋವಿಲ್ಲೆಯ ಉದ್ದೇಶವು ಮಾನವ ಐಕ್ಯತೆಯನ್ನು ಸಾಕ್ಷಾತ್ಕಾರಗೊಳಿಸಿ–ಕೊಳ್ಳುವದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/188**

"ಹಣವು ಸಾರ್ವಭೌಮ ಒಡೆಯನಾಗಿ ಉಳಿಯುವದಿಲ್ಲ; ಸಾಮಾಜಿಕ ಸ್ಥಾನಮಾನ ಮತ್ತು ಭೌತಿಕ ಸಂಪತ್ತಿಗಿಂತಲೂ ವ್ಯಕ್ತಿಯ ಮೌಲ್ಯಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗುವದು. ಅಲ್ಲಿ, ಕೆಲಸವು ಬದುಕಲು ಗಳಿಸುವ ದಾರಿಯಾಗಿರುತ್ತದೆ. ತನ್ನನ್ನು ತಾನು ವ್ಯಕ್ತಪಡಿಸುವ ಮತ್ತು ತನ್ನ ಸಾಮರ್ಥ್ಯವನ್ನು ಬೆಳೆಸುವ ಹಾಗು ಸಮುದಾಯದ ಸೇವೆಗಾಗಿ, ತನ್ನ ಸಾಧ್ಯತೆಗಳನ್ನು ಒಟ್ಟಾಗಿ ಉಪಯೋಗಿಸಿ–ಕೊಂಡು ಪ್ರಗತಿಗೊಳ್ಳುವದಾಗಿರುತ್ತದೆ. ಇದು ತನ್ನೊಳಗೆ ತಾನೇ ಪ್ರತಿಯೊಬ್ಬರ ಜೀವನಾಧಾರಕ್ಕೂ ಹಾಗೂ ಕಾರ್ಯದ ಕ್ಷೇತ್ರವಾಗಿ ಪರಿಣಮಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/93–94**

ಅರೋವಿಲ್ಲೆ ಎಂದರೆ ಒಂದು ಕನಸು ಎಂದು ನೀವು ಹೇಳುತ್ತೀರಿ, ಹೌದು, ಇದು ಆ 'ಒಡೆಯನ' ಕನಸು ಮತ್ತು ಸಾಮಾನ್ಯವಾಗಿ ಈ ಕನಸುಗಳು ನಿಜವಾಗಿರುತ್ತವೆ. ಮಾನವನ ವಾಸ್ತವಗಳೆಂದು ನಾವು ಏನನ್ನು ಕರೆಯುತ್ತೇವೆಯೋ ಅವುಗಳಿಗಿಂತ ಇವು ಸತ್ಯಸ್ವರೂಪವಾಗಿರುತ್ತವೆ.

*

ಮಾನವ ಸ್ವರೂಪವು ಭೌತಿಕ ಜಗತ್ತಿನ ಸೃಷ್ಟಿಯ ಅಂತಿಮ ಹಂತವೇನೂ ಅಲ್ಲ. ವಿಕಾಸವು ಯಾವಾಗಲೂ ಮುಂದುವರೆಯುತ್ತಲೇ ಇರುತ್ತದೆ, ಮತ್ತು ಮಾನವನನ್ನು ಪ್ರಗತಿಗೊಳಿಸುತ್ತಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ತಿಳಿಯಬೇಕಾದ ವಿಷಯವೆಂದರೆ, ಆತನು ಈ ಹೊಸ ಪ್ರಭೇದದ ಆಗಮನದ ಕಾರ್ಯದಲ್ಲಿ ಭಾಗವಹಿಸಬೇಕೆ ಎನ್ನುವದಾಗಿದೆ.

ಯಾರು ಈ ಜಗದ ವಾಸ್ತವದಲ್ಲಿ ಸಂತೃಪ್ತರಾಗಿಯೇ ಉಳಿದುಕೊಳ್ಳುತ್ತಾರೋ, ಅವರಿಗೆ ಅರೋವಿಲ್ಲೆಯ ಅಸ್ತಿತ್ವ ಅವಶ್ಯಕವೆನಿಸುವದಿಲ್ಲ.

*

ನಾವು ಅರೋವಿಲ್ಲೆಯನ್ನು ಅತಿಮಾನವನ ತೊಟ್ಟಿಲಾಗಿ ಮಾಡಲು ಇಚ್ಛಿಸುತ್ತೇವೆ.

ಅರೋವಿಲ್ಲೆಯ ಎಲ್ಲಾ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ನಿರ್ಧಾರಗಳ ಆಚೆಗಿರುವ "ಸತ್ಯ"ದ ಸೇವೆಗಾಗಿ ಇರಬೇಕು.

*

ಅರೋವಿಲ್ಲೆಯ ಕ್ರಾಂತಿಗಾಗಿ ಮಾಡುವ ಪ್ರಮಾಣಿಕ ಮತ್ತು ಸತ್ಯದಿಂದ ಕೂಡಿರುವ ಪ್ರಯತ್ನ ಇದಾಗಿದೆ.

*

ಅರೋವಿಲ್ಲೆ ಅಂತೂ ಕೊನೆಗೆ ಕೇವಲ ಭವಿಷ್ಯದೆಡೆಗೆ ಚಿಂತನೆ ಮಾಡುವ ಒಂದು ತಾಣವಾಗುತ್ತದೆ.

*

ಭವಿಷ್ಯದ "ಜ್ಞಾನ", "ಶಾಂತಿ", ಮತ್ತು "ಐಕ್ಯತೆ"ಯ ಕುರಿತು ಅವಸರದಿಂದ ಮುನ್ನುಗ್ಗುವವರಿಗೆ ಒಂದು ಆಶ್ರಯ ತಾಣವಾಗಿ ಕಟ್ಟಿರುವ ತಾಣವೇ "ಅರೋವಿಲ್ಲೆ".

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/191–92 – ಶ್ರೀಮಾತೆ**

## ಅರೋವಿಲ್ಲೆಯ ಸಂದೇಶ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಅರೋವಿಲ್ಲೆ ನಿವಾಸಿಗಳಿಗಾಗಿ**

ಅರೋವಿಲ್ಲೆಯಲ್ಲಿ ಸಾಮರಸ್ಯದ ವಾತಾವರಣವನ್ನು ಸ್ಥಾಪಿಸಲು ಮತ್ತು ಅದರ ಶಾಸನವು ಅಲ್ಲಿರುವಂತೆ ಮಾಡಲು (ಮನುಷ್ಯ–ಮನುಷ್ಯ ನಡುವಿನ) ಸಂಘರ್ಷಕ್ಕೆ ಮತ್ತು ತಪ್ಪು ಗ್ರಹಿಕೆಗೆ ಕಾರಣವನ್ನು ನಾವು ಪ್ರತಿಯೊಬ್ಬರೂ ನಮ್ಮಂತರಂಗವನ್ನು ಹೊಕ್ಕು ನೋಡುವುದು ಪ್ರಥಮ ಹೆಜ್ಜೆಯಾಗಿದೆ.

ಈ ಕಾರಣಗಳು ಯಾವಾಗಲೂ ಎರಡೂ ಕಡೆ ಇರುವುದರಿಂದ ಮತ್ತು ಇನ್ನೊಬ್ಬರಿಂದ ಏನನ್ನಾದರೂ ಅಪೇಕ್ಷಿಸುವ ಮೊದಲು, ಅವುಗಳನ್ನು (ಕಾರಣಗಳನ್ನು) ನಮ್ಮಿಂದ ತೆಗೆದುಹಾಕಲು ನಾವು ಶ್ರಮಿಸಬೇಕು.

*

ಪ್ರತಿಯೊಬ್ಬ ಉತ್ತಮ ಅರೋವಿಲ್ಲೆ ನಿವಾಸಿಯು, ಎಲ್ಲ ಬೇಡಿಕೆಗಳಿಂದ, ಎಲ್ಲ ಆದ್ಯತೆಗಳಿಂದ ಮತ್ತು ಎಲ್ಲ ವಿಕರ್ಷಣಗಳಿಂದ ತನ್ನನ್ನು ತಾನು ಮುಕ್ತಗೊಳಿಸಲು ಪ್ರಯತ್ನಿಸಬೇಕು.

ಎಲ್ಲ ಸಂದರ್ಭಗಳಲ್ಲಿಯೂ ಸಮಾನತೆಯನ್ನು ಸಾಧಿಸುವುದು ಅರೋವಿಲ್ಲೆಯಲ್ಲಿ ವಾಸಿಸಲು ಬೇಕಾದಂಥ ಮಹತ್ವದ ಗುರಿಯಾಗಿದೆ.

*

ವಿವಾದಗಳು ಅರೋವಿಲ್ಲೆಯ ಜೀವಾಳಕ್ಕೆ (ಚೇತನಕ್ಕೆ) ಸಂಪೂರ್ಣವಾಗಿ ವಿರುದ್ಧವಾದವುಗಳಾಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/201–02**

**ಅರೋವಿಲ್ಲೆಯ ಎಲ್ಲ ನಿವಾಸಿಗಳಿಗೆ**

ಅರೋವಿಲ್ಲೆಯ ನಿವಾಸಿಯಾಗಬಯಸುವವರು ಕನಿಷ್ಠ ಪಕ್ಷ, ಮಾನವೀಯತೆಯ ಅರಿವಿನ ಅಂಶಕ್ಕೆ ಸೇರಿದವರಾಗಿರಬೇಕು ಮತ್ತು ಮುಂದಿನ ಮನುಕುಲದ ಮೇಲೆ ಪ್ರಭಾವ ಬೀರಬಹುದಾದ ಉನ್ನತ ಪ್ರಜ್ಞೆಗಾಗಿ ಹಂಬಲಿಸುವವರಾಗಿರಬೇಕು.

ಎಲ್ಲ ಅಹಂಕಾರದ ಮಿತಿಗಳನ್ನು ದಾಟಿ, ಯಾವಾಗಲೂ ಉನ್ನತ (ಪ್ರಜ್ಞೆಯ) ಹಂತಕ್ಕಾಗಿ ಮತ್ತು ಯಾವಾಗಲೂ ಅತ್ಯುತ್ತಮಕ್ಕಾಗಿ ಹಂಬಲಿಸುವವರಾಗಿರಬೇಕು.

*

ನಾವು ಅರೋವಿಲ್ಲೆಯಲ್ಲಿ ಹಿತಕರವಾಗಿರಲು ಬಯಸುವುದಿಲ್ಲ, ಆದರೆ ಪ್ರಜ್ಞೆಯಲ್ಲಿ ಪ್ರಗತಿ ಹೊಂದಲು ಮತ್ತು ದೇವರ ಸೇವೆ ಮಾಡಲು ಇರುವೆವು.

*

ನಿಮ್ಮ ವೈಯಕ್ತಿಕ ಚಿಕ್ಕ–ಪುಟ್ಟ ಬೇಕುಗಳನ್ನು ಈಡೇರಿಸಿಕೊಳ್ಳಬೇಕೆಂದು ನೀವು ಅರೋವಿಲ್ಲೆಗೆ ಬಂದಿರುವಿರಾ?

ನಿಜವಾಗಿಯೂ ಅದು ಅವಶ್ಯಕವಾಗಿರಲಿಲ್ಲ. ಅದಕ್ಕಾಗಿ ಸಾಮಾನ್ಯವಾದ ಪ್ರಪಂಚವಿದೆ.

ನಾವು ಅರೋವಿಲ್ಲೆಗೆ ಬರುವುದು, ಪೃಥ್ವಿಯ ಮೇಲೆ ಪ್ರಕಟಗೊಳ್ಳಬೇಕೆಂದಿರುವ ದಿವ್ಯ ಜೀವನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು.

ನಾವು ಈ ದಿಶೆಯಲ್ಲಿ ಪ್ರಯತ್ನ ಮಾಡಬೇಕು ಮತ್ತು ವೈಯಕ್ತಿಕ ಬಯಕೆಗಳೆಂದು ಕರೆಯಲ್ಪಡುವ 'ಬೇಡಿಕೆ'ಗಳಿಂದ ಸಮ್ಮೋಹಿತರಾಗಿರಬಾರದು. ಉನ್ನತದೆಡೆಗೆ ಮತ್ತು ಪ್ರಗತಿಯ ಕಡೆಗೆ ನೋಡಿ, ಮನುಷ್ಯನಲ್ಲಿನ ಮೃಗೀಯ ಸ್ವಭಾವವನ್ನು ಜಯಿಸಲು ಶ್ರಮಿಸಿರಿ. ಈ ಸಂಕಲ್ಪವನ್ನು ಮಾಡಿರಿ ಮತ್ತು ನಿಮ್ಮ ಪಯಣದ ಮಾರ್ಗದಲ್ಲಿ ನೀವು ಸಹಾಯವನ್ನು ಪಡೆಯುವಿರಿ.

*

ಅರೋವಿಲ್ಲೆಗಾಗಿ ಕೆಲಸ ಮಾಡುವುದೆಂದರೆ ಇನ್ನೂ ಹೆಚ್ಚಿನ ಸಮರಸವಾದ ಭವಿಷ್ಯತ್ತಿನ ತ್ವರಿತ ಆಗಮನಕ್ಕಾಗಿ ಕೆಲಸ ಮಾಡುವುದಾಗಿದೆ.

*

ನಮ್ಮಲ್ಲಿ ಸರಿಯಾದ ಮನೋಭಾವವಿದ್ದರೆ, ನಮ್ಮ ಅತಿ ಚಿಕ್ಕ ಕಾರ್ಯದಲ್ಲೂ ಭಗವಂತನ ಸೇವೆಯನ್ನು ಮಾಡಬಹುದು.

*

ನಾವು ಭಗವಂತನಿಗಾಗಿ ನಿವೇದನೆ ಎಂದು ಮಾಡುವ ಕಾರ್ಯದಲ್ಲಿ ಪ್ರಜ್ಞೆಯು ಉತ್ತಮವಾಗಿ ವಿಕಸಿತಗೊಳ್ಳುತ್ತದೆ.

ಸೋಮಾರಿತನ ಮತ್ತು ನಿಷ್ಕ್ರಿಯತೆ ತಮಸ್ಸಿಗೆ ಕಾರಣವಾಗುತ್ತವೆ ಮತ್ತು ಈ ತಮಸ್ಸು ನಮ್ಮನ್ನು ಅರಿವಿರದ ಸ್ಥಿತಿಗೆ, ಪ್ರಗತಿಯ ಹಾಗೂ ಬೆಳಕಿನ ವಿರುದ್ಧ ದಿಕ್ಕಿಗೆ ತಳ್ಳುತ್ತವೆ.

ನಿಜವಾದ ಪ್ರಜ್ಞೆಯನ್ನು ಹೊಂದಲು ಇರುವಂಥ ಸೂಕ್ತ ಹಾಗೂ ಅತ್ಯಂತ ತ್ವರಿತ ಮಾರ್ಗವೆಂದರೆ ನಮ್ಮ ಅಹಂಕಾರವನ್ನು ಗೆಲ್ಲುವುದು ಮತ್ತು ಸದಾ ಭಗವತ್ ಸೇವೆಯಲ್ಲಿ ಮಾತ್ರ ಇರುವುದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/210–12**

ಭೂಮಿಯ ಆಯಾಮದಷ್ಟು ನಿಮ್ಮ ಪ್ರಜ್ಞೆಯನ್ನು ವಿಶಾಲಗೊಳಿಸಿ, ಆಗ ಎಲ್ಲದಕ್ಕೂ ನಿಮಗೆ ಸ್ಥಾನ ಲಭಿಸುತ್ತದೆ.

*

ಅರೋವಿಲ್ಲೆ ನಿವಾಸಿಗಳ ಧ್ಯೇಯವು ಅಹಂಕಾರದಿಂದ ಮುಕ್ತಿಯನ್ನು ಹೊಂದುವುದೇ ಹೊರತು ತಮ್ಮ ಅಹಂಕಾರವನ್ನು ತಣಿಸುವುದಲ್ಲ.

ಒಂದು ವೇಳೆ ಅವರು ಹಳೆಯ ಮಾನವ–ಸ್ವಾರ್ಥ ಸಾಧನೆಯ ಮಾರ್ಗವನ್ನು ಅನುಸರಿಸಿದರೆ, ಜಗತ್ತನ್ನು ಪರಿವರ್ತನೆಗೊಳಿಸಲು ಆಶಿಸುವುದು ಹೇಗೆ?

*

ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ಉತ್ತಮವಾದ ಕಾರಣಗಳನ್ನು ಹೊಂದಿದ್ದಾರೆ, ಮತ್ತು ಅವುಗಳನ್ನು ನಿರ್ಣಯಿಸಲು ನಾನು ತಜ್ಞಳಲ್ಲ.

ಆದರೆ ಆಧ್ಯಾತ್ಮಿಕ ದೃಷ್ಟಿಕೋನದಿಂದ, ಹೆಚ್ಚು ವ್ಯಾಪಕ ಮತ್ತು ನೈಜ ಸಮಾಧಾನದಲ್ಲಿ ಒಳ್ಳೆಯ ಮನೋಭಾವದೊಂದಿಗೆ ಎಲ್ಲ ಅಭಿಪ್ರಾಯಗಳನ್ನು ಸಮರಸಗೊಳಿಸ–ಬಹುದೆಂದು ನನಗೆ ಗೊತ್ತು. ಇದನ್ನು ನಾನು ಅರೋವಿಲ್ಲೆಯಲ್ಲಿ ಕೆಲಸ ಮಾಡುವವರಿಂದ ನಿರೀಕ್ಷಿಸುತ್ತೇನೆ. ಹೆಚ್ಚು ವ್ಯಾಪಕವಾದ ಮತ್ತು ಪರಿಪೂರ್ಣವಾದ ಪರಿಣಾಮವನ್ನು ಹೊಂದಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕು.

ಅರೋವಿಲ್ಲೆಯ ಧ್ಯೇಯವು ಈ ಪ್ರಗತಿಯನ್ನು ಎಲ್ಲರಿಂದ ಬೇಡುತ್ತದೆ – ನೀವದನ್ನು ಮಾಡ ಬಯಸುವುದಿಲ್ಲವೇ? ಶುಭಾಶಯಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/213–14**

"ಮಾತೃಮಂದಿರವು ಅರೋವಿಲ್ಲೆಯ ದೈವೀ ಆಕಾಂಕ್ಷೆಯ ಜೀವಂತ ಸಂಕೇತವಾಗಿರಲಿ."

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 21 ಫೆಬ್ರವರಿ, 1971**

"ಸಹಸ್ರಾರು ವರ್ಷಗಳವರೆಗೆ, ಜೀವನಕ್ಕೆ ಸಂಬಂಧಿಸಿದ ಬಾಹ್ಯ ವಿಧಾನಗಳನ್ನು, ಬಾಹ್ಯ ಉಪಕರಣಗಳನ್ನು, ಬಾಹ್ಯ ತಂತ್ರಗಳನ್ನು ನಾವು ಅಭಿವೃದ್ಧಿಪಡಿಸುತ್ತಲಿದ್ದೆವು – ಕೊನೆಗೆ ಅದೇ ವಿಧಾನಗಳು ಮತ್ತು ತಂತ್ರಗಳು ನಮ್ಮನ್ನು ಅದುಮಿ ಹಾಕುತ್ತಲಿವೆ. ಹೊಸ ಮಾನವ ಕುಲದ ಸಂಕೇತವು ಅಭಿಪ್ರಾಯದ ನಿಲುವಿನಲ್ಲಿ ಮತ್ತು ಆಂತರಿಕ

ಜ್ಞಾನ ಮತ್ತು ಆಂತರಿಕ ತಂತ್ರವು ಜಗತ್ತನ್ನು ಬದಲಾಯಿಸಬಹುದು ಮತ್ತು ಅದನ್ನು ಸದೆಬಡಿಯದೆ ಕೈವಶ ಮಾಡಿಕೊಳ್ಳಬಹುದು ಎಂಬ ತಿಳುವಳಿಕೆಯು ತಲೆಕೆಳಗಾಗಿದೆ."

"ಅರೋವಿಲ್ಲೆಯು ಈ ಹೊಸ ಜೀವನ ವಿಧಾನವನ್ನು ರೂಪಿಸುವ ಸ್ಥಳವಾಗಿದೆ, ಮನುಷ್ಯನು ಆಂತರಿಕ ಚೇತನದ ಶಕ್ತಿಯ ಮೂಲಕ ತನ್ನ ಪ್ರಪಂಚವನ್ನು ಬದಲಾಯಿಸಲು ಪ್ರಾರಂಭಿಸಲೇಬೇಕೆಂದಿರುವ ವೇಗವರ್ಧಿತ ವಿಕಸನದ ಕೇಂದ್ರ ಇದಾಗಿದೆ."

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 3 ಆಗಸ್ಟ್, 1968**

"ಶ್ರೀ ಅರವಿಂದರ ಕಲ್ಪನೆಗೆ ಒಂದು ನಿರ್ದಿಷ್ಟ ರೂಪ ಕೊಡುವ ಕಾರ್ಯವನ್ನು ಶ್ರೀಮಾತೆಯವರಿಗೆ ವಹಿಸಲಾಗಿತ್ತು. ನವೀನ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತ ಮತ್ತು ಸಾಕಾರಗೊಳಿಸುತ್ತ ಒಂದು ಹೊಸ ಪ್ರಪಂಚದ, ಒಂದು ಹೊಸ ಮನುಕುಲದ, ಒಂದು ಹೊಸ ಸಮಾಜದ ಸೃಷ್ಟಿಯ ಕಾರ್ಯವು ಶ್ರೀಮಾತೆಯವರಿಂದ ಆರಂಭಿಸಲ್ಪಟ್ಟಿತ್ತು. ವಸ್ತುಗಳ ಸ್ವರೂಪದಲ್ಲಿ, ಅದನ್ನು ಸಮಗ್ರ ಮಾನವ ಪರಿಪೂರ್ಣತೆಯ ಅಂಶಗಳಲ್ಲಿ ಅರಿತುಕೊಳ್ಳುವ ಸಾಮೂಹಿಕ ಪ್ರಯತ್ನಕ್ಕಾಗಿ ಇದೊಂದು ಸಾಮೂಹಿಕ ಆದರ್ಶದ ಕರೆಯಾಗಿದೆ."

"ಶ್ರೀಮಾತೆಯವರಿಂದ ಹುಟ್ಟುಹಾಕಲ್ಪಟ್ಟ ಮತ್ತು ನಿರ್ಮಿಸಲ್ಪಟ್ಟ ಆಶ್ರಮವು ಈ ಗುರಿಯನ್ನು ಈಡೇರಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆಯಾಗಿತ್ತು. ಅರೋವಿಲ್ಲೆಯ ಯೋಜನೆಯು ಅದರ ಮುಂದಿನ ಹೆಜ್ಜೆಯಾಗಿದೆ, ಮಾನವೀಯತೆಯ ಸಾಮೂಹಿಕ ಜೀವನದಲ್ಲಿ ಆತ್ಮ ಮತ್ತು ದೇಹ, ಆತ್ಮ ಮತ್ತು ಪ್ರಕೃತಿ, ಸ್ವರ್ಗ ಮತ್ತು ಭೂಮಿಯ ನಡುವೆ ಸಾಮರಸ್ಯವನ್ನು ಸ್ಥಾಪಿಸುವ ಈ ಪ್ರಯತ್ನದ ತಳಹದಿಯನ್ನು ವಿಸ್ತರಿಸಲು ಅರೋವಿಲ್ಲೆಯ ಯೋಜನೆಯು ಮುಂದಿನ (ಬಹಿರಂಗ) ಹೆಜ್ಜೆಯಾಗಿದೆ. (ಮೂಲ ಕೈಬರಹ ಪ್ರತಿ)

**– ಶ್ರೀಮಾತೆ**

ನಾವಿಲ್ಲಿರುವುದು, ನಮ್ಮೆಲ್ಲ ಬಯಕೆಗಳನ್ನು ಬಿಟ್ಟು ಭಗವಂತನೆಡೆಗೆ ಹೊರಳಲು ಮತ್ತು ಆತನ ಪ್ರಜ್ಞೆಯಾಗಲು. ನಾವು ಕಾಣಲು ಪ್ರಯತ್ನಿಸುತ್ತಿರುವ ದೇವರು ಎಲ್ಲೋ ದೂರದಲ್ಲಿಲ್ಲ ಮತ್ತು ದೊರಕಲಾರದವನೇನಲ್ಲ. ಆತನು ತನ್ನ ಸೃಷ್ಟಿಯ ನಡುವೆಯೇ ಇದ್ದಾನೆ ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ನಮ್ಮಿಂದ ಆಶಿಸುತ್ತಾನೆ, ನಮ್ಮ ವ್ಯಕ್ತಿಗತ ಪರಿವರ್ತನೆಯಿಂದ ಆತನನ್ನು ತಿಳಿದುಕೊಳ್ಳಲು, ಆತನೊಡನೆ

ಒಂದಾಗಲು ಮತ್ತು ಕೊನೆಯಲ್ಲಿ ಅವನನ್ನು ಪ್ರಜ್ಞಾಪೂರ್ವಕವಾಗಿ ವ್ಯಕ್ತಪಡಿಸಲು ಸಮರ್ಥರಾಗಬೇಕು. ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕಾಗಿದ್ದು ಇದಕ್ಕೆ, ನಮ್ಮ ಅಸ್ತಿತ್ವಕ್ಕೆ ಇದು ನಿಜವಾದ ಕಾರಣವಾಗಿದೆ. ಅತಿಮಾನಸ ಪ್ರಜ್ಞೆಯ ಅಭಿವ್ಯಕ್ತಿಯು ಈ ಉದಾತ್ತ ಸಾಕ್ಷಾತ್ಕಾರದೆಡೆಗಿನ ನಮ್ಮ ಮೊದಲ ಹೆಜ್ಜೆಯಾಗಿದೆ.

ನಮ್ಮ ಜೀವನಗಳಲ್ಲಿ ದೈವೀಕತೆಯನ್ನು ಅರಿತುಕೊಳ್ಳುವುದು ಮತ್ತು ಪ್ರಕಟಿಸುವುದು ದಾರಿಯಾಗಿದೆ, ಪ್ರಾಣಿಗಳಾಗದೆ ಬೆಕ್ಕು ನಾಯಿಗಳಂತೆ ಬದುಕಬಾರದು.

ಇದಕ್ಕೆ ವಿರುದ್ಧವೆನ್ನುವಂತೆ, ಅರೋವಿಲ್ಲೆ ಜನ ಸಂಖ್ಯೆಯ ಹೆಚ್ಚಿನ ಭಾಗವು ಅತಿಮಾನವ ಕುಲದ ಬದಲಿಗೆ ಅಮುಖ್ಯ ಮಾನವ ಕುಲವಾಗಿದೆ. ಅದೆಲ್ಲವೂ ಕೊನೆಗೊಳ್ಳುವ ಸಮಯ ಇದಾಗಿದೆ.

ಇಲ್ಲಿಗೆ ಹಾಗೆ ಸುಮ್ಮನೆ ಬಂದವರು ಕೆಲವರಿದ್ದಾರೆ, "ಈ ರೀತಿ ಮಾಡಿದರೆ ಏನೂ ಆಗಲಾರದು," ಎಂದು ನಾನು ಹೇಳಿದರೆ, "ನಾವು ಇಲ್ಲಿ ಬಂದಿರುವುದು ಅದಕ್ಕಾಗಿ ಅಲ್ಲ!" ಎಂದು ಉತ್ತರಿಸುತ್ತಾರೆ. ನೀವು ತಪ್ಪಾಗಿ ಭಾವಿಸಿದ್ದೀರಿ, ವಿಷಯಗಳು ಹಾಗಲ್ಲ ಎಂದು ಅವರೆಲ್ಲರ ಮುಖದ ಮೇಲೆ ನಾನು ಹೇಗೆ ಹೇಳಲಿ. ಆದರೆ ಅದನ್ನು ಬರೆಯುವಂಥ ಸಮಯ ಬಂದಿದೆ ಎಂದು ನಾನು ಭಾವಿಸುತ್ತೇನೆ.

ಇದು ಎಷ್ಟು ಸುಂದರವಾಗಿದೆ, ಬಹಳ ಸುಂದರವಾದ ಮಾನವ ಕುಲ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/347–48 – ಶ್ರೀಮಾತೆ**

ಎಲ್ಲಿ ಮಾನವರು ಎಲ್ಲ ರಾಷ್ಟ್ರೀಯ ಸಂಘರ್ಷಗಳಿಂದ, ಸಾಮಾಜಿಕ ಒಪ್ಪಂದಗಳಿಂದ, ಸ್ವವಿರುದ್ಧವಾದ ನೀತಿಗಳಿಂದ ಮತ್ತು ವಿರೋಧಿಸುವ ಧರ್ಮಗಳಿಂದ ದೂರವಿರ–ಬಹುದಾದಂಥ ಒಂದು ಸ್ಥಾನವನ್ನು ಈ ಪ್ರಪಂಚವು ಬೇಡುತ್ತದೆ; ಎಲ್ಲಿ ಮಾನವರು ಭೂತಕ್ಕೆ ಅಂಟಿಕೊಂಡ ಗುಲಾಮಗಿರಿಯಿಂದ ಮುಕ್ತಗೊಳ್ಳುವರೋ, ಪ್ರಕಟಗೊಳ್ಳಲು ಪ್ರಯತ್ನಿಸುತ್ತಿರುವ ದೈವೀ ಪ್ರಜ್ಞೆಯನ್ನು ಕಂಡುಕೊಳ್ಳಲು ಮತ್ತು ಅದನ್ನು ಆಚರಿಸಲು ತಮ್ಮನ್ನು ತಾವು ಸಮರ್ಪಿಸಿಕೊಳ್ಳುವರೋ ಅಂಥ ಒಂದು ಸ್ಥಾನವನ್ನು ಈ ಪ್ರಪಂಚವು ಬೇಡುತ್ತದೆ.

ಅರೋವಿಲ್ಲೆಯು ಈ ಸ್ಥಾನವಾಗಬೇಕೆಂದು ಬಯಸುತ್ತದೆ ಮತ್ತು ನಾಳಿನ ಸತ್ಯವಾಗಬೇಕೆಂದು ಬಯಸುವ ಎಲ್ಲರಿಗೂ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/202**

*ಅರೋವಿಲ್ಲೆಯಲ್ಲಿ ಸಂಘಟಿತ ಚಟುವಟಿಕೆಗಳು ಅಪೇಕ್ಷಣೀಯವಲ್ಲವೆಂದು ಅರೋವಿಲ್ಲೆಯಲ್ಲಿ ಇರುವವರು ಹೇಳುತ್ತಾರೆ; ಅವರಿರುವುದು ಸ್ವಾಭಾವಿಕವಾದ ಚಟುವಟಿಕೆಗಳಿಗಾಗಿ.*

ಸಹಜವಾದ ಕಾರ್ಯವನ್ನು ಅಸಾಧಾರಣ ಪ್ರತಿಭೆಯ ಮನುಷ್ಯನಿಂದ ಮಾತ್ರ ಮಾಡಬಹುದಾಗಿದೆ.

ನಾನು ಮಹಾಮೇಧಾವಿ ಎಂದು ಹೇಳಿಕೊಳ್ಳುವವರು ಯಾರಾದರೂ ಇದ್ದೀರಾ?...

ಆಶೀರ್ವಾದಗಳು.

*

ನಿಮ್ಮ ಪ್ರಕೃತಿಯ ಎಲ್ಲ ಪ್ರಚೋದನೆಗಳನ್ನು ಅನುಸರಿಸುವುದು ನಿಶ್ಚಿತವಾಗಿಯೂ ಅತಿಮಾನಸ ಮಾರ್ಗವಲ್ಲ ಮತ್ತು ಅದಕ್ಕೆ ಇಲ್ಲಿ ಸ್ಥಾನವಿಲ್ಲ.

ನಮಗೆ ಬೇಕಾಗಿರುವುದು ಅತಿಮಾನಸದ ಆಗಮನವನ್ನು ತ್ವರಿತಗೊಳಿಸುವುದು, ಹೊರತು ಕಾಮನೆಗಳಿಂದ ಮತ್ತು ನಿಮ್ಮ ಪ್ರಚೋದನೆಗಳಿಂದ ತುಂಬಿದ ಮಾನವ ಕುಲದ ಕೊಳಕು ಸ್ಥಿತಿಯಲ್ಲಿ ಎಂದಿಗೂ ಬೀಳುವುದಲ್ಲ.

*

ಅರೋವಿಲ್ಲೆಯಲ್ಲಿ ಜನರು ಸಂತೋಷದಿಂದ ಇರಲು ಅರೋವಿಲ್ಲೆ ಬಯಸುತ್ತದೆ. ಅತೃಪ್ತರಾದವರು ತಮ್ಮ (ಜಂಜಾಟದ) ಪ್ರಪಂಚಕ್ಕೆ ಹಿಂತಿರುಗಬಹುದು, ಅಲ್ಲಿ ಅವರು ಬಯಸಿದ್ದನ್ನು ಮಾಡಬಹುದು ಮತ್ತು ಅಲ್ಲಿ ಎಲ್ಲರಿಗೂ ಸ್ಥಳವಿದೆ.

*

ಅರೋವಿಲ್ಲೆಯ ನಿಜವಾದ ಜೀವಾಳವು ಸಹಯೋಗವಾಗಿದೆ ಮತ್ತು ಅದು ಅಲ್ಲಿ ಹೆಚ್ಚು–ಹೆಚ್ಚು ಇರಬೇಕು.

ನಿಜವಾದ ಸಹಯೋಗವು ದೈವತ್ವಕ್ಕೆ ದಾರಿ ಮಾಡಿಕೊಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/215–16**

ಅರೋವಿಲ್ಲೆಯನ್ನು ಸ್ಥಾಪಿಸಿದ್ದು ತನ್ನ ಹುಟ್ಟುಗುಣಗಳಿಂದ ನಿಯಂತ್ರಿಸಲ್ಪಟ್ಟ ಮತ್ತು ತನ್ನ ಕಾಮನೆಗಳ ಅಧೀನದಲ್ಲಿರುವ ನಿಮ್ಮ ಮಾನವ ಕುಲಕ್ಕಾಗಿ ಅಲ್ಲ. ಅದನ್ನು

ಸ್ಥಾಪಿಸಿದ್ದು ಸಾಮಾನ್ಯ ಮಾನವ ಕುಲವು ಅತಿಮಾನವ ಕುಲವಾಗಿ ಪ್ರಗತಿ ಹೊಂದಲೆಂದು. ನಿಮ್ನ ಮಾನವ ಕುಲಕ್ಕೆ ಸಂಬಂಧಿಸಿದವರಿಗೆ, ಮೃಗಗಳಂತೆ ಇರುವ ಮಾನವ ಕುಲಕ್ಕೆ ಇಲ್ಲಿ ಸ್ಥಾನವಿಲ್ಲ.

ಅರೋವಿಲ್ಲೆ ಇರುವುದು ಅತಿಮಾನಸ ಸ್ಥಿತಿಗೆ ಹಂಬಲಿಸುವವರಿಗಾಗಿ ಮತ್ತು ಆ ಸ್ಥಿತಿಯನ್ನು ತಲುಪಲು ಪ್ರಯತ್ನ ಮಾಡುವವರಿಗಾಗಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/217**

ಪ್ರತಿಯೊಬ್ಬರೂ ಪ್ರಗತಿಯನ್ನು ಸಾಧಿಸಬೇಕು ಮತ್ತು ಹೆಚ್ಚು ಪ್ರಾಮಾಣಿಕರಾಗಬೇಕು.

ಅರೋವಿಲ್ಲೆಯ ರಚನೆಯಾಗಿದ್ದು ಮನುಷ್ಯನ ಅಹಂಕಾರ ಮತ್ತು ಅವರ ಅತ್ಯಾಸೆಗಳನ್ನು ತಣಿಸಲಿಕ್ಕಾಗಿ ಅಲ್ಲ. ಅದನ್ನು ಸ್ಥಾಪಿಸಿದ್ದು ಒಂದು ಹೊಸ ಜಗತ್ತಿಗಾಗಿ, ದೈವೀ ಪರಿಪೂರ್ಣತೆಯನ್ನು ಅಭಿವ್ಯಕ್ತಗೊಳಿಸುತ್ತಿರುವ ಅತಿಮಾನಸಕ್ಕಾಗಿ.

*

ಅರೋವಿಲ್ಲೆಯನ್ನು ಸ್ಥಾಪಿಸಿದ್ದು ಅತಿಮಾನವ ಕುಲಕ್ಕಾಗಿ, ತಮ್ಮ ಅಹಂಕಾರವನ್ನು ಜಯಿಸಬೇಕೆನ್ನುವವರಿಗಾಗಿ ಹಾಗೂ ತಮ್ಮೆಲ್ಲ ಬಯಕೆಗಳನ್ನು ತ್ಯಜಿಸುವವರಿಗಾಗಿ, ಅತಿಮಾನಸವನ್ನು ಸ್ವೀಕರಿಸಲು ತಮ್ಮನ್ನು ತಾವು ಅಣಿಗೊಳಿಸಲಿಕ್ಕಾಗಿ. ಅವರು ಮಾತ್ರ ನಿಜವಾದ ಅರೋವಿಲ್ಲೆಯ ನಿವಾಸಿಗಳು.

ತಮ್ಮ ಅಹಂಕಾರವು ಹೇಳಿದಂತೆ ಕೇಳಬಯಸುವವರು ಮತ್ತು ತಮ್ಮ ಎಲ್ಲ ಕಾಮನೆಗಳನ್ನು ತೃಪ್ತಿಪಡಿಸುವವರು ನಿಮ್ನ ಮಾನವ ಕುಲಕ್ಕೆ ಸೇರಿದವರಾಗಿದ್ದಾರೆ ಮತ್ತು ಅಂಥವರಿಗೆ ಅರೋವಿಲ್ಲೆಯಲ್ಲಿ ಸ್ಥಾನವಿಲ್ಲ. ಅವರು ತಮ್ಮ ನಿಜವಾದ (ಜಂಜಾಟದ) ಪ್ರಪಂಚಕ್ಕೆ ಮರಳಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/218**

*ಅರೋವಿಲ್ಲೆಗೆ ನೀವು ಯಾವ ರಾಜಕೀಯ ಸಂಘಟನೆಯನ್ನು ಬಯಸುತ್ತೀರಿ?*

ನನಗೆ ಮೋಜಿನ ವ್ಯಾಖ್ಯಾನವೊಂದು ಹೊಳೆದಿದೆ: ದೈವೀ ಅರಾಜಕತ್ವ. ಆದರೆ ಪ್ರಪಂಚವು ಇದನ್ನು ಅರ್ಥಮಾಡಿಕೊಳ್ಳುವುದಿಲ್ಲ. ಮನುಷ್ಯರಿಗೆ ತಮ್ಮ ಚೈತ್ಯ ಪುರುಷನ ಅರಿವಾಗಬೇಕು ಹಾಗೂ ಯಾವುದೇ ಸ್ಥಿರವಾದ ನಿಯಮಗಳಿಲ್ಲದೆ ತಮ್ಮನ್ನು ತಾವು ತ್ವರಿತವಾಗಿ ಸಿದ್ಧಗೊಳಿಸಿಕೊಳ್ಳಬೇಕು – ಅದು ಆದರ್ಶ.

ಇದಕ್ಕಾಗಿ ನಾವು ನಮ್ಮ ಚೈತ್ಯ ಪುರುಷನ ಸಂಪರ್ಕದಲ್ಲಿರಬೇಕು, ಅದರ ಮಾರ್ಗದರ್ಶನದಂತೆ ನಡೆಯಬೇಕು ಮತ್ತು ಅಹಂಕಾರದ ಅಧಿಕಾರ ಹಾಗೂ ಪ್ರಭಾವ ಮರೆಯಾಗಬೇಕು.

*

ಅವರಲ್ಲಿ (ಅರೋವಿಲ್ಲೆ ನಿವಾಸಿಗಳಲ್ಲಿ) ಬಯಕೆಗಳಿರುವವರೆಗೂ ಅವರು ನಿಜಾವಾದ ಅರೋವಿಲ್ಲೆ ನಿವಾಸಿಗಳಲ್ಲ.

ಅವರು ಶಬ್ದಗಳೊಡನೆ ಆಟವಾಡದಿರಲಿ: ಬಯಕೆಗಳು ಮತ್ತು ಆಕಾಂಕ್ಷೆಗಳ ನಡುವಿನ ವ್ಯತ್ಯಾಸದ ಒಂದು ಪ್ರಪಂಚವಿದೆ. ಪ್ರತಿಯೊಬ್ಬ ಪ್ರಾಮಾಣಿಕ ವ್ಯಕ್ತಿಗೂ ಇದು ತಿಳಿದಿದೆ. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅವರು ತಮ್ಮ ಅಹಂಕಾರವನ್ನು ಮತ್ತು ಬಯಕೆಗಳನ್ನು ದೈವಿಕವೆಂದು ತಪ್ಪಾಗಿ ಭಾವಿಸಬಾರದು. ಅವರು ಈ ಗೊಂದಲವನ್ನು ಸೃಷ್ಟಿಸುವುದರಿಂದ ತಮ್ಮನ್ನು ತಾವು ಮೋಸಗೊಳಿಸಿಕೊಳ್ಳುತ್ತಾರೆ.

ಅವರು ತಮ್ಮಲ್ಲಿರುವ ದೈವೀ ಉಪಸ್ಥಿತಿಯ ಬಗ್ಗೆ ಜಾಗೃತರಾಗಿರಬೇಕು, ಮತ್ತು ಅದಕ್ಕಾಗಿ ಅಹಂಕಾರವನ್ನು ಮೌನಗೊಳಿಸಬೇಕು ಮತ್ತು ಬಯಕೆಗಳು ಕಣ್ಮರೆಯಾಗಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/219–20**

ನಮಗೆ ಕರ್ಮ ಯೋಗವನ್ನು ಕಲಿಸಿದ ಶ್ರೀ ಅರಬಿಂದೋ ಅವರ ಆದರ್ಶವನ್ನು ಅರಿತುಕೊಳ್ಳಲು ಅರೋವಿಲ್ಲೆಯನ್ನು ಸ್ಥಾಪಿಸಲಾಗಿದೆ. ಅರೋವಿಲ್ಲೆ ಇರುವುದು ಕರ್ಮ ಯೋಗವನ್ನು ಮಾಡ ಬಯಸುವವರಿಗಾಗಿ.

ಅರೋವಿಲ್ಲೆಯಲ್ಲಿ ವಾಸಿಸುವುದೆಂದರೆ ಕರ್ಮ ಯೋಗವನ್ನು ಮಾಡುವುದಾಗಿದೆ. ಆದ್ದರಿಂದ ಎಲ್ಲ ಅರೋವಿಲ್ಲೆ ನಿವಾಸಿಗಳು ಒಂದು ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು ಮತ್ತು ಅದನ್ನು ಯೋಗವೆಂದು ಮಾಡಬೇಕು.

*

(ಅರೋವಿಲ್ಲೆಯ ಅಭಿವೃದ್ಧಿಗೆ ಸಹಾಯ ಮಾಡಲು ಸಿದ್ಧವಿರುವ ಕೆಲವು ವ್ಯಕ್ತಿಗಳು ಮತ್ತು ಗುಂಪುಗಳ ಬಗ್ಗೆ)

ಅವರು ಸ್ವತಃ ಅಭ್ಯಾಸ ಮಾಡದಿರಬಹುದು, ಆದರೆ ಅವರಿಗೆ ಯೋಗದ ಬಗ್ಗೆ ತಿಳುವಳಿಕೆ ಇಲ್ಲದಿದ್ದರೆ, ಅವರು ಅರೋವಿಲ್ಲೆಯ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದಾರೂ ಹೇಗೆ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/222–247** – **ಶ್ರೀಮಾತೆ**

# ಅರೋವಿಲ್ಲೆಯಆತ್ಮ

**– ಅನು: ಕಿಶೋರಕುಮಾರ ಕಾಸಾರ, ಕಲಬುರ್ಗಿ**

## ಮಾತೃಮಂದಿರ

ನಾವು ಮಾತೃಮಂದಿರವನ್ನು ನಿರ್ಮಿಸಲೆಂದು ಬದ್ಧರಾಗಿದ್ದೇವೆ. ಅದುವೇ ನಮ್ಮ ಧ್ಯೇಯವಾಗಿದೆ. ಈ ಮಾತೃಮಂದಿರದ ನಿರ್ಮಾಣ ಕಾರ್ಯದಲ್ಲಿ ಸ್ವ–ಇಚ್ಛೆಯಿಂದ ಯಾರು ಕೈಜೋಡಿಸಲು ಬರುವರೋ ಅವರೆಲ್ಲರಿಗೂ ಈ ಮಹತ್ಕಾರ್ಯದಲ್ಲಿ ಸಮಾನ ಸ್ಥಾನವಿದೆ. ಹೀಗೆ ಸರ್ವರೂ ಒಂದಾಗಿ ನಿರ್ಮಿಸುವ ಈ ಮಾತೃಮಂದಿರವು ಬಹು ಮುಖ್ಯ ಯೋಜನೆಯಾಗಿದೆ.

ಈ ಮಹಾನ್ ಯೋಜನೆಯು ಸದ್ಯದಲ್ಲೇ ಆರಂಭವಾಗಲಿದ್ದು, ಅದನ್ನು ಆದಷ್ಟು ತ್ವರಿತದಲ್ಲಿ ಕಾರ್ಯಗತಗೊಳಿಸಬೇಕಾಗಿದೆ. ಈ ಯೋಜನೆಯಲ್ಲಿ ಕಾರ್ಯನಿರ್ವಹಿಸಲೆಂದು ಬರುವ ಸರ್ವರಿಗೂ ಮುಕ್ತ ಸ್ವಾಗತವಿದೆ. ಇಂತಹ ಒಂದು ಮಾತೃಮಂದಿರವನ್ನು ನಿರ್ಮಾಣವನ್ನು ನಾವು ಬಹು ಹಿಂದೆಯೇ ಯೋಜಿಸಿದ್ದೆವು. ನಮ್ಮ ಈ ಧ್ಯೇಯಕ್ಕೆ ಹೆಗಲೆಣೆಯಾಗಿ ದುಡಿವ ಮನಸ್ಸುಗಳಿಗೆ ಇಲ್ಲಿ ಸ್ವಗತ ತೃಪ್ತತೆಯಿಂದ ಕೆಲಸ ಮಾಡುವ ಸ್ವಾತಂತ್ರ್ಯವಿದೆ. ಈ ಮಾತೃಮಂದಿರವು ನಗರದ ಮಧ್ಯಭಾಗದಲ್ಲಿದ್ದು ನಗರದ ಆಕರ್ಷಣೆಯ ಕೇಂದ್ರವಾಗಲಿದೆ.

ಈ ಮಹತ್ಕಾರ್ಯವನ್ನು ಅರಿಯದೇ, “ಇಲ್ಲ ನನಗೆ ಈ ಯೋಜನೆಯಲ್ಲಿ ಪಾಲ್ಗೊಳ್ಳುವ ಇಚ್ಛೆಯಿಲ್ಲ!” ಎಂದು ದೂರಸರಿವ ವ್ಯಕ್ತಿಗೆ ಈ ಮಾತೃಮಂದಿರದ ನಿರ್ಮಾಣದ ಅಗತ್ಯತೆಯನ್ನು ತಿಳಿಹೇಳಿ, ಈ ಯೋಜನೆಯ ಸಂಪೂರ್ಣ ವಿವರಣೆಯನ್ನು ತಿಳಿಸಿ ಅವರನ್ನೂ ಈ ನಿರ್ಮಾಣ ಕಾರ್ಯಕ್ಕೆ ಬರುವಂತೆ ಮನಃಪರಿವರ್ತಿಸಬೇಕಾಗಿದೆ. ಹಾಗಾಗಿ ಈ ಕಾರ್ಯಕ್ಕೆ ಸಹವರ್ತಿಗಳಾಗಿ ನೀವೂ ಬನ್ನಿ. ನಿಮ್ಮವರನ್ನೂ ಕರೆತನ್ನಿ.

ನಿರ್ಮಾಣವಾಗಲಿರುವ ಮಾತೃಮಂದಿರವು ಅರೋವಿಲ್ಲೆಯ ಶಕ್ತಿಯಾಗಿ, ಆಂತರ್ಯದ ಚೈತನ್ಯವಾಗಿ, ಸಮನ್ವಯದ ಚಿಲುಮೆಯಾಗಿ ನೆಲೆಸಲಿದೆ.

ಮಾತೃಮಂದಿರದ ನಿರ್ಮಾಣದ ಹಂತದಲ್ಲಿ ಸರಿಸುಮಾರು ಸರ್ವ ವಿಧದ ಕಾರ್ಮಿಕರಿಗೂ ಇಲ್ಲಿ ಕೆಲಸವಿದೆ. ಇಲ್ಲಿ ಉದ್ಯಾನವನಗಳನ್ನು, ಕುಸುರಿ ಕೆತ್ತನೆಗಳನ್ನು, ಇನ್ನು ಹಲವು ವಿಧದ ಆಕರ್ಷಣೀಯ ವಾಸ್ತು ವಿನ್ಯಾಸಗಳನ್ನು ನಿರ್ಮಿಸಲಿದ್ದೇವೆ.

ಹಾಗಾಗಿ ನಮಗೆ ಇಂಜಿನೀಯರ್‌ಗಳ, ವಾಸ್ತು ಶಿಲ್ಪಿಗಳ, ಉದ್ಯಾನ ನಿರ್ಮಾತೃಗಳ ಅವಶ್ಯಕತೆಯಿದೆ. ಆದ ಕಾರಣ ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನಮ್ಮ ಜೊತೆಯಾಗಿ ನಿಂತು ಈ ಮಹೋನ್ನತ ಯೋಜನೆಯನ್ನು ಆರಂಭಿಸಿ, ಪೂರ್ಣಗೊಳಿಸುವ ಹೊಣೆ ನಿಮ್ಮದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/341–42**

**ಹಳೆಯ ಮತ್ತು ಹೊಸ ಮಾರ್ಗಗಳು**

ಅರೋವಿಲ್ಲೆಯಲ್ಲಿ ವಾಸಿಸುವ ಸದಸ್ಯರುಗಳು ತಮ್ಮ ಅಧೋಗತಿಗೆ ಕಾರಣವಾಗಲಿರುವ, ಪ್ರಜ್ಞೆಯನ್ನು ಸಂಕುಚಿತಗೊಳಿಸುತ್ತಾ ಕೊನೆಗೆ ಪ್ರಜ್ಞೆಯನ್ನೇ ಹಾನಿಗೊಳಿಸುವ ತಮ್ಮ ಹಳೆಯ ಅಭ್ಯಾಸಗಳಾದ ಮಧ್ಯಪಾನ, ಧೂಮಪಾನ, ಡ್ರಗ್ಸ್ ಮುಂತಾದ ವ್ಯಸನಗಳಿಗೆ ಅಂಟಿಕೊಂಡಿದ್ದರೆ, ಅಂತಹ ಆಶ್ರಮವಾಸಿಗಳಿಗೆ ನಾನು ಹೇಳುವುದಿಷ್ಟೇ, "ನಿಮ್ಮ ವ್ಯಸನಗಳೇ ನಿಮ್ಮ ಅಸ್ತಿತ್ವವನ್ನು ತುಂಡು ತುಂಡಾಗಿ ಕತ್ತರಿಸುತ್ತವೆ. ಹಾಗಾಗಿ ಅಂತಹ ದುಶ್ಚಟಗಳಿಂದ ದೂರವಾಗಿ, ಪ್ರಜ್ಞಾಪ್ರಭಾತದೆಡೆ ಆರೋಹಣ ಗೈಯಬೇಕೆ ಹೊರತು, ಅವನ್ನೇ ನೆಚ್ಚಿಕೊಂಡು ಪ್ರಜ್ಞಾಪಾತಕ್ಕೇ ಇಳಿಯಬಾರದು!" ಅದಾಗ್ಯೂ ಈ ವಾಣಿಯನ್ನು ಅರ್ಥಮಾಡಿಕೊಳ್ಳದವರಿಗೆ ನಾನು ಹೇಳಲಿಚ್ಛಿಸುವ ಇನ್ನೊಂದು ಮಾತೆಂದರೆ, "ನಾವು ಬರಲಿರುವ ದಿನಗಳಲ್ಲಿ ಹೆಚ್ಚು ಪರಿಪೂರ್ಣವಾದ ಜೀವನವನ್ನು ಅನ್ವೇಷಿಸುತ್ತ ಸಾಗಿದಂತೆ, ನಮ್ಮ ಬದುಕು ಇಂದಿಗಿಂತ ನಾಳೆ ಉತ್ತಮವಾಗಿರುತ್ತದೆ. ಎಂಬುದನ್ನು ತೋರಿಸುವುದೇ ಅರೋವಿಲ್ಲೆಯ ಗುರಿಯಾಗಿದ್ದು, ಅದನ್ನು ಸಾಧಿಸಲು ನೀವು ನಿಮ್ಮ ದುಶ್ಚಟಗಳಿಂದ ದೂರವಾಗಿರಿ."

ಕೆಲವರ ಪ್ರಕಾರ ಮಧ್ಯಪಾನ, ಧೂಮಪಾನಗಳಂತಹ ಅಭ್ಯಾಸಗಳು ಬರಲಿರುವ ನಾಳಿನ ಯುಗದಲ್ಲಿ ಜೀವನ ಶೈಲಿಗಳೇ ಆಗಲಿವೆ ಎಂದು ತಿಳಿದಿದ್ದಾರೆ. ಅದು ಅವರವರ ಅರಿವಿಗೆ ಸಂಬಂಧಿಸಿದ್ದು. ಒಂದು ವೇಳೆ ಅವರು ನಿಮ್ಮ ಬುದ್ಧಿವಾದವನ್ನು ನಿರಾಕರಿಸಿ ಅವರ ವ್ಯಸನಗಳಿಗೇ ಅಂಟಿಕೊಂಡು ಬದುಕ ಬಯಸಿದರೆ, ಅವರ ಪಾಡಿಗೆ ಅವರನ್ನು ಬಿಟ್ಟುಬಿಡಿ, ಒಂದೊಮ್ಮೆ ಅವರೇ ತಾವು ರಚಿಸಿರುವ ಬಯಕೆಯ ಬಂಧನದೊಳಗೆ ತಾವೇ ಸೆರೆಯಾಳಾಗಿ ಬದುಕುತ್ತಿರುವದನ್ನು ಅರಿಯುತ್ತಾರೆ. ಅದೇನೇ ಇರಲಿ, ಇಷ್ಟು ಹೇಳುತ್ತಿರುವ

ನಾನೇನೂ ನೈತಿಕವಾದಿಯೇನಲ್ಲ! ನಾನಿಲ್ಲಿ ಕೇವಲ ಅವರ ದಾರಿಗೆ ಅವರನ್ನು ಬಿಟ್ಟುಬಿಡಲು ಹೇಳುತ್ತಿದ್ದೇನೆ, ಏಕೆಂದರೆ ಅವರು ತಮ್ಮ ಜೀವನ ಮಾರ್ಗವನ್ನು ತಾವೇ ರೂಢಿಸಿಕೊಳ್ಳಬೇಕೇ ಹೊರತು ಬೇರೆ ಯಾರಿಂದಲೂ ಅವರನ್ನು ಸನ್ಮಾರ್ಗಕ್ಕೆ ತರಲು ಸಾಧ್ಯವಿಲ್ಲ. ಹಾಗಾಗಿ ಅವರನ್ನು ಅವರ ವ್ಯಸನಕ್ಕೆ ಜೊತೆಗಾರರಾಗಿರಲು ಬಿಟ್ಟುಬಿಡಿ, ಆದರೆ ಆಶ್ರಮವು ಅಂತಹ ಅನೀತಿಗಳಿಗೆ ಪ್ರೋತ್ಸಾಹವನ್ನು ನೀಡುವದಿಲ್ಲ. ದೈವೀ ಕೃಪೆಯಿಂದ ಆಶ್ರಮವಾಸಿಗಳಾದ ನಾವು ಬೇರೇಯೇ ಆದ ಜೀವನ ಮಾರ್ಗವನ್ನು ಕಂಡುಕೊಂಡಿದ್ದೇವೆ. ನಾವು ನಮ್ಮ ಆಂತರ್ಯದ ಜೀವನಾನುಭವದಿಂದಲೇ ಸಂತೃಪ್ತರಾಗಿದ್ದೇವೆ, ನಮಗೆ ಬೇರೆ ಯಾವ ಡ್ರಗ್ಸ್‌ನ ಅವಶ್ಯಕತೆಯೂ ಇಲ್ಲ. ನಾವು ಇಲ್ಲಿಯೇ ಕುಳಿತು ಅಜ್ಞಾತ ಪ್ರಪಂಚಗಳೆಡೆ ಪಯಣಿಸುವ ಸಾಮರ್ಥ್ಯವನ್ನು ಪಡೆಯುತ್ತಲಿದ್ದೇವೆ, ಈ ಹಂತದಲ್ಲಿ ನಾವು ಪಡೆಯಲಿರುವ ಅನುಭವವು ಜಗತ್ತಿನ ಬೇರಾವ ಡ್ರಗ್ಸ್‌ಗೂ ದೊರಕಿಸಲು ಸಾಧ್ಯವಿಲ್ಲ. ಇಲ್ಲಿ ನಮ್ಮ ಮಾರ್ಗವನ್ನು ನಾವೇ ಕಂಡುಕೊಂಡು ಮುಂದೆ ಸಾಗಿ ಆಂತರ್ಯದ ಪ್ರಪಂಚಕ್ಕೆ ತೆರಳಿ ಆನಂದಾನುಭವವನ್ನು ಹೊಂದಬೇಕಿದೆ.

ಮುಂಬರುವ ದಿನಗಳಲ್ಲಿ ಅರೋವಿಲ್ಲೆಯು ಉನ್ನತ ಜೀವನದ ಕೇಂದ್ರ ನೆಲೆಯಾಗಿ ಬದಲಾಗಲಿದೆ. ಅಂದು ಅರೋವಿಲ್ಲೆಯ ಸರ್ವ ನಿವಾಸಿಗಳೂ ಉನ್ನತ ಶಕ್ತಿಗಳನ್ನು ಹೊಂದಿ ಪ್ರಪಂಚದ ಯಾವ ಮೂಲೆಗೆ ಬೇಕಾದರೂ ಬೆಳಕಿನ ವೇಗದಲ್ಲಿ ಪಯಣಿಸಬಲ್ಲರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/345**

**ಭವಿಷ್ಯದ ಜನಾಂಗ**

"ನಮ್ಮ ಆರಂಭಿಕ ಸ್ಥಿತಿಯು ಆಂತರ್ಯದ ಅನ್ವೇಷಕವಾಗಿದೆ." ಎಂಬುದನ್ನರಿತು ಪ್ರಸ್ತುತ ಪ್ರಪಂಚಕ್ಕೂ ಬರಲಿರುವ ದಿವ್ಯ ಯುಗಕ್ಕೂ ಇರಬೇಕಿರುವ ವ್ಯತ್ಯಾಸಗಳನ್ನು ಅರಿತು ಮುಂದಡಿಯಿಡಬೇಕಿದೆ.

*ಹಾಗಾದರೆ ಪ್ರಸ್ತುತ ಯುಗಕ್ಕೂ ಬರಲಿರುವ ದಿವ್ಯ ಯುಗಕ್ಕೂ ಮಧ್ಯೆ ಏನಾದರೂ ಆರಂಭಿಕ ಸ್ಥಿತಿಯ ಅವಶ್ಯಕತೆಯಿದೆಯೇ ?*

ಆ ಯುಗ ಪ್ರವರ್ತನವು ತಾನೇ ತಾನಾಗಿ ಜರುಗುತ್ತದೆ.

*ಈ ಹಂತದಲ್ಲಿ ನಾವೆಲ್ಲರೂ ಬರಲಿರುವ ದಿವ್ಯ ಯುಗದಲ್ಲಿ ಪ್ರಸ್ತುತತೆಯ ಯಾವ ಅಂಶಗಳು ಇರಬಾರದೆಂದು ಧೇನಿಸಿ ಕಾರ್ಯಪ್ರವೃತ್ತರಾಗಬೇಕು. ಮತ್ತು ಆಂತರ್ಯಕ್ಕಿಳಿದು ನಾವು ರಚಿಸಿಕೊಂಡ ಸಾಮಾಜಿಕ, ನೈತಿಕ, ಧಾರ್ಮಿಕ ಕಟ್ಟಳೆಗಳನ್ನು ಮತ್ತೊಮ್ಮೆ ಪರಾಮರ್ಶಿಸಿ ನೂತನ ಯುಗಕ್ಕೆ ತಕ್ಕಂತೆ ಅದನ್ನು ಪುನರ್ ನಿಯೋಜಿಸಿ ಸ್ಥಾಪಿಸಬೇಕಿದೆ.*

ಹಾಗಾಗಿ ನಾವೀಗ ಕ್ರಮೇಣ ಒಂದೊಂದೇ ಅಗತ್ಯತೆಗಳನ್ನು ಚರ್ಚಿಸುತ್ತ ಸಾಗೋಣ. (ಶ್ರೀಮಾತೆಯವರು ಬರೆಯುತ್ತ ಸಾಗಿದರು.)

ಈ ಅಗತ್ಯತೆಗಳನ್ನು ನಿಬಂಧನೆ ಎನ್ನುವದಕ್ಕಿಂತ ಅವಶ್ಯಕತೆಗಳಾಗಿವೆ.

1. ನಾವೀಗಾಗಲೇ ನಿರ್ಮಿಸಿಕೊಂಡಿರುವ ಸಾಮಾಜಿಕ, ನೈತಿಕ, ಸಾಂಸ್ಕೃತಿಕ, ಜನಾಂಗೀಯ ಹಾಗೂ ಅನುವಂಶಿಕ ಕಟ್ಟಳೆಗಳ ಹಿಂದೆ ಇರುವ ಸತ್ಯಾಸತ್ಯತೆಗಳನ್ನು ಅರಿಯಲು ನಾವು ಆಂತರ್ಯಕ್ಕಿಳಿದು ಭೂತ ಕಾಲವನ್ನು ಹೊಕ್ಕು ಅದರ ಮೂಲವನ್ನು ಶೋಧಿಸಲೇಬೇಕಿದೆ.

ನಂತರ ನಮ್ಮ ಅನ್ವೇಷಣೆಯನ್ನು ಜಗತ್ತಿನೆದುರು ಸಾರಿ ಹೇಳುತ್ತಾ ಜನ ಸಾಮಾನ್ಯರಿಗೆ ಅದರ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಿದೆ.

ನಮ್ಮ ಈ ಶೋಧನಾ ಕಾರ್ಯದಲ್ಲಿ ನಮಗೆ ಬೆನ್ನೆಲುಬಾಗಿ ನಿಂತಿರುವ ಅವ್ಯಕ್ತ ಚೇತನವೊಂದು ನಮ್ಮನ್ನು ನಮ್ಮ ಸಾಧನೆಯೆಡೆಗೆ ಮುನ್ನುಗ್ಗಿಸುತ್ತಿರುತ್ತದೆ ಎಂದು ಅರಿತು ಕಾರ್ಯಪ್ರವೃತ್ತರಾಗಬೇಕು, ಹಾಗೆಯೇ ನಾವು ಕಂಡ ಸತ್ಯದ ಮಾರ್ಗಗಳನ್ನು ಅರೋವಿಲ್ಲೆಯ ಸ್ತರದಲ್ಲಿ ಸ್ಥಾಪಿಸುತ್ತ ಸಾಗಬೇಕು.

ನಾವು ಪಡೆದ ದಿವ್ಯ ಶಕ್ತಿಗಳನ್ನು ಮೊದಲು ನಾವು ನಂಬಿರುವ ದೈವತಗಳಿಗೆ ಸಮರ್ಪಿಸಿ ನಂತರ ಸ್ಥಾಯಿಯಲ್ಲಿ ಭರಿಸಿಕೊಳ್ಳಬೇಕು. ನನ್ನ ಪ್ರಕಾರ ಇದುವೇ ಅತ್ಯುತ್ತಮ ಮಾರ್ಗ ಎನಿಸುತ್ತದೆ.

ದಿವ್ಯತೆಯೆಡೆಗೆ ಮೊಗಮಾಡಿ ಪ್ರಾರ್ಥಿಸುವ ಸರ್ವರಿಗೂ ನಿತ್ಯ ನಿರಂತರವೂ ಅಮರ ಚಿರಂತನವೂ ಆದ ಆ ಪ್ರಭೃತಿಯು ಸರ್ವ ಸಿದ್ಧಿಗಳನ್ನು ಕರುಣಿಸುತ್ತದೆ. ಹಾಗೆಂದು ಆ ದಿವ್ಯತೆಯು ನೀಡಿರುವ ಚೈತನ್ಯವು ಕೇವಲ ಆವೊಬ್ಬ ವ್ಯಕ್ತಿಗೆ ಮಾತ್ರ ಸೀಮಿತವಾಗಿರುವದಿಲ್ಲ. ಬದಲಿಗೆ ಆ ಸಾಧಕನ ಮೂಲಕ ದಿವ್ಯತೆಯೇ ಒಂದಿಡೀ ಶಕ್ತಿಯ ಮೊತ್ತವನ್ನು ಮರ್ತ್ಯಕ್ಕೆ ಸಂಚಯಿಸಿರುತ್ತದೆ. ಆ ಹಂತದಲ್ಲಿ ಬುವಿಗೆ

ಬಂದಿಳಿದ ಶಕ್ತಿಯ ಒಟ್ಟು ಮೊತ್ತವು ಪೃಥ್ವಿಯ ಸರ್ವ ಜನಾಂಗಕ್ಕೆ ನೀಡಲಾದ ಉಡುಗೊರೆಯಾಗಿದ್ದು, ಅದನ್ನು ಮರ್ತ್ಯಕ್ಕೆ ಇಳಿಸಲು ಆ ಸಾಧಕನು ಒಂದು ವಾಹಕವಾಗಿರುತ್ತಾನೆ. ಹಾಗಾಗಿ ಯಾರೇ ಒಬ್ಬ ವ್ಯಕ್ತಿಯು ಸಾಧಿಸಿದ ಯಾವುದೋ ಒಂದು ಮಹತ್ಕಾರ್ಯವು ಅವನೊಬ್ಬನಿಗೆ ಮಾತ್ರ ಸೀಮಿತವಾಗಿರುವದಿಲ್ಲ ಬದಲಿಗೆ ದಿವ್ಯತೆಯೇ ಅವನಿಂದ ಆ ಕಾರ್ಯವನ್ನು ಸಾಧ್ಯಗೊಳಿಸಿರುತ್ತದೆ ಎಂಬುದನ್ನು ಆ ವ್ಯಕ್ತಿಗೆ ಮನವರಿಕೆ ಮಾಡಿಕೊಡಬೇಕಿದೆ.

ಇದು ವ್ಯಕ್ತಿಯೊಳಗಿರುವ ಅಹಮಿಕೆಯನ್ನು ಕಿತ್ತೆಸೆಯಲು ಸಹಕಾರಿಯಾಗುತ್ತದೆ.

ಇದುವೇ ಬರಲಿರುವ ದಿವ್ಯ ಯುಗದ ಜನಾಂಗದ ಅಂತಃಸತ್ವವನ್ನು ಪ್ರಚುರಪಡಿಸಲಿದೆ.

*ಮೇಲಿನ ಎರಡನೇ ಮತ್ತು ಮೂರನೇ ಪ್ಯಾರಾಗ್ರಾಫ್‌ಗಳಲ್ಲಿ ನೀವು ಆಸೆ ಮತ್ತು ವ್ಯಾಮೋಹವನ್ನು ತ್ಯಜಿಸುವ ಕುರಿತು ಹೇಳಿದ್ದಿರಿ. ಅದನ್ನು ಕಾರ್ಯ ರೂಪಕ್ಕೆ ತರುವ ವಿಧಾನವನ್ನು ತಿಳಿಸಿ.*

ನಮ್ಮ ಆಸೆಗಳನ್ನು ತ್ಯಜಿಸುವ, ಹಾಗೂ ಗಳಿಸಿಕೊಂಡ ಸಂಪತ್ತಿನ ಮೇಲಿನ ವ್ಯಾಮೋಹವನ್ನು ವರ್ಜಿಸುವ ಏಕೈಕ ಮಾರ್ಗವೆಂದರೆ, ನಮ್ಮನ್ನು ನಾವು ದಿವ್ಯತೆಗೆ ಅರ್ಪಿಸಿಕೊಂಡು ಅದು ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆದು ನಮ್ಮ ಗಮ್ಯವನ್ನು ತಲುಪುವದಾಗಿದೆ.

*ಆರಂಭದಲ್ಲಿ ನೀವೇ, "ಅರೋವಿಲ್ಲೆಯ ಪ್ರಜೆಗಳು ನೈತಿಕ ಕಟ್ಟಳೆಗಳಿಂದ ದೂರವಾಗಲು ಪ್ರಯತ್ನಿಸುತ್ತಾರೆಯೇ ವಿನಃ ಮುಕ್ತ ಅಥವಾ ಸ್ವೇಚ್ಛೆಯಾಗಿ ಬದುಕಲು ಪ್ರಯತ್ನಿಸುವದಿಲ್ಲ" ಎಂದು ಹೇಳಿದ್ದಿರಿ.*

ಹೌದು ಅದುವೇ ಸತ್ಯ (ಶ್ರೀಮಾತೆಯವರು ಬರೆಯುತ್ತಾರೆ.)

2. ಜನರು ನೈತಿಕ ಮತ್ತು ಸಾಮಾಜಿಕ ಸಂಪ್ರದಾಯಗಳಿಂದ ವಿಮುಕ್ತರಾಗಿ ಬೇರೊಂದು ದಿವ್ಯ ಜೀವನಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳಲೆಂದು ಅರೋವಿಲ್ಲೆಗೆ ಬರುತ್ತಾರೆ. ಹಾಗೆಂದು, ಅವರು ನಡೆಸುವ ಜೀವನ ಸ್ವಾತಂತ್ರ್ಯವು ಅವರನ್ನು ಅಹಂಕಾರ, ಆಸೆ ಮತ್ತು ಮಹತ್ವಾಕಾಂಕ್ಷೆಗೆ ಅವರನ್ನು ಪ್ರೇರೇಪಿಸುತ್ತದೆ ಎಂದು ಅರ್ಥವಲ್ಲ.

*ಮೂರನೇ ಪ್ಯಾರಾಗ್ರಾಫ್‌ದಲ್ಲಿ ನೀವು, "ಅರೋವಿಲ್ಲೆಯ ಸದಸ್ಯರು ತಮ್ಮ ವೈಯಕ್ತಿಕ ಕಲ್ಪನೆಯಿಂದ ದೂರವಾಗಿ ಬದುಕಬೇಕೆ"ಂದು ತಿಳಿಸಿದ್ದೀರಿ.*

ಇಲ್ಲ, ಅಲ್ಲಿ ನಾನು 'ಕಲ್ಪನೆ' ಎಂದು ಹೇಳಿಲ್ಲ. 'ಭಾವನೆ' ಎಂದು ಹೇಳಿದ್ದೇನೆ.

3. ಅರೋವಿಲ್ಲೆಯ ಸದಸ್ಯರು ತಮ್ಮ ವೈಯಕ್ತಿಕ ಭಾವನೆಗಳಿಂದ ಮುಕ್ತರಾಗಬೇಕಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 3 ಜೂನ್, 1970**

ಈ ಹಿಂದೆ ಸ್ವೀಡನ್ ಅಥವಾ ನಾರ್ವೆಯ ಮಹಿಳೆಯೋರ್ವರು ನನಗೆ ಶಿಲುಬೆಯೊಂದನ್ನು ಕಳಿಸಲೆಂದು ನೋಡಿದ್ದರು. ಆ ವಿಷಯವನ್ನು ನಾನು ನಿಮಗೆ ತಿಳಿಸಿದ್ದೇನೆಯೇ? ಬಹುಶಃ ತಿಳಿಸಿರಬಹುದು. ಆದರೆ ನಿಮಗೆ ಆ ಎರಡು ಬರವಣಿಗೆಗಳನ್ನು ಮಾತ್ರ ತೋರಿಸಿಲ್ಲ. ನೋಡಿ, ನಾನಿಲ್ಲಿ ಮೊದಲು ನಕ್ಷತ್ರ ಮಂಡಲದ ಮತ್ತು ಅರೋವಿಲ್ಲೆಯ ಫೋಟೊಗಳನ್ನು ಇಟ್ಟು ಕೆಳಗೆ ಶಿಲುಬೆಯನ್ನು ಇಟ್ಟಿದ್ದೇನೆ. ಅಲ್ಲಿರುವ ವಾಣಿಯನ್ನು ಓದಿ ನೋಡಿ (ಶ್ರೀಮಾತೆಯವರೇ ಓದಿ ಹೇಳುತ್ತಾರೆ).

"ದೈವೀಕ ಪ್ರಜ್ಞೆಯನ್ನು ಮಾನವನ ಆಸೆಗಳೆಂಬ ಶಿಲುಬೆಗೆ ಏರಿಸಲಾಗಿದೆ."

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 23 ಏಪ್ರಿಲ್, 1968**

**(21 ಫೆಬ್ರವರಿ 1971 ರಂದು ಜರುಗಿದ ಮಾತೃಮಂದಿರದ ಶಂಕುಸ್ಥಾಪನೆಯ ಶುಭಸಂದರ್ಭದಲ್ಲಿ ಸೂಚಿಸಲಾದ ಸಂದೇಶ)**

ಮಾತೃಮಂದಿರವು ಅರೋವಿಲ್ಲೆಯ ದಿವ್ಯ ಆಕಾಂಕ್ಷೆಯನ್ನು ಕಾರ್ಯಗತ–ಗೊಳಿಸಲಿರುವ ಜೀವಂತವಾದ ಸಂಕೇತವಾಗಿ ನಿಲ್ಲಲಿದೆ.

**(ಮಾತೃಮಂದಿರದ ರಚನೆಗೂ ಮುನ್ನ ನೀಡಲಾದ ಸಂದೇಶ)**

ಎಲ್ಲರೂ ಒಂದಾಗಿ ಸಮನ್ವಯ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸಿ.

ದಿವ್ಯ ಪ್ರಕಾಶ ಮತ್ತು ದಿವ್ಯಾನಂದಗಳಿರುವ ಏಕತೆಯೆಡೆಗಿನ ಆಕಾಂಕ್ಷೆ.

ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/223–24**

**ಚತುಸ್ಥಂಬಗಳ ಮಹತ್ವ**

ಉತ್ತರ–ಮಹಾಕಾಳಿ

ಪೂರ್ವ–ಮಹಾಲಕ್ಷ್ಮಿ

ದಕ್ಷಿಣ–ಮಹೇಶ್ವರಿ

ಪಶ್ಚಿಮ–ಮಹಾಸರಸ್ವತಿ

**(ಮಾತೃಮಂದಿರದ ಅಡಿಪಾಯದಿಂದ ಹೊರಡುವ ನೆಲಮಾಳಿಗೆಯಲ್ಲಿರುವ ಹನ್ನೆರಡು ಕೋಣೆಗಳ ಮಹತ್ವ, ಜುಲೈ 1972)**

ಪ್ರಾಮಾಣಿಕತೆ, ವಿನಮ್ರತೆ, ಕೃತಜ್ಞತೆ, ಪರಿಶ್ರಮ, ಆಕಾಂಕ್ಷೆ, ಗ್ರಹಿಕೆ, ಧೈರ್ಯ, ಒಳ್ಳೆಯತನ, ಉದಾರ, ಮನೋಭಾವ, ಸಮಾನತೆ ಮತ್ತು ಶಾಂತಿ.

**(ಮಾತೃಮಂದಿರದ ಸುತ್ತ ಇರುವ ಹನ್ನೆರಡು ಉದ್ಯಾನವನಗಳ ಮಹತ್ವ)**

ಅಸ್ತಿತ್ವ, ಪ್ರಜ್ಞೆ, ಆನಂದ, ಪ್ರಕಾಶ, ಜೀವನ, ಶಕ್ತಿ, ಸಂಪತ್ತು, ಉಪಯುಕ್ತತೆ, ಪ್ರಗತಿ, ಯೌವನ, ಸಾಮರಸ್ಯ ಮತ್ತು ಪರಿಪೂರ್ಣತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/226**

**ಮಾತೃಮಂದಿರ**

ನಾನೀಗಾಗಲೇ ಮಾತೃಮಂದಿರ ರೂಪು ನಕ್ಷೆಯನ್ನು ನೋಡಿದ್ದೇನೆ. ನೀವು ನೋಡುವಿರಾದರೆ ಬನ್ನಿ ಇಲ್ಲಿ (ಶ್ರೀಮಾತೆಯವರು ನಕ್ಷೆಗಳಿರುವ ಮೂರು ಸುರುಳಿಗಳನ್ನು ಒಂದಾದ ಮೇಲೆ ಒಂದರಂತೆ ಬಿಚ್ಚುತ್ತಾ ಸಾಗಿದರು): ಇಲ್ಲಿ ಒಟ್ಟು 12 ಮುಖಗಳಿವೆ. ಮಧ್ಯದಲ್ಲೊಂದು ವೃತ್ತ. ಆ ಕೇಂದ್ರದಿಂದ ಸುತ್ತ ಸಮಾನ ಅಂತರದಲ್ಲಿ 12 ಕಾಲಮ್‌ಗಳು, ಮಧ್ಯದ ನೆಲದ ಮೇಲೆ ನನ್ನ ಚಿಹ್ನೆ. ಹಾಗೂ ಈ ಚಿಹ್ನೆಯ ಮಧ್ಯೆ ಶ್ರೀ ಅರವಿಂದರ ನಾಲ್ಕು ಚಿಹ್ನೆಗಳು ಒಂದಕ್ಕೊಂದು ನೇರವಾಗಿದ್ದು ಚೌಕದಲ್ಲಿ ಸಂಧಿಸುವಂತಿದೆ. ಕೊನೆಗೆ ಈ ಚೌಕದ ಮೇಲೆ ಒಂದು ಅರೆ ಪಾರದರ್ಶಕವಾದ ಒಂದು ಗ್ಲೋಬ್‌ನ್ನು ಇಡಲಾಗುವುದು. ಆದರೆ ಈ ಗ್ಲೋಬ್‌ನ್ನು ಯಾವ ವಸ್ತುವಿನಿಂದ ರಚಿಸಲಾಗುತ್ತದೆ ಎಂಬುದು ಇನ್ನು ನಿಗದಿಯಾಗಿಲ್ಲ. ಮೇಲೆ ಛಾವಣಿಯಿಂದ ಬೀಳುವ ಸೂರ್ಯನ ಬೆಳಕು ನೇರವಾಗಿ ಈ ಗ್ಲೋಬ್

ಮೇಲೆಯೇ ಬೀಳುವಂತಿರಬೇಕು. ಸೂರ್ಯನ ಬೆಳಕಿರದ ರಾತ್ರಿ ಹೊತ್ತಿನಲ್ಲಿ ಒಂದು ಬೀಮ್ ಲೈಟ್ ಪ್ರಕಾಶಿಸುತ್ತಿರಬೇಕು.

ನೆಲದ ಮೇಲಾಗಲಿ ಗೋಡೆಯ ಮೇಲಾಗಲಿ ಎಲ್ಲೂ ಪೀಠೋಪಕರಣ–ಗಳಿರುವದಿಲ್ಲ. ಅದರ ಬದಲಿಗೆ ನೆಲದ ಮೇಲೆ ಮರದ ಹಾಸು ಇರುತ್ತದೆ. ಅದರ ಮೇಲೆ ದಪ್ಪನೆಯ ರಬ್ಬರ್‌ನ ಹೊದಿಕೆಯಿದ್ದು, ಅದರ ಮೇಲೆ ಕಾರ್ಪೆಟ್‌ನ್ನು ಹಾಸಲಾಗುತ್ತದೆ. ಆದರೆ ಈ ಎಲ್ಲಾ ವಸ್ತುಗಳು ಶ್ವೇತ ವರ್ಣದ್ದೇ ಆಗಿರಬೇಕು. ಆದರೆ ಶ್ರೀ ಅರವಿಂದರ ಸಾಂಕೇತಿಕ ಚಿಹ್ನೆಯು ಶ್ವೇತ ವರ್ಣದ್ದೇ ಎಂದು ಹೇಳಲಾಗುವದಿಲ್ಲ. ನನ್ನ ದರ್ಶನದಲ್ಲಿ ಮಾತ್ರ ಅದನ್ನು ಚಿನ್ನ ಮತ್ತು ಕಿತ್ತಳೆ ಬಣ್ಣಗಳ ಮಧ್ಯದ ಯಾವುದೋ ಅವ್ಯಕ್ತ ವರ್ಣದಿಂದ ಶೋಭಿಸುವದನ್ನು ಕಂಡಿದ್ದೇನೆ. ಈ ರಚನೆಗಳೆಲ್ಲ ನೇರವಾಗಿದ್ದು, ಶಿಲೆಯಿಂದ ರಚಿತವಾಗಿರುತ್ತವೆ. ಅರೆ ಪಾರದರ್ಶಕವಾದ ಗ್ಲೋಬ್‌ನ ಕೆಳ ಭಾಗದಿಂದ ಒಂದು ವಿದ್ಯುತ್ತಿನ ಬೆಳಕು ನಿರಂತರವಾಗಿ ಮೇಲ್ಮುಖವಾಗಿ ಬೆಳಗುತ್ತಿರುತ್ತದೆ. ಇದರ ಹೊರತಾಗಿ ಬೇರೆ ಯಾವುದೇ ಯಂತ್ರಗಳಾಗಲೀ, ಪೀಠೋಪಕರಣಗಳಾಗಲೀ ಅಲ್ಲಿರುವದಿಲ್ಲ. ಆ ತಾಣವು ಜನರನ್ನು ತಮ್ಮ ಆಂತರ್ಯಕ್ಕಿಳಿದು ಪ್ರಜ್ಞೆಯ ಶೋಧನೆಗೆ ಪ್ರೇರೇಪಿಸುವಂತಿರಬೇಕು.

ಹೊರಗಿನ ನಕ್ಷೆಯು ಹೀಗಿರುತ್ತದೆ (ಶ್ರೀಮಾತೆಯವರು ಇನ್ನೊಂದು ಸುರುಳಿಯನ್ನು ಬಿಚ್ಚಿ ತೋರಿಸುತ್ತಾರೆ.) ಕಟ್ಟಡದ ಮೇಲ್ ಛಾವಣಿಯು ಚೂಪಾಗಿರುತ್ತದೋ ಅಥವಾ ಸಮತಲವಾಗಿರುತ್ತದೋ??? ಇಲ್ಲ, ಇಲ್ಲ, ಅದು ತುಂಬಾ ಸರಳವಾಗಿರುತ್ತದೆ. ಈ ಛಾವಣಿಯು ಸುಮಾರು ಇನ್ನೂರು ಜನರು ಕುಳಿತುಕೊಳ್ಳುವಷ್ಟು ವಿಶಾಲವಾಗಿರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 10 ಜನವರಿ 1970**

# ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

– ಅನುವಾದ: ಜಾನ್ವಿ

## 21

## ಅಧ್ಯಾಯ – 19
## ಸಮತ್ವ

ಜ್ಞಾನ, ನಿರಾಶಿತ್ವ (ಆಶೆಯಿಲ್ಲದಿರುವುದು), ನಿರ್ಮಮತ್ವ, ಸಮತ್ವ, ಆಂತರಿಕ ಸಹಜ ಶಾಂತಿ ಮತ್ತು ಆನಂದ, ಪ್ರಕೃತಿಯ ತ್ರಿಗುಣಗಳ ಸಂಕೀರ್ಣ ಸಂದೋಹದಿಂದ ಮುಕ್ತಿ ಅಥವಾ ಕನಿಷ್ಠ ಪಕ್ಷ ಅವುಗಳನ್ನು ಮೀರಿದ ಸ್ಥಿತಿ – ಇವು ಜೀವನ್ಮುಕ್ತನ ಲಕ್ಷಣಗಳಾಗಿವೆ; ಆದ್ದರಿಂದ ಅವನ ಪ್ರತಿಯೊಂದು ಚಟುವಟಿಕೆಯಲ್ಲಿಯೂ ಇವು ಎದ್ದು ಕಾಣಲೇಬೇಕು. ಇವು ಅವಿಕಾರಿಯಾದ ಶಾಂತಿಯ ನಿಯಮಗಳಾಗಿದ್ದು, ಜೀವನ್ಮುಕ್ತನಾದವನು ತನ್ನೆಲ್ಲ ಚಟುವಟಿಕೆಗಳಲ್ಲಿಯೂ ಈ ಶಾಂತಿಯನ್ನು ಕಾಯ್ದುಕೊಳ್ಳುವುನು, ಎಲ್ಲ ತರಹದ ಸಂಘರ್ಷ, ತನ್ನ ಸುತ್ತಣ ಜಗದಲ್ಲಿರುವ ಶಕ್ತಿಗಳ ಪರಸ್ಪರ ತಿಕ್ಕಾಟದಲ್ಲಿಯೂ ಅವನ ಶಾಂತಿಯು ಕದಡುವುದಿಲ್ಲ. ಈ ಶಾಂತಿಯು ಬ್ರಹ್ಮನು ಈ ಜಗದ ಎಲ್ಲ ವಿಕಟಗಳ ಮಧ್ಯೆ, ಪರಿವರ್ತನೆಗಳ ನಡುವೆ ಕಾಯ್ದುಕೊಳ್ಳುವ ಸಮಾನ ಅವಿಕಾರಿತ್ವದ ಪ್ರತಿಫಲನವಾಗಿದ್ದು, ಜಗದ ಎಲ್ಲ ವೈವಿಧ್ಯಗಳ ನಡುವೆ ಸಹಜ ಹಾಗೂ ಸ್ವಯಂಭೂ ನಿರಾಕಾರ, ನಿರ್ಗುಣ ಏಕತೆಯ ದ್ಯೋತಕವಾಗಿದೆ, ಅದರ ಪ್ರತಿನಿಧಿಯಾಗಿದೆ. ವಿಶ್ವದ ಅಸಂಖ್ಯ ವ್ಯತ್ಯಾಸ, ವೈವಿಧ್ಯಗಳ ನಡುವೆ ಇರುವ ಎಲ್ಲವನ್ನೂ ಸಮಾನವಾಗಿ ಕಾಣುವ, ಸಮತ್ವವನ್ನು ಸ್ಥಾಪಿಸುವ ಏಕತೆಯ ಆತ್ಮವೇ ಅದಾಗಿದೆ. ಆತ್ಮದ ಸಮತ್ವವೇ ನಿಜವಾದ ಏಕೈಕ ಸತ್ಯವಾಗಿದೆ. ಉಳಿದೆಲ್ಲ ಅಸ್ತಿತ್ವದ ವಿವಿಧತೆಗಳ ನಡುವೆ ಏಕರೂಪತೆ, ಹೊಂದಾಣಿಕೆ, ಸಮತೋಲನ ಕಂಡುಬರುವುದೇ ವಿನಃ ಏಕತೆ ಇರುವುದಿಲ್ಲ. ಜಗತ್ತಿನ ಅತ್ಯಂತ ಶ್ರೇಷ್ಠ ಅಥವಾ ಹಿರಿದಾದ ಏಕರೂಪತೆಯುಳ್ಳ ವಸ್ತುಗಳಲ್ಲಿ ಕೂಡ ನಾವು ಅಸಮತ್ವದ ಭೇದವನ್ನು, ಏಕರೂಪತೆಯ ಭೇದವನ್ನು ಹಾಗೂ ಸಮತೋಲನದ ಹೊಂದಾಣಿಕೆಯನ್ನು ನೋಡುತ್ತೇವೆಯೇ ಹೊರತು ಏಕತೆಯನ್ನು ಕಾಣಲಾರೆವು; ಅಲ್ಲಿ ಅಸಮಾನ ತೂಕಗಳ ಹೊಂದಾಣಿಕೆ, ಸಮತೋಲನವಿರುವುದೇ ವಿನಃ ಏಕತೆ ಇರುವುದಿಲ್ಲ.

ಆದ್ದರಿಂದಲೇ ಕರ್ಮ ಯೋಗವನ್ನು ಹೇಳುವಾಗ ಈ ಸಮತ್ವದ ಮೇಲೆ ಒತ್ತು ಕೊಟ್ಟೆ ಗೀತೆ ಹೇಳುತ್ತದೆ. ಈ ಸಮತ್ವವೇ ನಿಜವಾಗಿ ಮುಕ್ತ ಆತ್ಮದ ಈ ಜಗತ್ತಿನ ವಿವಿಧ ಸಂಗತಿಗಳ ಸಂಬಂಧದ ರಹಸ್ಯ ಬೀಗದ ಕೈಯಾಗಿದೆ. ಆತ್ಮ–ಜ್ಞಾನ ನಿರಾಶ್ರಿತ್ವಾ ನಿಷ್ಪಕ್ಷಪಾತ ಆನಂದ ಪ್ರಕೃತಿಯ ತ್ರಿಗುಣಗಳಿಂದ ಮುಕ್ತಿ ಅವು ತಮ್ಮೊಳಗೆ ತಾವು ಸ್ವಸ್ಥವಾದಾಗ ಆತ್ಮೈಕಾಗ್ರತೆ ಹೊಂದಿದಾಗ, ನಿಶ್ಚಲವಾದಾಗ, ಇಂಥ ಸ್ಥಿತಿಗಳಲ್ಲಿ ಸಮತ್ವದ ಅಗತ್ಯ ಇರುವುದಿಲ್ಲ. ಏಕೆಂದರೆ ಆಗ ಸಮತ್ವದ ವಿರುದ್ಧ ಗುಣಗಳ, ಅಸಮಾನತೆಯ ಬೋಧವೇ ಆಗುವುದಿಲ್ಲ. ಆದರೆ ಆತ್ಮವು ಪ್ರಪಂಚದ ಜೊತೆಗೆ, ಅನೇಕತೆಯ ಜೊತೆಗೆ ವ್ಯವಹಾರ ಮಾಡಲು ಆರಂಭಿಸಿದ ತಕ್ಷಣ, ವ್ಯಕ್ತಿಗಳು, ಭೇದಗಳು, ಅಸಮಾನತೆಗಳು ಇವುಗಳನ್ನು ಗುರುತಿಸಿ ಇವುಗಳ ಜೊತೆ ವ್ಯವಹಾರ ಮಾಡತೊಡಗಿದ ಮರುಕ್ಷಣವೇ ತನ್ನ ಮುಕ್ತ ಸ್ಥಿತಿಯ ಇತರ ಲಕ್ಷಣಗಳ ಮೇಲೆ ಏಕತೆಯ ಅಭಿವ್ಯಕ್ತಿಯ ಏಕೈಕ ಲಕ್ಷಣವನ್ನು ಪರಿಣಾಮಕಾರಿಯಾಗಿ ಪ್ರಯೋಗಿಸ–ಬೇಕಾಗುತ್ತದೆ. ಜ್ಞಾನವೆಂಬುದು ಏಕಮೇವಾದ್ವಿತೀಯದ ಜೊತೆಗಿನ ಏಕಾತ್ಮತೆಯ ಅರಿವು. ಈ ಅರಿವು ವಿಶ್ವದ ಅಸಂಖ್ಯಾತ ಜೀವಿಗಳ ಜೊತೆ, ವಸ್ತುಗಳ ಜೊತೆಗೆ, ತನ್ನ ಸಮತ್ವವನ್ನು ಪ್ರದರ್ಶಿಸಬೇಕು. ಈ ಜಗದಲ್ಲಿರುವ ಅಸಂಖ್ಯಾತ ಭೇದಗಳು, ಅಸಂಖ್ಯಾತ ವ್ಯಕ್ತಿತ್ವಗಳು ಇವುಗಳ ಜೊತೆ ತನ್ನ ಶ್ರೇಷ್ಠತೆಯನ್ನು, ಅಧಿಕ್ಯವನ್ನು ತೋರ್ಪಡಿಸುವುದು ನಿರ್ವಿಕಾರ ಆತ್ಮದ ನಿರ್ವ್ಯೆಯಕ್ತಿಕದ (ನಿಷ್ಪಕ್ಷಪಾತ) ನಿದರ್ಶನವಾಗಿದೆ. ವಿಶ್ವದ ಅಸಂಖ್ಯಾತ ವ್ಯಕ್ತಿತ್ವಗಳ ಜೊತೆ ವ್ಯವಹರಿಸುವಾಗ ತನ್ನ ಎಲ್ಲ ಕಾರ್ಯಗಳಲ್ಲಿ ಸಮತ್ವವನ್ನು, ನಿರ್ವ್ಯೆಯಕ್ತಿಕತೆಯನ್ನು ಮೆರೆಯಬೇಕು, ಕಾರ್ಯಗಳು ಎಷ್ಟೇ ಭಿನ್ನವಾಗಿರಲಿ, ಬೇರೆ ಬೇರೆ ಪ್ರಕಾರದವುಗಳಾಗಿರಲಿ ಅವೆಲ್ಲವುಗಳಲ್ಲಿ, ವ್ಯಕ್ತಿ ಮತ್ತು ಸ್ಥಿತ್ಯಂತರಗನುಗುಣವಾಗಿ ಏಕತೆಯನ್ನು ಸಮತ್ವನ್ನು ತೋರ್ಪಡಿಸಲೇಬೇಕು. ಆದ್ದರಿಂದ ಗೀತೆಯಲ್ಲಿ ಕೃಷ್ಣನೇ ಸ್ವತಃ ಹೇಳುತ್ತಾನೆ. “ನನಗೆ ಯಾರೂ ಪ್ರಿಯರೂ ಅಲ್ಲ, ಅಪ್ರಿಯರೂ ಅಲ್ಲ, ನನಗೆ ಎಲ್ಲರೂ ಸಮಾನರೇ, ಎಲ್ಲರೂ ಒಂದೇ” (9.29). ಆದರೂ ಭಕ್ತನಾದವನು ಪರಮಾತ್ಮನ ಸಕಲ ಅನುಗ್ರಹವನ್ನು ಪಡೆಯುತ್ತಾನೆ. ಏಕೆಂದರೆ ಪರಮಾತ್ಮನ ಜೊತೆ ಅವನು ಸಿದ್ಧಪಡಿಸಿದ ಸಂಬಂಧ ವಿಶೇಷವಾದುದು, ಪರಮಾತ್ಮನು ನಿಷ್ಪಕ್ಷಪಾತಿಯು, ಅವನು ಎಲ್ಲರ ಪ್ರಭು, ಅವರವರ ಭಾವಕ್ಕೆ, ಸಾಧನಾ ಮಾರ್ಗಕ್ಕೆ ತಕ್ಕಂತೆ ಅವರನ್ನು ಅವನು ಅನುಗ್ರಹಿಸುತ್ತಾನೆ. ಜಗತ್ತಿನ ಎಲ್ಲ ಸೀಮಿತ ಭೋಗ ವಸ್ತುಗಳ ಅಪೇಕ್ಷೆ ಹಾಗೂ ಆಕರ್ಷಣೆಗಿಂತ ಆಶೆರಹಿತವಾಗಿರುವುದು ನಿಸ್ಸೀಮ ಆತ್ಮ ಚೈತನ್ಯದ ಶ್ರೇಷ್ಠತೆಯನ್ನು ಗರಿಮೆಯನ್ನು ತೋರಿಸುತ್ತದೆ. ಈ ಭೋಗ ವಸ್ತುಗಳ ಜೊತೆ

ಸಂಬಂಧ ಏರ್ಪಟ್ಟಾಗ ಅದು ತನ್ನತನವನ್ನು ಸಮತ್ವ ಹಾಗೂ ನಿಷ್ಪಕ್ಷಪಾತ ತಟಸ್ಥ ಧೋರಣೆಯ ಮೂಲಕ ತೋರಿಸುವುದು ಅಥವಾ ಎಲ್ಲ ಸಂಬಂಧಗಳ ಜೊತೆ, ವಸ್ತುಗಳ ಜೊತೆ ನಿಷ್ಪಕ್ಷಪಾತ, ಸಂಗರಹಿತ ಆನಂದದಿಂದ ವರ್ತಿಸುವುದು. ಏಕೆಂದರೆ ಅದು ಸ್ವಯಂಭೂ, ಸ್ವಯಂತೃಪ್ತ, ಆಲಂಬನಾ ರಹಿತವಾಗಿದ್ದು, ಸಾರ ಮತ್ತು ಅರ್ಥವು ಅಕ್ಷೋಭಿತವೂ, ನಿರ್ವಿಕಾರಿಯೂ ಆಗಿರುವುದು. ಆತ್ಮ ಚೈತನ್ಯದ ಆನಂದವು ತಾನೇ ತಾನಾಗಿರುವುದು, ಲೋಕದ ವಸ್ತುಗಳ ಜೊತೆ, ಜೀವಿಗಳ ಜೊತೆ ವ್ಯವಹಾರ ಮಾಡಬೇಕಾದಾಗ ಅದು ಈ ರೀತಿ ನಿಷ್ಪಕ್ಷಪಾತವಾಗಿ ಮಾತ್ರ ತನ್ನ ಮುಕ್ತ ಆಧ್ಯಾತ್ಮಿಕತೆಯನ್ನು ಪ್ರದರ್ಶಿಸಲು ಸಾಧ್ಯವಿದೆ. ಪ್ರಕೃತಿಯ ಗುಣಗಳಿಂದ ಮುಕ್ತನಾಗಿರುವುದು ಕ್ಷೋಭೆ ಇಲ್ಲದ ಆತ್ಮದ ಶ್ರೇಷ್ಠತೆಯೂ ಗೆಲುವೂ ಆಗಿದ್ದು, ತ್ರಿಗುಣಗಳ ಕಾರ್ಯ ಪ್ರವಾಹದಿಂದ ಅಬಾಧಿತವಾಗಿರುವುದು. ಸದಾ ಗೊಂದಲ–ಮಯವೂ, ಅಸಮಾನತೆಯಿಂದಲೂ ಕೂಡಿರುವ ಜೀವಿಯ ಸ್ವಭಾವವು ಸದಾ ಬದಲಾಗುವುದು. ಪ್ರಕೃತಿಯ ಅಸಮಾನ ಹಾಗೂ ವಿರುದ್ಧ ಗುಣಗಳ ಸಂಘರ್ಷದಲ್ಲಿ ಅದು ಪ್ರವೇಶಿಸಿದಾಗ, ಆ ಸಂಘರ್ಷದಲ್ಲಿ ವೈಕೃತಿಯಲ್ಲಿ ಭಾಗಿಯಾಗದೇ ತನ್ನತನವನ್ನು, ತ್ರಿಗುಣಗಳಿಗಿಂತ ತನ್ನ ಶ್ರೇಷ್ಠತೆಯನ್ನು ತೋರಿಸಲೇಬೇಕು, ಅಂತೆಯೇ ಸಮಸ್ತ ಚಟುವಟಿಕೆಗಳಲ್ಲಿ, ಕಾರ್ಯಗಳಲ್ಲಿ ಹಾಗೂ ಪರಿಣಾಮಗಳಲ್ಲಿ ನಿಷ್ಪಕ್ಷಪಾತ ಸಮತ್ವವನ್ನು ಪ್ರದರ್ಶಿಸಲೇಬೇಕಾಗುವುದು.

ಸಮತ್ವವು ನಿಜವಾಗಿಯೂ ಒಂದು ಲಕ್ಷಣವಾಗಿದ್ದು, ಸಾಧಕನ ಪರೀಕ್ಷೆಯೂ ಆಗಿರುವುದು. ಆತ್ಮದಲ್ಲಿ ಅಸಮತ್ವವಿದ್ದುದೇ ಆದರೆ ಪ್ರಕೃತಿಯ ಗುಣಗಳ ಸಂದೋಹದಲ್ಲಿ ಅಸಮತ್ವ ಇರುವುದು, ಸ್ವಾರ್ಥ, ಆಶೆ, ವೈಯಕ್ತಿಕ ಇಚ್ಛೆ ಮತ್ತು ಸಂಕಲ್ಪ, ವೈಯಕ್ತಿಕ ಅನಿಸಿಕೆ ಮತ್ತು ಕಾರ್ಯ, ಸುಖ, ದುಃಖ, ಬಾಧಿತವಾದ, ತ್ರಸ್ತ ಆನಂದ ಇರುವುದು, ಅಲ್ಲಿ ನಿಜವಾದ ಆಧ್ಯಾತ್ಮಿಕ ಸುಖವೆಂಬುದಿರುವುದಿಲ್ಲ. ಮಾನಸಿಕ ತೃಪ್ತಿ ಇರಬಹುದು, ಆದರೆ, ವಿರೋಧ, ಮಾನಸಿಕ ಅತೃಪ್ತಿ ಕೂಡ ಇರಬಹುದು, ಆತ್ಮದಲ್ಲಿ ಅಸಮತ್ವವಿದ್ದರೆ, ಜ್ಞಾನವು ವಿಕೃತವಾಗಿರುವುದು. ಎಲ್ಲವನ್ನೂ ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ಬ್ರಹ್ಮದ ಏಕತೆಯಲ್ಲಿ ನಿರಂತರವಾಗಿ ಇರಲು ಸಾಧ್ಯವಾಗದೇ ಹೋಗುವುದು, ಸಮಸ್ತ ಸೃಷ್ಟಿಯ ವಸ್ತುಗಳ ಜೊತೆ ಏಕತೆ ಅನುಭವಿಸಲಾಗದೇ ಹೋಗುವುದು. ಆಂತರ್ಯದಲ್ಲಿ ನಿಜವಾದ ಸಮತ್ವ ಇದ್ದರೆ ತನ್ನೆಲ್ಲ ಚಟುವಟಿಕೆಗಳ, ಕಾರ್ಯಗಳ ನಡುವೆಯೂ ತಾನು ಮುಕ್ತನಾಗಿರುವುದನ್ನು ಕರ್ಮ ಯೋಗಿಯು ತಿಳಿದುಕೊಳ್ಳುತ್ತಾನೆ.

ಸಮತ್ವದ ಮೂಲ ಸ್ವಭಾವವೇ ಆಧ್ಯಾತ್ಮಿಕವಾಗಿದೆ. ಅಂತಯೇ ಅದು ಉನ್ನತವೂ, ವಿಶ್ವಾತ್ಮಕವೂ ಆಗಿರುತ್ತದೆ. ಅದರ ಆಳ–ಅಗಲ ಮತ್ತು ವ್ಯಾಪ್ತಿ ಬಹಳ ವಿಸ್ತಾರವಾದುದು, ಗೀತೆಯ ಬೋಧನೆಯಲ್ಲಿ ಈ ಸಮತ್ವದ ವಿಷಯಕ್ಕೆ ಬಹಳ ಮಹತ್ವವಿದೆ. ಸಮತ್ವವನ್ನು ಕುರಿತು ಅದು ಬಹಳ ವಿವರವಾಗಿ ಚರ್ಚಿಸುತ್ತದೆ. ಕೇವಲ ಸಮತ್ವವನ್ನು ಕುರಿತು, 'ಅದು ಬಹಳ ಮಹತ್ವದ್ದು, ಅದು ಮನಸ್ಸಿನ ಅತ್ಯಂತ ಹಿರಿದಾದ ಮತ್ತು ಅವಶ್ಯಕವಾದ ಸ್ಥಿತಿಯು, ಅನಿಸಿಕೆ, ಸಂವೇದನೆ, ಸ್ವಭಾವ ಎಲ್ಲದರಲ್ಲೂ ಸಮತ್ವವಿದ್ದು ಅದು ಮಾನವನ ಎಲ್ಲ ದೌರ್ಬಲ್ಯಗಳಿಗಿಂತ ಹೆಚ್ಚು ಶ್ರೇಷ್ಠವಾದದ್ದು' ಎಂದೆಲ್ಲ ಹೇಳಿ ಪಾರಾಗಿಬಿಡುವುದಿಲ್ಲ. ಹೀಗೆ ವರದಿ ಮಾಡುವುದು ಅದರ ಸ್ವಭಾವವೇ ಅಲ್ಲ. ಸಮತೆಯು ಅತ್ಯಂತ ಉನ್ನತವಾದ ತಾತ್ವಿಕ ಆದರ್ಶವೆಂದು, ಸಾಧುಗಳ, ಋಷಿ ಮುನಿಗಳ ಸ್ವಭಾವದ ಪ್ರಮುಖ ಅಂಶವೆಂದು ಗೀತೆ ಹೇಳುತ್ತದೆ. ಈ ತಾತ್ವಿಕ ಆದರ್ಶವನ್ನು ತೆಗೆದುಕೊಂಡು ಇನ್ನೂ ಹೆಚ್ಚಿನ ಉನ್ನತ ಸ್ತರಕ್ಕೆ ಒಯ್ದು ನಾವೂ ಆ ಮುಕ್ತ, ವಿಶಾಲ ಹಾಗೂ ಪರಿಶುದ್ಧ ವಾತಾವರಣದಲ್ಲಿ ಜೀವಿಸುವಂತೆ ಮಾಡುತ್ತದೆ. ವೈರಾಗ್ಯದ ಸಮತೋಲನೆ, ಆಧ್ಯಾತ್ಮಿಕ ಸಮತೋಲನೆ ಇವು ಗೀತೆಯ ಮೊದಲ ಹಾಗೂ ಎರಡನೆಯ ಹೆಜ್ಜೆಗಳಿದ್ದಂತೆ. ನಮ್ಮ ಭಾವೋದ್ವೇಗ, ಆಶೆಗಳ ತಿಕ್ಕಾಟಗಳ ಚಕ್ರ ತೀರ್ಥದಿಂದ ಪಾರಾಗಿ ಪರಿಶುದ್ಧತೆ, ಗಾಂಭೀರ್ಯ, ಆನಂದದ ಸ್ತರಗಳಿಗೆ ಏರುವಂತೆ ಮಾಡುತ್ತದೆ; ಅದು ಕೇವಲ ದೇವತೆಗಳ ಸ್ತರವಲ್ಲ, ಸ್ವತಃ ಈಶ್ವರನ ಪರಮ ಶ್ರೇಷ್ಠ ಸ್ತರವಾಗಿದ್ದು, ನಾವು ಅದನ್ನೇರುವಂತೆ ಪ್ರೇರಿಸುತ್ತದೆ. ವೈರಾಗ್ಯದ ಸಮತೆಯಲ್ಲಿ ಸಮತೋಲನವೇ ಪ್ರಧಾನವಾಗಿದ್ದು, ಅದರಲ್ಲಿ ಕಠಿಣ ಅಥವಾ ಉಗ್ರ ಸಂಯಮ, ನಿಯಮನಾದಿಗಳ ಮೂಲಕ ಆತ್ಮ ಪ್ರಭುತ್ವವನ್ನು ಸಿದ್ಧಿಸಿಕೊಂಡು ಅದನ್ನೇ ಆಧಾರವಾಗಿಟ್ಟುಕೊಂಡು ಪ್ರಪಂಚದ ಎಲ್ಲ ವ್ಯವಹಾರಗಳನ್ನು ಮಾಡುವುದು. ಆದರೆ ಹೆಚ್ಚು ಸುಖದಾಯಕವಾದ, ಹೆಚ್ಚು ಗಂಭೀರವಾದ ಆಧ್ಯಾತ್ಮಿಕ ಸಮತೆಯು ಜ್ಞಾನ, ಅನಾನುರಕ್ತಿ, ಉದಾಸೀನತೆ, ಉನ್ನತವಾದ ಬೌದ್ಧಿಕ ತಟಸ್ಥ ಧೋರಣೆಗಳ ಮೂಲಕ ಆತ್ಮ ಪ್ರಭುತ್ವ ಸಾಧಿಸಲು ಪ್ರಯತ್ನ ಮಾಡುವುದು. ಇದು ಯಾವ ತರಹದ ಆಘಾತಗಳಿಂದಲೂ ಸಂಯಮವನ್ನು ಕಳೆದುಕೊಳ್ಳದೇ ಸಮತೆಯನ್ನೇ ಪಾಲಿಸುವ ಯತ್ನ ಮಾಡುವುದು. ಧಾರ್ಮಿಕ ಅಥವಾ ಕ್ರಿಶ್ಚಿಯನ್ ಸಮತೆ ತುಸು ಬೇರೆ ತರಹದ್ದು; ಅಲ್ಲಿ ಸದಾ ದಾಸ್ಯಭಾವದ ಪ್ರದರ್ಶನ ಇದೆ, ಎಲ್ಲವನ್ನೂ ಪರಮಾತ್ಮನಿಗೇ ಒಪ್ಪಿಸಿಬಿಟ್ಟ ಭಾವ ಇದೆ. ಇವು ಮೂರು ಹಂತಗಳು, ಇವು ದೈವೀ ಶಾಂತಿಯೆಡೆಗೆ

ನಮ್ಮನ್ನು ಒಯ್ಯುವುವು – ಸಾಹಸದ ತಾಳ್ಮೆ, ಸಾಧುವಿನ ಅನಾಸಕ್ತಿ ಮತ್ತು ಸಂಪೂರ್ಣ ಶರಣಾಗತಿ – ತಿತಿಕ್ಷಾ, ಉದಾಸೀನತಾ ಮತ್ತು ಸಮಸ್ ಅಥವಾ ನತಿ. ಗೀತೆಯು ಇವೆಲ್ಲವನ್ನೂ ವಿಶಾಲ ಭಾವದಿಂದ ಸಮನ್ವಯ ಮಾಡುತ್ತದೆ. ಊರ್ಧ್ವಮುಖವಾಗಿ ಹೆಣಿಯುತ್ತದೆ. ಪ್ರತಿಯೊಂದಕ್ಕೂ ಆಳವಾದ ಬೇರು, ವಿಶಾಲವಾದ ದೃಷ್ಟಿಕೋನ, ಅಧಿಕಾಂಶ ವಿಶ್ವಾತ್ಮಕ ಮತ್ತು ವಿಶ್ವಾತೀತ ವೈಶಿಷ್ಟ್ಯಗಳನ್ನು ನೀಡುತ್ತದೆ. ಪ್ರತಿಯೊಂದಕ್ಕೂ ಅದು ಆತ್ಮದ ಮೌಲ್ಯವನ್ನೇ ನೀಡುತ್ತದೆ. ಮಾನವೀಯ ನಡೆನುಡಿ ಆಚಾರ ವಿಚಾರ ವ್ಯಕ್ತಿತ್ವಕ್ಕಿಂತ ಹೆಚ್ಚಿನದಾದ ಆಧ್ಯಾತ್ಮಿಕ ಸತ್ತೆಯ ಶಕ್ತಿಯನ್ನು ನೀಡುತ್ತದೆ. ತಿಳುವಳಿಕೆಯ ಶಕ್ತಿಗಿಂತ ಹೆಚ್ಚಿನ, ಭಾವನಾತ್ಮಕ ಒತ್ತಡ ಹೆಚ್ಚಿನ ಸಮತೆಯನ್ನು ನೀಡುತ್ತದೆ.

ಸಾಮಾನ್ಯ ಮಾನವೀಯ ಜೀವವು ತನ್ನ ಸಾಮಾನ್ಯ ಬದುಕಿನ ಎಲ್ಲ ತೊಂದರೆದಾಯಕ ಘಟನೆಗಳನ್ನು ಕೂಡ, ಬಯಸುತ್ತದೆ ಮತ್ತು ಅವುಗಳನ್ನು ಆನಂದಿಸುತ್ತದೆ. ಇವೆಲ್ಲವುಗಳನ್ನು ಅನುಭವಿಸಲು ಜೀವಕ್ಕೆ ಆನಂದವಿದೆ; ಅಂತೆಯೇ ಅದು ನಿಮ್ನ ಸ್ತರದ ಎಲ್ಲ ಸಂಘರ್ಷಗಳಿಗೂ ಸಂದೇಹಗಳಿಗೂ ಸಮ್ಮತಿ ನೀಡುತ್ತದೆ. ಪ್ರಕೃತಿಯು ನಿಜವಾಗಿ ಏನೇ ಮಾಡಿದರೂ ಅದು ಸಂತೋಷದ ಸಲುವಾಗಿಯೇ ಎಂಬುದು ಮೂಲಭೂತ ಸೂತ್ರವು; ಅದು ಎಲ್ಲವನ್ನೂ ತನ್ನ ಪ್ರಿಯಕರನಾದ ಪುರುಷನ ಆನಂದದ ಸಲುವಾಗಿಯೇ ಮಾಡುತ್ತದೆ. ನಿಜವಾಗಿ ನಾವು ಈ ಸತ್ಯವನ್ನು ಗುರುತಿಸುವುದೇ ಇಲ್ಲ, ಅನೈಚ್ಛಿಕ ವಿರುದ್ಧ ಘಟನೆಗಳ, ಸಂಘರ್ಷಗಳ ಮೂಲಕ ಆಹತರಾಗಿ, ದುಃಖಿತರಾಗುತ್ತೇವೆ. ನೋವು – ಯಾತನೆ, ಅಸಮಾಧಾನ – ಸೋಲು, ಅಪಯಶ, ನಿಂದೆ, ಅವಮಾನ, ಅವಮರ್ಯಾದೆ ಇವುಗಳಿಂದಾಗಿ ಕುಗ್ಗಿ ಹೋದ ಮನಸ್ಸು ಸತ್ಯದಿಂದ ದೂರ ಸರಿಯುತ್ತದೆ. ಅದು ಇದಕ್ಕೆ ವಿರುದ್ಧವಾಗಿ ಸಂತಸದ, ಇಚ್ಛಿತ ಆನಂದದಾಯಕ ಅಸಂತುಲಿತ ವ್ಯಾಕುಲತೆಗಳಿಂದ, ಆನಂದ, ಸಂತೋಷ, ಪ್ರಗತಿ, ಅಭಿವೃದ್ಧಿ, ಗೆಲುವು, ಯಶಸ್ಸು, ವೈಭವ, ವೈಭೋಗ, ಪ್ರಶಂಸೆ ಮುಂತಾದ ಅಸಮತೋಲನೆಯ ಹೊಯ್ದಾಟಗಳನ್ನು ಅನುಭವಿಸಲು ಬಯಸುತ್ತದೆ. ಆದರೆ ಇವುಗಳಿಂದಾಗೇನೂ ಜೀವನದಲ್ಲಿನ ಅದರ ಸಂತೋಷದ ದೃಷ್ಟಿಕೋನ, ಅನುಭವ ಬದಲಾಗುವುದಿಲ್ಲ. ಮನಸ್ಸಿನ ದ್ವಂದ್ವಗಳ ನಿರಂತರ ತಾಕಲಾಟದ ಹಿನ್ನೆಲೆಯಲ್ಲಿ ಇವು ಸದಾ ಇದ್ದೇ ಇರುತ್ತವೆ. ಓರ್ವ ಸೈನಿಕನನ್ನು ನೋಡಿ, ಅವನೇನು ಭೌತಿಕವಾಗಿ ಆಗಿರುವ ಗಾಯಗಳಿಂದ ಸಂತೋಷಿತನಾಗುವುದಿಲ್ಲ. ತನ್ನ ಸೋಲುಗಳಲ್ಲಿ ಮಾನಸಿಕ ತೃಪ್ತಿಯನ್ನೇನೂ

ಅನುಭವಿಸುವುದಿಲ್ಲ. ಆದರೆ ಅವನು ಕಾಣುವ, ಅನುಭವಿಸುವ ಆನಂದ ಇರುವುದು ಅವನ ಹೋರಾಟದಲ್ಲಿ, ಯುದ್ಧದಲ್ಲಿ; ಅಲ್ಲಿ ಅವನಿಗೆ ಸೋಲಾಗಬಹುದು ಗಾಯಗಳಾಗಬಹುದು, ಅದೇ ರೀತಿ ಗೆಲುವೂ, ಯಶಸ್ಸು ಆಗಬಹುದು. ಅವರೆಡನ್ನೂ ಒಪ್ಪಿಯೇ ಅವನು ಯುದ್ಧಕಿಳಿದಿರುತ್ತಾನೆ. ಸೋಲು, ನೋವು, ಗಾಯ ಆಗಬಹುದಾದರೂ ಗೆಲುವು, ಸಂತೋಷ ಆಗಬಹುದೆಂದು ನಿರೀಕ್ಷೆ ಮಾಡುತ್ತಾನೆ, ನಂಬುತ್ತಾನೆ. ಅಂತೆಯೇ ಅವನು ಯುದ್ಧದ ಆಯ್ಕೆ ಮಾಡಿಕೊಳ್ಳುತ್ತಾನೆ. ಯುದ್ಧದಲ್ಲಿ ಎರಡೂ ಸಮನಾಗಿವೆ ಎಂಬುದವನಿಗೆ ಗೊತ್ತು, ಆದರೂ ಏನೇ ಆದರೂ ಆತ್ಮ ತೃಪ್ತಿ ಇದೆ ಎಂಬುದೂ ಅವನಿಗೆ ಚೆನ್ನಾಗಿ ಗೊತ್ತು. ಅದೇ ಎಲ್ಲಕ್ಕಿಂತ ಮುಖ್ಯ. ಯುದ್ಧದಲ್ಲಾದ ಗಾಯಗಳು ಅವನಿಗೆ ನೆನಪಿನ ಸುಖದ ಕ್ಷಣಗಳೇ; ನೋವಿನ ಸಮಯ ಸರಿದು ಹೋದ ಮೇಲೆ, ಅಥವಾ ಅದಿನ್ನೂ ಅಲ್ಪ ಸ್ವಲ್ಪ ಇರುವಾಗಲೇ, ಕೇವಲ ತನ್ನ ಹೋರಾಟದ ಸ್ಮೃತಿಯೇ ಅವನಿಗೆ ತೃಪ್ತಿ ನೀಡುತ್ತದೆ, ಅವನ ಗಾಯಗಳು ಅವನಿಗೆ ಹೆಮ್ಮೆಯ ಸಂಕೇತಗಳಾಗುತ್ತವೆ. ಸೋಲು ಕೂಡ ಅವನಿಗೆ ಆನಂದ, ಹೆಮ್ಮೆ ತರುವುದುಂಟು, ತಾನು ತನ್ನ ಪ್ರಯತ್ನದಲ್ಲಿ ಹಿಂದೆ ಸರಿದಿಲ್ಲ, ಗಟ್ಟಿಯಾಗಿ ಎಲ್ಲವನ್ನೂ ಎದುರಿಸಿ ನಿಂತಾಗಿದೆ, ಎಂಥ ವಿರೋಧಿ ಶಕ್ತಿಗಳನ್ನಾದರೂ ಎದುರಿಸಿ ಕಾದಾಡಿದ್ದಾಗಿದೆ. ಹೆದರಿಲ್ಲ ಹಿಂದೆ ಸರಿದಿಲ್ಲ ಎಂಬ ಭಾವ ಅವನಿಗೆ ಸಂತೋಷ ತರುತ್ತದೆ. ಅಥವಾ ಅವನು ತೀರ ಸಾಮಾನ್ಯ ವ್ಯಕ್ತಿಯಾಗಿದ್ದರೆ, ಅವನಲ್ಲಿ ದ್ವೇಷ, ಸೇಡು ಇತ್ಯಾದಿ ಹುಟ್ಟಬಹುದು, ಅವು ಕೂಡ ಆನಂದಾನುಭವದ ವಿಕೃತಗಳೇ. ಏನೇ ಆಗಲಿ ನಮ್ಮ ಬದುಕಿನಲ್ಲಿ, ಎಲ್ಲ ಘಟನಾವಳಿಗಳಲ್ಲೂ ಜೀವಕ್ಕೆ ಆನಂದ ಇದ್ದೇ ಇರುತ್ತದೆ.

(ಸಶೇಷ)

## ಶ್ರೀ ಅರವಿಂದರ
# 'ಪ್ರೇಮ ಮತ್ತು ಮೃತ್ಯು'

**– ಅನು: ಸಮಷ್ಟಿ**

### ದೃಷ್ಟಿ 2

ಭೋರಿಡುವ ವಾಯು, ಭೋರ್ಗರೆವ ಜಲವು, ಬಿರಬಿರನೆ ಬಿರಿದ ಬುವಿಯು
ಪ್ರಳಯದಿ ಪ್ರಕೋಪಿಸಿ ಪ್ರಮಾದವನೇ ತಂದಿಕ್ಕಿ ಪರ್ಯಾಯ ವಸನದಿ
ಪ್ರಶಾಂತತೆಯನು ಪಸರಿಸಿ ಪ್ರಸನ್ನತೆಯನೇ ಪ್ರಮಾಣೀಕರಿಸುವಂತೆ
ತನಗಾಗಿರುವಅಧ್ಯಾಯವೊಂದು ಮಧ್ಯಂತರದಲೇ ಮುಕ್ತಾಯವಾದುದನು
ಮನಗಾಣುತ ಮಡಿದ ಮನದನ್ನೆಗಾಗೆಂದು ಮರುಗಿದ್ದನವ ಮಾನವ.
ನಿಮಿಷದಲೇ ನಿಮೇಶವನು ನಿಡಿದು ನಿರ್ನಾಮವಾದ ನಿಲಯನಿವಾಸಿನಿಯ
ನೆನೆದು ನಿಶ್ಚಲ ನಿತಾಂತದಿ ನಿತ್ರಾಣನಾದವನ ನಖಶಿಖಾಂತದೊರೆಗಿನ
ಅನ್ನಮಯವದು ತನ್ನಿರುವ ತೋರಲೆನೆ ನಿಡಿದಿತ್ತು,ಎದೆಮಿಡಿದು ಬಡಿದಿತ್ತು;
ಪ್ರಾಣಮಯವದು ಪ್ರಾಣಪ್ರಿಯಳು ಪುರೋಗಾಮಿಸಿದ ಪ್ರಪಂಚದೆಡೆ
ಪಕ್ಷಿಯಾಗುತ ಪಲಾಯನ ಗೈಯದೆ ಪಕ್ಷದಲೇ ಫಡಫಡಿಸಿತ್ತು;
ಮನೋಮಯವದು ಮನಸಿಜಾತಳಿರದೆ ಮರುಗಿ ಮಂಕಾಗಿ ಮಬ್ಬಿಡಿದಿತ್ತು;
ಸುಜ್ಞಾನ ಪ್ರಜ್ಞಾನಗಳೆಲ್ಲವನು ವಿಜ್ಞಾನದಲಿ ವಿವರಿಸುತ ಅಜ್ಞಾನವನು ಅವಿತಿಡುವ
ವಿಜ್ಞಾನಮಯದಲಿ ಅಂತರಾತ್ಮಾಯನದ ಆಡಳಿತವಿದ್ದು, ಅದೀಗ ಮೌನದ
    ಮನೆಯಾಗಿತ್ತು;
ಆನಂದಮಯದ ಅಂದ ಚೆಂದಗಳೆಲ್ಲವೂ ಮಂದ–ಮಂದದಲಿ ಸುಂದಾಗಿ
ಸಾವಿನೊಳಗೊಂದಾಗಿ ಸರಿದಿರಲು ಆನಂದವೆಲ್ಲಿಯದೆಂದು ಸಾರುತದು ಸತ್ತಿತ್ತು;
ಮಂಕಾದವನ, ಮೂಲೆಗುಂಪಾದವನ, ಮಹಾಮೌನದ ಮನೀಷಿಯಾದವನ
ಆತ್ಮಮಂಡಲದಿ ಗಪ್ಪೆಂದು ಗರಬಡಿದಿರಲು ಏಕತಾನದ ಭೃಂಗವೊಂದು
ಕರ್ಣದಿ ಗುಂಯ್ಯೆಂದು ಗುಮುಗುಟ್ಟಿತ್ತು, ಧೀಮಂಡಲದಿ ಧುಮ್ಮೆಂದು ಧುಮುಗುಟ್ಟಿತ್ತು.
ಸಾವಿನ ಶೂನ್ಯತೆಯು ನಿಸರ್ಗದಲಿ ನಿರ್ಮಾಯಘನದ ನೀರವತೆಯನೇ ನೆಟ್ಟಿರಲು
ಆಲಿಸಿದನವ ಕಣ್ಣೆಲ್ಲ ಕಿವಿಯಾಗಿ, ಕಿವಿಯೆಲ್ಲ ಬುವಿಯಾಗಿ.
ಆಂತರ್ಯದ ಕುಹರದೊಳಗಿಂದೆದ್ದು ಆಕ್ರಂದವಾಗಿತ್ತದು ಅರಣ್ಯಗಾನ,
ಬಿಳಿಲಿನಿಂದಿಳಿದ ಅಳಿಲೊಂದು ತರುವಿನಿಂದುದುರಿ ವರ್ಣವಿವರ್ಣವಿಹ

ಪರ್ಣವನು ಪರಪರಿಸಿತ್ತು. ಮುಂದೋಡಿ ನೆಗೆದು ವಿಹರಿಸಿತ್ತು.
ಕುಹುಗುಡುತಿದ್ದ ಕೋಕಿಲವು ನೆತ್ತಿಮೇಲಿನ ನೆಲೆಯಿಂದ ನಲಿಯದೊಲು ನುಲಿದಿತ್ತು.
ವರ್ಷದಲಿ ಹರ್ಷದಿಂದಿದ್ದು, ಗಿರಿಯೆಡೆಗೆಗುರಿಯಿಟ್ಟು ಗಮಿಸಿ ಗರಿಬಿಚ್ಚುತ
ಮೈದೋರಿ ಮೈಮರೆಸುವ ಮಯೂರವೊಂದು ಕ್ಲೇಷದಿ ಕೂಗುತ್ತ ಕನಲಿತ್ತು.
ಮಂದವಾಗಿಹ ಮಲಯಮಾರುತವನು ಮಿಡಿವ ಮರವೊಂದು
ಸಂತೈಸುವ ಸಂತನೋರ್ವನ ಸನ್ನಿಧಿಯಾಗಿತ್ತು.
ವೃಕ್ಷರಾಜರ ವಕ್ಷದಲಿ ಸುಭಿಕ್ಷವಾಗಿದ್ದ ಭಕ್ಷ್ಯವಿದ್ದರೂ ಸಾಕ್ಷ್ಯವಿರದಿಹ ರೂಕ್ಷರೊಲು
ಕಣ್‌ದಿಟ್ಟಿಗೆ ಗೋಚರವಿಹ ನಿಸರ್ಗನಿಲಯದ ನೋಟವನು ನಿಂತಲ್ಲೇ
ನಿರಾಕರಿಸಿದ್ದನವ.
ಅದಾವುದೋ ದೂರದೂರಿನಿಂದ ಬಂದ ದೂರುಗಳಂತೆ
ತರುವಿನಿಂದುದುರಿದ ತರಗೆಲೆಗಳಂತವುಗಳನು ದೂರದೆಡೆ ತೂರಿದನು.
ಮಧುಕೋಶದೊಳಗೆ ಕೈಯಿಕ್ಕಿ ಮಧುರಾಣಿಯನು ಹಿಡಿದೆಳೆದು
ಮಾಧುರ್ಯವನೇ ಕೆಡಿಸಿದಂತೆ,
ಹೃತ್‌ಮಂಡಲದ ಅಧಿದೇವಿಯನು ಮೃತ್ಯುವು ಬಂದಪಹರಿಸಿರಲು ಅವನೆದೆ
ಗೂಡೇ ಬರಡಾಗಿತ್ತು.
ಧೇನಿಸಿದನವ, ತಾನಂದು ತನ್ನವಳ ತಕ್ಕೈಸಿದ ದಿನದಿಂದ ಪ್ರೇಮದಾರ್ಣವದ
ನಡುಗಡ್ಡೆಯ
ಕೂರುಗಿರಿಯಂತಿದ್ದ ಕಾನನವಿಂದು ಅರಣ್ಯರೋಧನದ ಕಗ್ಗಾಡಾಗಿರಲು
ಕಾರಣವೇನು?
ಪ್ರಿಯಳ ಪ್ರಿಯಂವದೆಯ ಪ್ರಿಯವದನದ ಹೊರತಾದ ಹೊರತಾಣವೆಲ್ಲವೂ
ಅಂದು–ಇಂದು–ಮುಂದೆಲ್ಲವೂ ಒಂದೇ ಆಗಿದ್ದು, ಕಾಣುವ ಕಾಣ್ಕೆಯಲ್ಲೇನು
ಕುರುಡು?
ತರುಶಾಖೆಯಲಿ ತಂಗಿದ್ದ ಶುಕಪಿಕಾದಿ ವಿಹಗವೃಂದವು ಪುರ್‍ರೆಂದು ಪುಟುಪುಟಿಸಿರಲು
ರೆಕ್ಕೆಬಿಚ್ಚುತ ಪಟಪಟಿಸಿರಲು, ಪಕ್ಷದ ಲಕ್ಷದಲಿ ಅಕ್ಷಿಯ ಬಡಿದು ಬಡಬಡಿಸಿದನವ
ಅಂಧಕಾರದ ಮಹಾವಾಪಿ ಕೂಪಿಯೊಳಗಿಂದೆದ್ದು ಬಂದಂತೆ ತಡಬಡಿಸಿದನವ.
ಸೂಚ್ಯವಾಗಿಹ ಸ್ಮರಣೆಯೊಂದು ಸನ್ಮತಿಯೊಳಗೆ ಸುಳಿಸುಳಿದು ಬಂದಿತ್ತು,
ಅಹಿತವಾಗಿಹ–ಭೂಗತವಾಗಿಹ ಗತಸ್ಮೃತಿಯೊಂದನು ತುಳಿತುಳಿದು ತಂದಿತ್ತು.
ಲಕ್ಷ್ಯಗೊಟ್ಟು ಈಕ್ಷಿಸಿದನವ: ಬದಿಯಲೇ ಬೆಳೆದಿತ್ತೊಂದು ಬೃಹದ್‌ವೃಕ್ಷವಲಯ!

ತಾನೇತಾನೆಂಬ ಏಕತಾನತೆಯನು ತೊರೆದು, ಒಟ್ಟಾಗಿ ನಿಟ್ಟಾಗಿ ದಟ್ಟೈಸಿರುವ
ವಟವೃಕ್ಷಪಕ್ಷವದು,
ಅಲ್ಲೊಂದು ಆಲ ಇಲ್ಲೊಂದು ತಮಾಲ ತನಗಾಗಿರುವ ತಾವಿನಲಿ ತನೊಬ್ಬನಿರದೆ
ತನ್ನವರನು ತಕ್ಕೈಸುವ ತುಂಬಿದೆದೆಯಿಂದ ತನ್ನಾಳಮೂಲದೊಳಗಿಂದ
ಹೊರಡಿಸಿತ್ತೊಂದು ಮೂಲ, ಆ ಮೂಲವದು ನಿರ್ಮೂಲವಾಗದೆ
ಬೃಹನ್ಮೂಲವಾಗುತ
ನೆತ್ತಿಯಿಂದಿಳಿದು ನೆಲವನು ಮುಟ್ಟಿತ್ತು,ಇಳಿಬಿದ್ದ ಬಿಳಿಲೇ ಬೇರಾಗುತ
ಬುವಿಯನು ಹೊಕ್ಕಿತ್ತು, ಅಂತರ್ಯದೊಳಗೆ ಹಿಕ್ಕಿತ್ತು, ಹರಿದಾಡುತ ಬಿಕ್ಕಿತ್ತು
ಕೊನೆಗೊಮ್ಮೆ ಶಾಖೋಪಶಾಖೆಯಲಿ ಸರಿದು ಅಲ್ಲೊಂದು ಮರಿ–ಆಲ
ಪಡೆಯೇ ಬೆಳೆದಿತ್ತು.
ಮಾತೃ–ಮಮತೆಯಿಂದ ದೂರಾಗದೆ ನ್ಯಗ್ರೋಧ ಮೂಲವನೇ ಅದು ಬಳಸಿತ್ತು.
ಉಂಗುರಾಕಾರದಿ ನೆಲೆಸಿತ್ತು
ಏಕದಿಂದನೇಕವಾಗುತದು ಅಂತ್ಯದಲಿ ಏಕತೆಯನೇ ಏಕೀಭವಿಸಿತ್ತು;
ಕಾಲಡಿಯ ನೆಲವದು ಹಸಿರೆಲೆಗಳ ಕುಸಿರಿನಿಂದಾಗಿ ಉಸಿರಾಡಿತ್ತು.
ತರುವಿನೆಡೆಗೇರಿ, ತನ್ನತನ ಮೀರಿ, ತುದಿಯೆಡೆಗೆ ಸೇರಿ, ರೆಂಬೆಕೊಂಬೆಗಳನು
ಮಾಂದಳಿರ ತೋರಣದಂತಲಂಕರಿಸುತ ಆಲಂಗಿಸಿತ್ತೊಂದು ಮಾಲಿಂಗನಬಳ್ಳಿ;
ಅಲ್ಲೊಂದೆಡೆಯ ದ್ರುಮರಾಜಿಯು ಹಸಿರೆಲೆಗಳ ತೂಗಿತ್ತು, ಪುಷ್ಪಗಂಧದಿ ಮಾಗಿತ್ತು,
ಫಲಭಾರದಿ ಬಾಗಿತ್ತು;
ವನಬನದ ಹಿಮ್ಮೆಳದಲಿ ಹಬ್ಬಿತ್ತೊಂದು ಶಿಖರಗಿರಿಸೈನ್ಯ. ಮುಕುಟಶೃಂಗವ ಧರಿಸಿ,
ಮುಚ್ಚಿರುವ ಮೇಘಮಾಲೆಗಳ ಸರಿಸಿ, ಹಾಲುಹೊಳೆಯನೇ ಹರಿಸಿ,
ಪಳಗಿರುವ ಪರ್ವತರಾಜ್ಯಕ್ಕೆ ತಾನಿಹೆನು ಚಕ್ರವರ್ತಿಯೆನ್ನುತ ನಿಂತಿದ್ದವವು
ಅದ್ರಿನೃಪರ ಶ್ರೇಣಿ;
ನಿಂತಿರುವ ನಿಲುವಿನಲೇ ನೋಡುತ ನಿಟ್ಟುಸಿರಿಟ್ಟು ನುಡಿದನವರುರು,
'ಏನಿಲ್ಲ ವ್ಯತ್ಯಯ, ಏನಿಲ್ಲ ಪ್ರತ್ಯಯ, ತಾಕಂಡ ಕನಸುಗಳ ಕದ್ದರೂ,
ಕಾಣ್ಕೆಯಲ್ಲಿಲ್ಲವೇನೂ ಕೃತ್ಯಯ.'
ನೀಳನೋಟದಿ ನಿತ್ಯನೆಲೆಯಾದ ನಿಲಯವೇ ನಲುಗಿರಲು ತಾನಾದನವ
ನೆಲದ ನಂಜಿನ ನೆರಳು, ಭುವಿಯ ಭಂಜಿತ ಬೆರಳು.
ಮರಳುಮಣ್ಣಿನಿಂದಾದ ಮಹೀವತಿಯಿವಳ ಮನೋಕ್ಲೇಷವನು

ಮನಸಲ್ಲೇ ಮಥಿಸಿದನು,ಕನಸಲ್ಲೇ ಕಥಿಸಿದನು, ವ್ಯಗ್ರನಾಗುತಲೇ ವ್ಯಥಿಸಿದನು.
ಕಥವಿಕಥಗಳೆಲ್ಲವೂ ವಿಕಟಟ್ಟಹಾಸದಿ ವ್ಯಂಗ್ಯಗೊಳಿಸಿರಲು
ಕೊಡವಿಕೊಂಡೆದ್ದನವ, ಕಂಬನಿ ಮಿಡಿಯುತ ನುಡಿದಿದ್ದನವ,
"ಓ ದೈತ್ಯ ಶೈತ್ಯ ಮೃತ್ಯುವೇ,
ನೀನು ಕಾಲಿಡುವಲ್ಲಿ ಕಂಬನಿಯ ಕಾಲುವೆಯನೇ ಕರೆಸುವ ಕುಲೀನರಂತಾಗಿ ಕನಲದೆ,
ಕಾಣದಿಹ ಕರುಣೆಗಾಗಿ ನಿನ್ನ ಶರಣೆನ್ನುವ ಸರ್ವರಂತಾಗಿ ಸರಿಯದೆ,
ಯಾರ ಹಂಗಿರದ ಭಯದ ಭಂಗಿರದ ಎನ್ನಂಗವನು
ನಿನ್ನಂಕದ ಬಿಂಕವನು ರಚಿಸುವ ರಂಗವಾಗಿಸದೆ ನಿನ್ನ ನಿಸ್ಸಂಗವಾಗಿಪೆನು;
ಭಯದ ಬೆಳ್ಮಿಂಚಿನಲಿ ಬೆವೆತು, ಸಾವಿನ ಸಿಡಿಲಿನಲಿ ಸಿಡಿದು,
ಆಳನಿರಾಳವಿಹ ರಾತ್ರಿಗಳನು ಕಾಳಕರಾಳವೆಂಬಂತೆ ಕಳೆದು, ಅಳಿವ ಅಳ್ಳೆದೆಯರೊಲು
ಅಲವತ್ತುಕೊಳ್ಳದೆ, ಅಂತಕನಿಗೇ ಹಂತಕನಾಗಿ ಅಂತವನೇ ಸಾಂತನಿತಾಂತವಾಗಿಪೆನು;
ನಿನ್ನ ಸುವಿಶಾಲವಿಹ ರಕ್ಕಸರಾತ್ರಿಯಂತಿಹ ಅಂಧಕಾರದ ಗುಹೆಯನು ಹೊಕ್ಕು
ರಜನಿರಕ್ಕಸಿಯ ಮುಂದೆಲೆಯ ಹಿಡಿಕೇಶವ ಹಿಡಿದೆತ್ತಿ ಬಡಿಯುವೆನು, ಕೊರಳೆತ್ತಿ
ಕಡಿಯುವೆನು.
ಕಳೆದುಹೋದ ಕಾಲದಲಿ ಕಾಲವಾದ ಕುಲಪುರುಷರೆದುರು ನಿನ್ನ ಪೌರುಷವನೇ
ಪ್ರದರ್ಶಿಪೆನು;"
ಎನುತಲಾದನವ ಭ್ರಮಿತ, ಸತಿಯಿರದ ಪತಿತ; ಅಂಡಲೆಯುತಲಿ,
ಭೂಮಂಡಲವನಳೆಯುತಲಿ
ಕಾರುಣ್ಯವಿಲ್ಲದರಣ್ಯದಲಿ ತಿರುತಿರುಗಿ ಮರುಗಿದ್ದನವ,
ಕಾಡುವ ಕಾಡಿನಲಿ ಅಲೆದಲೆದು ಉಲಿದಿದ್ದನವ.
ದಿವಸಗಳೆಲ್ಲ ದುಂದಾಗಿ, ಮಾಸಗಳೆಲ್ಲ ಮಂದಾಗಿ, ಕನಸುಗಳೆಲ್ಲ ಕಮರಿ ಕಂದಾಗಿ,
ಚಲಿಸುತ ಮುಂದಾಗಿ ಉರುಳಿತ್ತದು ಕಾಲ, ಎದುರು ನೋಡಿತ್ತದ ಕಾಲ.
ಪ್ರಿಯಂವದೆಯ ಪ್ರೇಮದಾರ್ಣವದ ಪ್ರಣಯಪ್ರವಾಸಿಯಾದ ಪ್ರಿಯಕರನಲಿ
ಪ್ರಿಯಳ ಪೂರ್ವಸ್ಮರಣೆಯು ಪುನರುಜ್ಜೀವನಗೊಂಡು ಪ್ರೇರೇಪಿಸುತಿರಲು
ಬೆಂಕಿಬಿದ್ದ ಬೆಟ್ಟವೊಂದರಲಿ ಪ್ರಾಣಾಗ್ನಿಯನು ಜ್ವಲಿಸುತ್ತ, ಜ್ವಾಲೆಯಾಗುವಂದದಿ
ಹೊತ್ತಿಸುತ,
ಶಿಖರದಿಂ ಸೀಮೆಯೆಡೆಗದನು ಸುತ್ತಿಸುತ, ಸೂರನ್ನೇ ಸುಡುಗಾಡಾಗಿ ಸುಡುತಿರಲು
ರೆಂಬೆಕೊಂಬೆಗಳೆಲ್ಲ ಅಂಬೆಗಾಲಿಕ್ಕುತಳುವ ಬೊಂಬೆಗಳಂತೆ ಬೊಬ್ಬಿರಿದು

ಮನೋಲೋಕದಿ ಮನೆಮಾಡಿಹ ಮನಸಿಜಾತರೆಡೆ ಮೊಗಮಾಡಿ
ಮೊರೆಯುವಂದದಿ
ಕರೆಕರೆದು ಕೊರಗಿಹನು, ಉರಿದುರಿದು ಒರೆದಿಹನು, ಸರಿಸರಿದು ಸೊರಗಿಹನು.
ಭಾವಜೀವಿಯ ಭಾರಭುಗ್ನವದು ಭುವಿಯಿಂ ಭುವನದೆಡೆ ಭವಿಸಿತ್ತು,
ಕ್ಷೀರಸಾಗರದಂಚಿನ ಆನಂದಗಿರಿಯೆಡೆಗೆಂದು ಗಮಿಸಿತ್ತು,
ಗೋಮಂತವಿಹ ಗೋಲೋಕವನೇ ಹೊಕ್ಕಿತ್ತು, ಶ್ರೀಮಂತವಿಹ ಶ್ರೀಪತಿಯನೇ
ಅದುಸೇರಿತ್ತು.
ದೇವಗಣವೇತಾ ಮುಂದಾಗಿ ರಚಿಸಿದ ಮೃತ್‌ವಲಯದ ಹೃತ್‌ವಲಯದಿ
ಸ್ಫುರಿಸಿಹ ಪ್ರೇಮಪ್ರವಾಳವದು ಪದ್ಮರಾಗದ ಪುಂಜವಾಗಿತ್ತು,
ವಜ್ರ–ಹೀರಕಗಳನೇ ಹೀಯಾಳಿಸಿತ್ತು, ಮರಕತ–ಮೌಕ್ತಿಕಗಳನೇ ಮಣಿಸಿತ್ತು,
ಮಣಿ–ಮಾಣಿಕ್ಯಗಳೆಲ್ಲವನು ಮಣ್ಣಲ್ಲಿ ಮಣ್ಣಾಗಿಸುವಂತವುಗಳನು ಹಣ್ಣಾಗಿಸಿತ್ತು.
ದೇವಗಣದೊಲುಯಮೆಯನೇ ಒಲ್ಲೆಯೆನುವಂತದು ವಂದನೀಯವಾಗಿತ್ತು.
ಘನಗಂಭೀರನಾಗಿ–ಮೌನಚಂದಿರನಾಗಿ ಆನನವೆತ್ತಿ ಕಾನನವ ಕಂಡನವಗಂಡು.
ಅಂದು ಅವನಡಿಗೆ ಬಂದು, ಸಾವೇ ಸಂಧಿಸಿತ್ತು, ವಿಧಿಯೇ ವಂದಿಸಿತ್ತು.
ಚೈತ್ಯಲೋಕದಿಂದಿಳಿದ ಚೈತನ್ಯವೊಂದು, ಸುಪ್ರಮಾನಸದ ಸುಪ್ರಭೆಯಲ್ಲಿ ಸುಳಿದಿತ್ತು,
ಸಹಸ್ರಸ್ತಂಭಯುತ ವಾರುಣ ಮಂದಿರವಿಹ, ಸಪ್ತಾದಿತ್ಯರಾದಿ ಸೂರ್ಯಚಂದಿರರಿಹ
ಲಕ್ಷನಕ್ಷತ್ರಯುತ ಅಕ್ಷವನು ಲಕ್ಷ್ಯದಲೇ ಈಕ್ಷಿಸುತಿಳಿದಿತ್ತು,
ಆಂತರ್ಯದೊಳಗಣ ಅಂಧಕಾರವನು ಅಂಗೈಯೊಳಗೆ ಅವಿತಿಟ್ಟುಇಲ್ಲವಾಗಿಸುವ
ಅಂತರಾತ್ಮಾಯನದ ಬಾರ್ಹಸ್ಪತ್ಯರ ಯಜ್ಞಕುಂಡದೊಳು ಧುಮುಕಿತ್ತು,
ನಿರ್ವಾಣದಂಚಿಗಿಹ ಗೀರ್ವಾಣರ ಗಿಳಿವಿಂಡು ಲೋಕದೆಡೆ ಲಗ್ಗೆಯಿಟ್ಟಿತ್ತು,
ಆತ–ವಾತ–ಪ್ರಪಾತವಿಹ ಮರುತಾದಿ ಏಕಾದಶರುದ್ರರಿಹ ರಣರೌದ್ರ
ವಾಯುವಿನಲಿ ಒಂದಾಗಿತ್ತು,
ಅಂತ್ಯದಲಿ ಅಂತರ್ವಾಕ್ ಒಗೆತರುವೊಲು ಅಗ್ನಿಮೀಳೇ ಪುರೋಹಿತನೊಳು
ಪುರೋಗಾಮಿಸಿ ಪೂರ್ತಿಯಾಗಿತ್ತು. ಕೊನೆಗದು ಸ್ವಾಹಾದೇವಿಯೊಡನಾದ
ಅಗ್ನಿಯಂತಾಗಿ
ದುರುದುರನೆ ಉರಿದಿತ್ತು, ನಭದಂಗಳದಿಂ ಸರಿದಿತ್ತು, ಆಕಾಶಗರ್ಭವನೇ ಸೀಳಿ
ಸುರಿದಿತ್ತು,
ಸ್ವರ್ಣಯುತ ದಿವ್ಯಶಿಖರದಂಚಿನಿಂ ಹರಿದಿತ್ತು, ರಸಾನದಿಯೊಳಗಿಂ ಸುಳಿದಿತ್ತು,

ಮೆಲ್ಲನೆ ಕೆಳಗಿಳಿದಿತ್ತು
ಸಂಚರಿಸುತ ಸಂಚಕಾರವನೇ ತಂದಿಕ್ಕುವ ತಸ್ಕರರನು ತೊಡೆಯುತ ಪಹರೆ
ಸುತ್ತುವ ದೂತರೊಲು
ಜ್ವಾಲಾವೇಷದ ಅಗ್ನಿರಥವದು ಜರ್ರನೆಜರಿದು ರುರುವಿಹ ಅರಣ್ಯರೋದನದ
ತಾಣದೆಡೆ ಶೋಧಿಸುತಡಿಯಿಟ್ಟಿತ್ತು.
ದೇವಲೋಕದ ದೂತನಾಗುತಲಿ ವೈಶ್ವಾನರಾಗ್ನಿಯವ ಇಳೆಗಿಳಿದು ಬಂದಿದ್ದ,
ಸುರಸಂದೇಶವನೇ ಸಾರಲೆಂದವನು ಬುವಿಯೆಡೆಗದನು ಹೊತ್ತುತಂದಿದ್ದ.
ಸರುವರೆದೆಗೆ ಸಮೀಪವರ್ತಿಯಾಗಿಹ, ಮರ್ತ್ಯರೊಳಗಮರ್ತ್ಯರಿಹ
ಅಮೃತಧರರನು ಅರಸುತಲೇ ಅಂಡಲೆಯುತ್ತಿದ್ದನವ ಅಗ್ನಿ.
ಅನಿತರೊಳು ಅಲ್ಲೊಂದೆಡೆ ಅಖಂಡವಿಹ ಅಶ್ವತ್ಥವೃಕ್ಷವೊಂದು ಅಗ್ನಿಯನು
ಆಮಂತ್ರಿಸಿತ್ತು.
ಆದಿತ್ಯಹೃದಯದ ಅಶ್ವಪ್ರಾಣವಿಹ, ಸೂರ್ಯಾರುಣರಥಕೇರಿಸಿಹ ಹರ್ಯಶ್ವದ
ಹರಿದ್ವರ್ಣವಿಹ
ದೇವನೆಲೆಯ ದ್ರುಮದಂತಿಹ ಅಶ್ವತ್ಥದೆಡೆಅಡಿಯಿಡುತ ನುಡಿದಿದ್ದನವ ಅಗ್ನಿ,
"ಕಲ್ಪಾಂತದೊರೆಗೆ ವಿಕಲ್ಪವಾಗದುಳಿವ ಓ ಕಲ್ಪದ್ರುಮವೇ, ಏನಿದು ಪ್ರೇಮ?
ಇನಿಯನೊಳಗುರಿಯುತಿಹ ಧುನಿಯದು ಧೂಮಕೇತುವೊಲು ದುಮುಗುಡುತ
ಧಾಮವನೇ ದಮನಗೈವುದು.
ಶಾಖೋಪಶಾಖೆಯಲಿ ಸರಿದು ನೆಳಲು ದಟ್ಟಿಸಿಹ ದಟ್ಟಾರಣ್ಯದಲಿ ಒಟ್ಟಾಗಿ ನಿಂತು
ಒಂದಿಡೀ ಸೈನ್ಯಕೆ ಸೂರನೊದಗಿಸುವ ಸುರತರುವಿನೊಲು ಸಮೃದ್ಧವಿಹೆ.
ರುರುವಿನೆದೆಯ ಹೃತ್ಕಮಲದ ದಳಗಳವು ದಳದಳನೆ ಬಿಚ್ಚಿಹವು,
ಮುಳ್ಳುದೇಂಟಿನೊಲು ಚುಚ್ಚಿಹವು,
ಪರಮಪಾವನವಿಹ ಪ್ರೇಮವದನು ಪರಿಕಿಸುತ ಪರಂಧಾಮಗಳೇ ಪೆಚ್ಚಾಗುತಲಿ
ಮೆಚ್ಚಿಹವು,
ಸುರದೈತ್ಯಾದಿ ವ್ಯಂತರಗಣವೆಲ್ಲವದನು ಕಾಣುತಲೇ ಬೆಚ್ಚಿಹವು, ಅವುಡುಗಚ್ಚಿಹವು.
ಅಂದೊಮ್ಮೆ ಸಪ್ತಮಸ್ತರದಿಂ ಸುರಿದು ಹರಿದಿರುವ ಸಪ್ತಸ್ರೋತಗಳ
ಸುತ್ತಿಸುರುಳೆಯಲಿ
ಸುಮ್ಮನಾಗಿಸುವಂದದಿ ಘಟಸರ್ಪವೃತ್ರಾಹಿಯು ಅಡ್ಡಾಗಿ ಮಲಗಿಹನು,
ಒಡ್ಡಾಗಿಒರಗಿಹನು.

ಅದರೊಲಂತೆ ಅನ್ನಮಯದ ಅಣುವಗ್ನಿಯದು ಬೃಹದಗ್ನಿಯಾಗದೊಲದನು
ಬಂಧಿಸಬೇಕು,
ಇಲ್ಲದಿರೆ, ಭೌತದಿಂದೇಳಲು ಭೂತದೊಲು ಸುಡುತಿರುವ ರುರುವಿನೆದೆಯ
ಪ್ರೇಮಾಗ್ನಿಜ್ವಾಲೆಯದು,
ಜ್ವಲಿಸುತ ಜ್ವಲಂತವಾಗಿ ಜಗವನೇ ಜರದೆಡೆಗೆ ಜಗ್ಗದಿರದು, ಆಸ್ಫೋಟನೆಯದು
ಬ್ರಹ್ಮಾಂಡವನೇ ಕುಗ್ಗಿಸದಿರದು.
ಅದಕಂತಲೇ ಆದಿತ್ಯರೆದೆಯಿಂದಿಳಿದು, ವಾತ–ಪ್ರೇತಗಳನೆಲ್ಲ ತೊತ್ತುಳಿದು,
ಬಾನಿನೇಕಾಂತದಿಂದಿಳಿದು ಕೋರುತಿಹೆನು, ಕ್ರಾಂತಿಯನೇಕರೆಸಲಿಹ
ಅವನಕ್ರಾಂತವನು ಕ್ರಾಂತದರ್ಶನವಾಗುವಂದದಿ ಕರುಣಿಸಲಾರೆಯಾ?"
ತರುವಿನೆಡೆಗೆಂದು ನುಡಿದತರುಣನಗ್ನಿಯ ನುಡಿಗಡಣವದು ನಿಶ್ಚಲವಾಗಿತ್ತು,
ಅಶ್ವತ್ಥದೆದೆಯ ಆಂತರ್ಯದೊಳಗೆ ಅಧಿರೋಹಿಸುತದು ಅಲವತ್ತುಕೊಂಡಿತ್ತು.
ಸೂರ್ಯ–ಉಷೆ–ಚಿತ್ರಾಮಘೆಯ ಹಿಮ್ಮೇಳದಿ ಹೊರಟು, ಚುಕ್ಕಿ–ಚಂದ್ರಮರನು
ಚಿತ್ತಾರದಲಿ ಚಿತ್ರಿಸಿಹ ಕತ್ತಲೆಯೆಂಬ ಕರಿಗಂಬಳಿಯನು ಗುಡಚಾಪೆ ಸುತ್ತುತೇರುವ
ಬಾಲಭಾಸ್ಕರನವ ಚೆಂಡಭಾಸ್ಕರನಾಗುತ ಬಾಂದಳವನೇರಿ ಕೆಂಡದೊಲು ಕಂಡಿರಲು
ನೆತ್ತಿಮೇಲಿನ ನೇಸರನ ನೋಡಲಾರದೆ ನಿತ್ರಾಣನಾದ ನಿರುಪಾಧಿಕನವ
ನೆರಳನಾಶ್ರಯಿಸಿ ನಡೆದು ಅಶ್ವತ್ಥದಡಿಯಲಿ ಅಂಗಾತವಾಗಿ ಅಡ್ಡಾಗಿದ್ದನು.
ಋಷಿಯ ಬಂಧನಕೆ ಬಂಧಿಸಿದ ಬಂಗಾರದ ಕೊಂಡಿಯೊಂದು ಕಳಚಿ
ಕಗ್ಗಾಡಿನಲಿ ಕಾಣೆಯಾಗಿರಲು
ಕಳವಳಗೊಳ್ಳುತ, ತಮದಿ ತಳಮಳಗೊಳ್ಳುತ ತಾನಿದ್ದ ತಾವನ್ನೇ ತೊರೆದು
ತಿರುಗುಪ್ಪೆಯಾಗಿ ತಿರುಗಿದ್ದನವ, ಮನದೇ ಮರುಗಿದ್ದನವ, ಕೊರಗಿ ಸೊರಗಿದ್ದನವ
ಕಣ್ಮುಚ್ಚೆ ಕಂಡಕನಸುಗಳನೆಲ್ಲ ಕನವರಿಸುತ ಕಂಗಾಲಾಗುತಿರಲು,
ಮಾತೆಯೋರ್ವಳು ಮುದ್ದುಗುವರನ ಮಡಿಲೊಳಗಿಟ್ಟು ಮಮತೆಯಿಂ
ಮುದ್ದಿಸುವಂದದಿ
ತನ್ನಡಿಯಲಿ ತಲೆಯಿಟ್ಟುತೂಗುತಿಹ ತೊಟ್ಟಿಲೊಳಗಿಹ
ತನಯನಂತವನನುತಂಪೆರೆಯಲೆಂದು
ಅಶ್ವತ್ಥವದು ಅಂಗಾತವಾದವನಂಗಾಂಗದೊಳು ತಂಬೆಲರ ತೂಗಿ ತಣಿಸಿತ್ತು,
ಮುಂದಾಗಿ ಬಾಗಿತ್ತು, ಶಾಖೆಗಳ ಮಣಿಸಿತ್ತು, ಮಣಿದ ಮೂಲವದು
ಮೆತ್ತಗಾಗುತ ಅವನ ನೆತ್ತಿಯನು ಮುತ್ತಿತ್ತು.

ಅಶ್ವತ್ಥದೆಲೆಗಳೇ ಅಂಗೈಯಾಗುತವನ ಮುಂಗುರುಳಗಳ ತೀಡಿತ್ತು, ಕೆನ್ನೆಗಳ ಕುಣಿಸಿತ್ತು.
ಬೆಳಕಿರದ ದಾರಿಯಲಿ ಬೆಳ್ಮಿಂಚೊಂದು ಬೆಳಗಿ ಬಣ್ಣವಿಡಿದಂತಿತ್ತು.
ಪ್ರಿಯಂವದೆಯ ಪ್ರೇಮಹಸ್ತವೇ ಮಸ್ತಕವನು ಮುಟ್ಟಿ ಮುಂಗುರುಳ ಮಿಡಿದಂತಾಗಿರಲು,
ಗಡಬಡಿಸಿಕೊಂಡೆದ್ದು ಗಮನಿಸಿದ್ದನವ. ತಡವರಿಸಿಕೊಂಡೆದ್ದು ತಡಕಾಡಿದ್ದನವ.
ಗುಬ್ಬಚ್ಚಿಗೂಡಿನಂದದಿ ಕೂಡಿ ಕಳೆದ ಭೂತಗೃಹದೊಳು ಕೂತು ಕಲೆತ ಕಾಲದಲಿ
ಮೆತ್ತೆಯೊಳು ಮಲಗಿದವನ ನೆತ್ತಿಯನೆತ್ತಿ ಮೆತ್ತಗಾಗಿಹ ಮಾತೆಯೊಲಿಹ
    ಮಡಿಲಿನಲಿ ಮಡಗಿ
ಮುಂಗುರುಳ ತೀಡಿ ಹಣೆಗೆ ಹಸ್ತವನಿಟ್ಟು ಅಧರದಿ ಮೃದುಮಧುರ ಮುತ್ತನಿಟ್ಟು
ಮೈಮರೆಸುವ ಮಂಗಲವತಿಯ ಬಿಸಿಯುಸಿರೇ ಬೀಸಿದೊಲಾಗಿತ್ತು.
ಸುರಿದ ಸಂತಸವು ಸರಿದು, ಮೆರೆದ ಮನೋವತಿಯು ಮುರಿದು,
ಏರಿದ ಏಣಿಯದು ಉರಿದು, ಕೊನೆಗದು ಹರಿದು ಹೊಂಡದೊಳು
    ಗಂಡಾಗುಂಡಿಯಾಡಿತ್ತು.
ಎಚ್ಚರಗೊಂಡವನದೆರುರಿನಲಿ ಪ್ರಿಯಹಸ್ತದ ಪ್ರಿಯಂವದೆಯಿಲ್ಲ, ಬದಲಿಗೆ
    ಅಶ್ವಪ್ರಾಣದ ಅಶ್ವತ್ಥವಿದೆ.
ಅವನರಿವಿನಲೇ ಅರುವು–ಮರುವಿಡಿದಿರಲು ತರುವದು ತಪ್ಪಿತಸ್ಥನೊಲು ತಗ್ಗಿತ್ತು.
    ತಲೆಬಾಗುತಕುಗ್ಗಿತ್ತು. ಅಗ್ನಿದಿವ್ಯವ ಹಾಯ್ದವನ ಹಾದಿಯೊಳು
    ಹತ್ತುಮತ್ತೊಂದರೊಲು ಮುತ್ತುತ ಬಂದ ಕುತ್ತುಗಳೆಲ್ಲ ಕಳೆದು
    ಕುಲಪೂರ್ವಜರ ಕ್ರಾಂತದರ್ಶನದ ಕಾಣ್ಕೆಯೊಂದು ಕಣ್ಬಿಡಿದಿರಲು
    ಕೋರೈಸುವ ಕಾಂತಿಯೊಂದು ಕಾಲಿಟ್ಟಿತ್ತು.
ಸಹಸ್ರಾರದಿಂದಿಳಿದ ಸಹಸ್ರಸೂರ್ಯರಶ್ಮಿಯೊಂದು ಧಮನಿಯೊಳು ಧುಮುಕಿತ್ತು.
    ಧೀಮಂಡಲದೊಳು ಧುನಿಯಾಡಿತ್ತು.
ತವರಿನಿಂ ತಂದ ತಪೋಗುಣವದು ತಮವನ್ನು ತೊಡೆದು ತರುಣನೆದೆಯಲಿ ತಂಗಿದ್ದ
ವಿಯೋಗವನೇ ಯೋಗವಾಗಿಸಿತ್ತು, ಯುವಕನನು ಯುಗಪ್ರವರ್ತನದ
    ಯುಗಪುರುಷನನ್ನಾಗಿಸಿತ್ತು.
ಕತ್ತಲೆಯೆಂಬ ಕರಿಪರದೆಯು ಕಳಚಿ ಬೆಳಕು ದೃಗ್ಗೋಚರವಿರುವೊಲು
ನರಳಿ ನಂಜಾದ ನಿಲಯದೊಳು ನಂದಾದೀಪವೊಂದು ಥಾಳೈಸಿತ್ತು.
ಭಾವನೆಗಳ ಬಾಂದಳವನ್ನೇರಿ ಭವಿಸುತಿಹ ಬಣ್ಣಬಣ್ಣದ
ಬಾನಾಡಿಗಳ ಬದುಕಿನ ಬದುವನೇ ಬರಿದಾಗಿಸಿದಂತಿರಲು

ಸಿಡಿಮಿಡಿಗೊಂಡವನಾಂತರ್ಯದ ಅಗ್ನಿಕಣವದು ಕಿಡಿಕಿಡಿಯಾಗಿ ಕಾರಿತ್ತು,
ಕೆಡುನುಡಿಯಾಗಿ ಸಾರಿತ್ತು.
"ಓ ಅಶ್ವತ್ಥವೇ! ದಳ್ಳುರಿಯಾಗಿ ದಣದಣನೆ ದಹಿಸಿ ದುಃಖಾಶ್ರುವನೇ ದಯಪಾಲಿಸುತಿಹ
ಶೋಕವನು ಸುಂಯ್‌ಗುಡುವ ಸುಳಿಗಾಳಿಯೊಡನೆ ಸಮೀಕರಿಸಿ ಸುಮ್ಮನಾಗಿರುವೆ.
ಆಂತರ್ಯದೊಳಗಣ ಅಳಲನ್ನೇ ಅಣಕಿಸಿ ಅಪಹಾಸ್ಯಗೈದಿರುವೆ.
ಇದಿಗೋ ನಿನಗಿದೋ ಶೋಕತಪ್ತನ ಶಾಪ!
ಇನಿತು ಕಾಲ ಹರಿದ್ವರ್ಣದಿ ಹರಿದು ತಂಬೆಲರ ತೂಗಿದ್ದ ನಿನ್ನೆವನೆ ಗೂಡೆಲ್ಲ
ಗುಂಪಾಗಿ ಗುಳೆಹೋಗಲಿ,
ಪರ್ಣಗಳೆಲ್ಲ ವರ್ಣವಿರ್ಣವಾಗಿ ಒಣಗಿ, ಸುಟ್ಟಸುವರ್ಣದೊಲು ಸೊರಗಿ,
ಸಿಬರುಕಡ್ಡಿಯೊಲಾಗಿ ಸೋಲೊಪ್ಪಿಕೊಳಲಿ
ಯುದ್ಧದ ಕರಾಳಛಾಯೆಯದು ಕಾಲಾಂತದಿ ಕವಿದು ಆರ್ಯರ ರಥಚಕ್ರಗಳನು
ರಕ್ತದಿ ರೊಜ್ಜಾಗಿಸುವರೆಗೆ,
ಸಂತತವಿಹ ಸರಸ್ವತಿಯ ಜಲಶೀತಲಧಾರೆಯದು ಪ್ರಳಯಪ್ರವಾಹದಿ ಪ್ರವಹಿಸಿ,
ಹುಚ್ಚುಹೊಳೆಯಾಗಿ ಹರಿಸಿ,ಕೊಚ್ಚಿ ಕೊನ್ನಾರಗಳನೆಲ್ಲ ಮುಚ್ಚಿ
ಮೆರೆದ ಮಹಾಪುರಗಳನೇ ನೆರೆಯ ಮಹಾಪೂರದಲಿ ಮುರಿದು ಮಣ್ಣಾಗಿಸುವರೆಗೆ
ನಾನಿತ್ತ ಶಾಪವಿದು ಶಮನಗೈಯದೇ ಸಂತತವಿಹ ಶೋಕವನೇ ಸೋಕಿಸುತ್ತಿರಲಿ.!"
ಮರುಗಿದ್ದ ಮಾನವನೋರ್ವನ ಮನದಾಳದ ಮನೋಕ್ಲೇಷವದು ಮೇಲ್ವಾಯ್ದು
ಮುಂಬರಿದಿತ್ತು,
ಸುಭಿಕ್ಷವಾಗಿಹ ವೃಕ್ಷದ ವಕ್ಷವನ್ನೇರಿ ಅಕ್ಷಯಾನಲವಾಗಿ ಋಕ್ಷದಕ್ಷವಾಗುತದನು
ಕ್ಷಯಿಸಿತ್ತು.
ಹಿಸ್ಸೆಂದು ಹರಿವಜಗರ ಹೆಬ್ಬಾವೊಂದು ಮರದ ಮೈಗಾತು ಮುಂಬರಿದು
ಬಳಸುವೊಲು, ಸುರುಳೆ ಸುತ್ತುತೇರುವೊಲು,
ಜ್ವಲಂತದಗ್ನಿಯ ಜ್ವಾಲಾವೃತ ಜಿಹ್ವೆಗಳವು ಅಶ್ವವನೇರುವ ಸಾಜದಲಿ
ಅಶ್ವತ್ಥವನೇರಿ ಸುತ್ತಿತ್ತು, ನೆತ್ತಿಯೆಡೆಗೇರಿ ಮುತ್ತಿತ್ತು, ಸರ್ವವನೇ ಸುಟ್ಟುರಿದು
ಸುಮ್ಮನಾಗಿತ್ತು,
ಧಗಧಗನೆ ದಹಿಸುವ ಪರಮಪಾವನವಿಹ ಪಾವಕದಲಿ ಅಶ್ವತ್ಥದಸ್ಮಿತೆಯೆಲ್ಲ
ಭಸ್ಮೀಭೂತವಾಗಿತ್ತು, ಬರಿಬೂದಿಯಾಗಿತ್ತು
ಅಗ್ನಿಪಾದವನಿಟ್ಟು, ಅಗ್ನಿಮುಕುಟವತೊಟ್ಟು, ಅಗ್ನಿಲೋಕವನೇ ಬಿಟ್ಟು,
ಸ್ವಾಹಾದೇವಿಯೊಡನಾಗಿ

ಬಂದ ಹುತಾಶನ್‌ಗ್ನಿಯು ದಿವ್ಯಲೋಕದಿಂದಿಳಿದ ಪ್ರಜ್ವಲಿತ ಜ್ವಾಲಾರಥವೇರಿದನು.
ಚಿಮ್ಮುತ ಮೇಲೇರಿದ ವೈಶ್ವಾನರನ ವಿಶ್ವರಥವದು ಮುಗಿಲಿಮಂಡಲದೆಡೆಗೇರಿತ್ತು,
ಮೇಘದೋಘದೊಳು ಧುಮುಕಿತ್ತು,ಆಕಾಶಕುಹರದೊಳು ಸೇರಿತ್ತು, ಮುಳುಗಿ
ಮರೆಯಾಗಿತ್ತು.
ಅಶ್ವತ್ಥದೆಡೆಗೋಡಿ ರುರುವಿನ ಮನಕೆ ಮಂದಾನಿಲವ ಬೀಸುವೊಲು ಬಿಸುಸುಯ್ದು
ಅಗ್ನಿಯವ
ಮರಳಿ ರುರುವಿನಾಜ್ಞೆಗೆಂದೇ ಮಣಿದನು, ಭೊಗ್ಗನೆ ಬಾಯ್ದೆರೆದನು, ಅಶ್ವತ್ಥವನೇ
ಆಪೋಶನಗೈದನು.
ಧೂಮಧಾಮದಿ ಧುನಿಗೈದು ಧರೆಯನೇ ದಯದಿ ದಯಪಾಲಿಸುತಿಹ
ಹೋಮ–ಸಾಮಗಳಾದಿ ಕಾಮಗಳಿಗಿಂತ
ಪ್ರಿಯಳಲಿ ಪ್ರಿಯಕರನು ಪ್ರೇರಿಸಿದ ಪ್ರೇಮವೇ ಪರಮಾರ್ಥವೆಂದು ಪ್ರಮಾಣಿತವಾಗಿತ್ತು.
ಕೆಂಡದಕೆನ್ನಾಲಿಗೆಯಲಿ ಕನಲಿ ಕಕ್ಕಾವಿಕ್ಕಿಯಾದ ಕಲ್ಪದ್ರುಮಮದ ಕಾಲಾಂತವಾಗಿತ್ತು.
ಅರ್ಧಹಸಿರರ್ಧ ಕುಸಿರಿನೊಳು ಉಸಿರಾಡಿತ್ತು,
ಇನ್ನರ್ಧ ಬೆಂಕಿಯೊಳು ಬೂದಿಯಾಗುತ ಬೆಂದಿತ್ತು, ಕಣಕಣವದು ಕಪ್ಪಿಡಿದು
ಕಮರಿಕಂದಿತ್ತು.
ಅವಸರದಿ ಅಶ್ವತ್ಥದ ಅಶ್ವಪ್ರಾಣವನೇ ನಿಶ್ವಸ್ಥಗೊಳಿಸಿ ನಿರಾತಂಕದಿ ನಿಂತ
ರುರುವಿನೆದೆಯ
ವೇದಿಯೊಳು ವೇದನೆಯೆಲ್ಲ ಒಂದಾಗಿ ಒಟ್ಟೈಸಿದವು, ನಿಟ್ಟಾಗಿ ದಟ್ಟೈಸಿದವು.
ಹನಿಗೂಡಿ ಕಣ್ಣು ಮಂಜಾಗಿರಲು, ಪ್ರೇಮವೇ ಪ್ರಜ್ವಲಿತ ಪಂಜಾಗಿರಲು,
ಉಭಯಕರವೆತ್ತಿ ವಿಭವನೆಡೆ ವೀಕ್ಷಿಸಿದನವ, "ಪ್ರಿಯಂವದೆ"ಯೆನ್ನುತ ಪ್ರಲಾಪಿಸಿದನವ.
ನೆನಪಿನಂಗಳದಿದೊಗೆತಂದ ನೆರಳೊಂದು ಪ್ರಜ್ಞೆಯೊಳು ಪಜ್ಜಳಿಸಿ
ಪುನಜ್ಜೀವನಗೊಳಲೆಂದು ಪ್ರಯತ್ನಿಸಿತ್ತು.
ಅಂದೊಮ್ಮೆ ಕಾಡಿನೊಳು, ಎಲೆವನೆಗೂಡಿನೊಳು, ಕೂಡಿಯಾಡುತಿಹ ಕಾಲದೊಳು
ಕಣ್ಬೊಂಬೆಯನು ಕಾಡಲೆಂದು
ಪ್ರಿಯಂವದೆಯ ಪ್ರಿಯನಾಮವನು ಅಪ್ರಿಯವಾಗುವಂದದಿ ಪೊರೆಪೊರೆದು
ಪೀಡಿಸಿದ್ದನವ.
ಹುಸಿಕೋಪವುಕ್ಕಿರಲು ಹಸಿಮೇಯ್ಯ ಹುಡುಗಿಯವಳು ಹಸಿರೆಲೆಯಲೇ
ಉಸಿರಿಡುತಿಹ

ಚಂಪಕದ ಪೊದೆಗಳೆಡೆಗೋಡಿ ಉಕ್ಕುತೇಳುವ ಅಳಲಿನಲಿ ಬಿಕ್ಕುತ ನಿಂತಿರಲು
ಚಂಚಲೆಯು ಚಲಿಸಿಹ ಚಂಪಕದೆಡೆ ಚರಿಸಿದನು, ಚೆಲುವೆಯನು ಚುಂಬಿಸುತ
ಚೋದಿಸಿದನು. ಪ್ರಚೋದಿಸಿದನು.
ಪ್ರಿಯನ ಪದಪದ್ಮದಿ ಪವಡಿಸಿ, ಕಣ್ಣೀರಾದ ಕಮಲಕಪೋಲವನು
ಕಾಂತನಕಾಲಡಿಯಲಿಟ್ಟು ಕೋರಿದಳು.
ಸತಿಯ ಸುಂದರವಿಹ ಸುನಾಮವನು ಸುಲಲಿತದಲಿ ಸ್ಫುರಿಸಿದನವ,
ಸನ್ಮಾನಿಸುತಲಿ ಅವಳ ಸಂಭ್ರಮಿಸಿದನವ.
ತಂಬೆರಲ ತುಳುಕಿನಿಂದಾಗಿ ತೂಗುತ ತಾನಹುದು ತಾರಾಲೋಕದೆಡೆಗೇರುತಿಹ
ತೇರೆಂಬಭಿದಾನದಲಿ ತೂಕಡಿಸಿದ್ದ
ತರಗೆಲೆಯೊಂದು ತಿರ್ರೆಂದು ತಿರುಗಿತ್ತು, ಗಿರ್ರೆಂದು ಘೇರಾಯಿಸಿತ್ತು, ಕೊನೆಗೆ
ವಾತವದು ಶಾಂತ–ಪ್ರಶಾಂತವಾಗಿರಲು
ದಿಕ್ಕುದೆಸೆಯಿರದ ದಿಙ್ಮೂಢನೊಲು ಧರೆಯೆಡೆಗೆ ದೌಡಾಯಿಸಿತ್ತು, ಕಾಲಡಿಯ
ಕಸವಾಗಿತ್ತು. ಅದರೊಲಂತೆ
ಪ್ರೇಮಿಯ ಪ್ರಜ್ಞಾಪ್ರಭಾತದ ಪ್ರಜ್ಞಾಪಾತವಾಗಿತ್ತು, ಸ್ಮೃತಿಲೋಕದಿಂದಿಳಿದಿತ್ತು,
ಮೃತಿಲೋಕವನು ಮುತ್ತಿತ್ತು.
ಪ್ರಿಯಂವದೆಯ ತುಂಬುಮೊಗವದು ತುಂಬುಚಂದಿರನ 'ತವರುಮನೆಯಾಗಿತ್ತು,
ಇಳಿಬಿದ್ದ ನೀಳಕೇಶವದು
ಕತ್ತಲರಾತ್ರಿಯ ಕಾವಳದೊಲು ಕಪ್ಪಿಡಿದಿತ್ತು, ಕೊರಲುಲಿವ ಕೂಗು
ಕುಹುಕೋಕಿಲದೊಲು ಉಲಿದಿತ್ತು,
ಪಟಪಟಿಸುವೊಲು ಪುಟಿವ ನುಡಿಗಡಣವು ಯಾಜ್ಞಿಕರು ಯಜ್ಞಶಾಲೆಯೊಳು
ಯಜಿಸುವ ಯಜ್ಞದೇವತೆಯ
ಸೂಕ್ತಾದಿ ಮಂತ್ರಘೋಷದೊಲು ಮನವ ಮಂತ್ರಮುಗ್ಧಗೊಳಿಸಿತ್ತು,
ಪಯಸ್ವಿನಿಯೊಲಿಹ, ಪ್ರಣವತರಂಗಿಣಿ ಪುಷ್ಪಭದ್ರೆಯೊಲಿಹ ಪ್ರಿಯಂವದೆಯ
ಪ್ರೇಮಜಲದೊಳು ಜೀವವಿದು ಜಳಕಿಸಿತ್ತು.
'ಏನು ಧೇನಿಸಿದರೇನು? ಎತ್ತ ಭ್ರಮಿಸಿದರೇನು? ಕಾಲದಿ ಕಳೆದುಹೋದ
ಕಾಂತೆಯನು ಕರೆತರುವದೇನು?'
ಎನುತ ನಿಟ್ಟುಸಿರಿಟ್ಟು ನಿಲ್ಲುವನು, ಸಾಂತವಾಗುತ ಸಂತವಿಸುವನು.
ಮರುಕ್ಷಣವೇ ಮಬ್ಬಿಡಿದು ಬೊಬ್ಬಿರಿವನು,

“ಓ ಪ್ರಿಯಂವದೆ ! ಅನುರಾಗದಿ ಅರಳಿಹ ಅಲರಾಗಿ ಎಲರಿನೊಳು
ನರುಗಂಪನೆಸೆದು,ನೋಡನೋಡುವನಿತರೊಳು
ನಿಶ್ವಾಸವ ನಿಡಿದು ನಿರ್ಗಮಿಸಿದರೂ ನನ್ನಾಳದ ನೆನಹಿನೊಳು ನಿಂತು
ನುಡಿಯುತ್ತಿಹೆ, ನಿರಂತರದಿ ನಡೆಯುತ್ತಿಹೆ.
ಬ್ರಾಹ್ಮಗರ್ಭಜನಾಗುತವಿರ್ಭವಿಸಿಹೆನು, ಭುವಿಯೊಳು ಬೆಳೆದು ಭುವನವನೇ
ಬರಿದಾಗಿಸುವೊಲಿಹ
ಬೃಂದಾವನದ ಬೃಹದ್ವೃಕ್ಷವನು ಬರಿದಾಗಿಸಿರುವೆನು,
ಬರಿಬೂದಿಯಾಗಿಸಿರುವೆನು, ಬ್ರಹ್ಮಹತ್ಯೆಯನೇ ಗೈದಿರುವೆನು.
ತನ್ನ ತಾವಿನಲಿ ತಾನಿದ್ದು ತಂಪೆರೆದ ತರುವೊಂದನು ತರಿದೊಗೆದು
ತಪ್ಪಿತಸ್ಥನಾಗಿರುವೆನು.
ಹಿಂದೊಮ್ಮೆ ಭೃಗುಸುತನಾದ–ನನ್ನ ಪಿತನಾದ ಚ್ಯವನನು
ಮಾತೆಗರ್ಭದೊಳರ್ಭಕನಾಗಿ ಭಾರದಿ ಬೆಳೆಯುತಿಹ ಕಾಲದೊಳು
ಕುತಂತ್ರಿಯಾಗುತ ಕಾಲಿಟ್ಟು ಕುಲೀನೆಯಿಹ ಕುಲಸ್ತ್ರಿಯನು ಕೆಡಿಸಲೆಂನೋಂತ
ಪುಲೋಮನೆಂಬ
ರಕ್ಕಸನು ಪುಲೋಮೆಯನು ಪರಿಪರಿಯಾಗಿ ಪೀಡಿಸಿದನು, ಕಾಡಿಸುತ
ಕಾಡಿನಲ್ಲೋಸಿದನು, ಹಿಮ್ಮೇಳದಿ ಹಿಂಬಾಲಿಸಿದನು
ಭಾರದಿ ಬಸವಳಿದ ಭವ್ಯಳ ಗರ್ಭವದು ಚ್ಯುತವಾಗಿಚೆಲ್ಲಿತ್ತು, ಚಂಚಲವಾಗಿ
ಚಲಿಸಿತ್ತು,ಚ್ಯವನನೆಂದು ಹೆಸರಾಗಿತ್ತು.
ಹೆಡೆನಾಗರದೊಲು ಭುಸುಗುಟ್ಟಿತ್ತು. ಭಯದಿ ಬೆವರಿಳಿದು ಬಿಳಿಚಿಕೊಂಡಿಹ
ಪುಲೋಮನೆಡೆಗೊಂದು ತೀಕ್ಷ್ಣದೃಷ್ಟಿಯನೇ ಹರಿಸಿತ್ತು.
ಫಲಿತಾಂಶವದು ಫಲಕಾರಿಯಾಗಿತ್ತು, ಜ್ವಲಿಸುತಿಹ
ಜ್ವಾಲಾಗ್ನಿಕುಂಡದೊಳಗಿಂದೆದ್ದು ಬಂದ ವೈಶ್ವಾನರನವ
ರಕ್ಕಸನಕ್ಕಸತನವನು ತಡವುವಂತಡವಿದ್ದನು, ಮುತ್ತಿ ಮೈಲಿಗೆಯಿಹವನ
ಮೈಯನ್ನೇ ಸುಟ್ಟುರಿದು ಸುಡುಗಾಡಿಗೆಸೆದಿದ್ದನು.
ಪುಣ್ಯಪುನೀತವಿಹಗ್ನಿಯೊಳು ಪುಲೋಮನ ಪಾರ್ಥಿವವು ಪವಡಿಸಿತ್ತು,
ಕಪ್ಪಿಡಿದು ಕರಕಲಾಗಿತ್ತು.
ಇಂತಿರಲು ಅಂತಹ ಕುಲಪುರುಷರ`ಕಾರ್ಯವನೇ ಕಂಗೆಡಿಸುವಂದದಿ ನಾನಿಂದು
ನಿರಪರಾದಿಯಿಹ ನೆರಳಿನಂಗಳವನೊಂದನು ನಿಂತ ನಿಲುವಿನಲೇ ನಿರ್ನಾಮಗೈದಿಹೆನು.

ಓ ಮೃತ್ಯುವೇ! ನಕ್ಷತ್ರಮಂಡಲದ ಮಂಡಲಾವರ್ತಿರಾಜ್ಯದೊಳು
ಮುಖಮಂಡಲವ ತೋರದೆ ತಿರುಗುತಿಹೆ,
ಭಯವಿಡಿವ ಭಯಂಕರ ಮೊಗವಾಡವನು ಧರಿಸಿ ಧರೆಯೊಳು ಪಹರೆಸುತ್ತುತ
ಅಲೆಯುತಿಹೆ.
ಆತ್ಮೀಯರೊಲಿಹರಾತ್ಮಗಳನು ಅಂತ್ಯಗೊಳಿಸುತ ಅಂತಕನ ’ಅರಮನೆಯೆಡೆಗೆಂದು
ಕೊಂಡೊಯ್ದು ಕಾಲಿಗೆ ಕಡಗವ ಕಟ್ಟಿ ಕೂಡಿ ಹಾಕುತಿಹೆ, ಬೇಡಿ ಹಾಕುತ
ಬಂಧನದೊಳಗಿರಿಸುತಿಹೆ.
ಕಾಲವೆಂಬ ರಜ್ಜುವನು ಕೈಯೊಳಗಿಟ್ಟು ಕಂಡವರ ಕುತ್ತಿಗೆಗೆಸೆದು ಕಲ್ಪವನೇ
ವಿಕಲ್ಪವಾಗಿಸುತ ಕಾಲಾಂತವಾಗಿಸುತಿಹೆ.
ದಕ್ಷಿಣದಿಕ್ಕಿನ ದಾರಿಯೊಳಿಹ ಧರ್ಮಜನ ದ್ವಾರಪಿಂಡಿಯ ದಾಂಟಿ ದೌಡಾಯಿಸುತಿಹೆ.
ಧರ್ಮದ ದಾರಿಗೆ ದಾಪುಗಾಲಿಟ್ಟು, ಮರಳಿ ಧರೆಗೆಂದು ದಯಮಾಡಿಸಿ
ಕತ್ತಲಲೋಕದಕ್ರಮವನರುಹುವ ನರರಾರಿಲ್ಲವಿಲ್ಲಿ.
ಓ ಮೃತ್ಯುವೇ, ಕರಾಳಛಾಯೆಯಿಂದಿಳಿದು ಎನ್ನಾತ್ಮವನು ಕಲ್ಲುಮುಳ್ಳುಗಳಿಹ
ಕತ್ತಲೆಯಲಿ ಕ್ರಮಿಸಿ
ಧೂಮಾವೃತವಿಹ ದ್ವಾರದೆಡೆಗೊಯ್ದು ನಿಲ್ಲಿಸು, ನಿನ್ನಕೀರ್ತಿಗೆ ಕಿಚ್ಚನಿಟ್ಟು,
ಕರ್ಮದ ಕಟ್ಟಳೆಗಳಿಗೆ ಕೆಂಡವನಿಟ್ಟು
ಕತ್ತಲೆಯನೇ ಕಟ್ಟಿ ಕೆಡಹುತ ಕಂಗಾಲಾಗಿಸುವೆನು.”
ಕತ್ತಿಯ ಕೂರಲುಗಿನೊಲಿಹ ಕಡುನುಡಿಯ ಕಾರ್ಮೋಡವು ಕರಗಿ ಕಂಬನಿಯಾಗಿತ್ತು.
ಸ್ವರ್ಗದೊಳು ಸಾಲುಗಟ್ಟಿ ಸಾಲಂಕೃತರಿಹ ಸರ್ವದೇವತೆಗಳೆಲ್ಲ ಸಾಧುವೆನ್ನುತ
ಸಮ್ಮೋಹಿತರಾದರು.
ಸುದೂರದಿ ಕಾವಳದೊಳು ಕಾಲಿಡಲೆಂದು ಕಾಯುತಿಹ ನೀಲಾವರ್ತವದು
ರಜನಿಯೆಡೆ ರೂಹೆಗೊಳುತ ರೆಕ್ಕೆಬಡಿದಿತ್ತು.

(ಸಶೇಷ)

---

**ಟಿಪ್ಪಣಿ:**

ಈಗಾಗಲೇ ಪ್ರಿಯಂವದೆಯ ಮೃತ್ಯುವಾಗಿದೆ! ರುರುವನ್ನು ಇಲ್ಲಿಯವರೆಗೂ ಋಷಿಯ ಬಂಧನಕ್ಕೆ ಬಂಧಿಸಿದ್ದ ಬಂಗಾರದ ಕೊಂಡಿಯೊಂದು ಕಳಚಿದಂತಾಗಿ, ಆತ ದಿಕ್ಕುಗಾಣದ ದಿಙ್ಮೂಢನಾಗಿ ಕಾಡಿನಲೊಳಗಡೆ ಎಲ್ಲೆಂದರಲ್ಲಿ ಹುಚ್ಚನಂತೆ

ಅಲೆಯುತ್ತಿದ್ದಾನೆ. ಅವನ ಪ್ರೇಮದ ದಾವಾನಲದ ಪ್ರಖರತೆ ಎಷ್ಟಿದೆಯೆಂದರೆ, ಅದರ ಕಾವಿಗೆ ಸ್ವತಃ ಸ್ವರ್ಗ ನಿವಾಸಿಗಳೇ ಬೆಚ್ಚಿದ್ದಾರೆ. ಅವನೊಳಗಿರುವ ಅಗ್ನಿಯು ಮೊದಲು ರುರುವನ್ನೇ ಆಪೋಶನ ಗೈದು ನಂತರ ಇಡಿ ಪೃಥ್ವಿಯನ್ನೇ ಸುಟ್ಟು ಕೊನೆಗೆ ಮೇಲೇರುವ ಅದರ ಜ್ವಾಲೆಯು ಎಲ್ಲಿ ಸ್ವರ್ಗವನ್ನೇ ಮುತ್ತಿಬಿಡುವುದೋ ಎಂಬ ಭಯವು ಅವರನ್ನು ದಿನದಿನವೂ ಕಾಡುತ್ತಿರಲು, ಕೊನೆಗೆ ಈ ಅಪಾಯದಿಂದ ತಪ್ಪಿಸಿಕೊಳ್ಳಲು ಉಪಾಯವೊಂದನ್ನು ಹುಡುಕಿದ ದೇವ ಗಣವು ತಮ್ಮ ಪ್ರತಿನಿಧಿಯಾಗಿ ಅಗ್ನಿಯನ್ನು ಭೂಲೋಕಕ್ಕೆ ಕಳಿಸುತ್ತಾರೆ.

ಜ್ವಾಲಾ ರಥವೇರಿ ಬುವಿಗೆ ಬಂದಿಳಿದ ವೈಶ್ವಾನರನು ನೇರ ರುರುವನ್ನು ಕಂಡು ಪ್ರಸ್ತಾಪಿಸದೇ, ದೇವ ಮೂಲಕ್ಕೆ ಹತ್ತಿರವಿಹ ಪ್ರಭೇದವನ್ನು ಹುಡುಕುತ್ತಿರಲು ಅಲ್ಲೇ ಹತ್ತಿರದಲ್ಲಿ ಬೆಳೆದು ನಿಂತಿದ್ದ ಅಶ್ವತ್ಥ ವೃಕ್ಷವನ್ನು ಸಂಧಿಸುತ್ತಾನೆ. (ಅಶ್ವತ್ಥವು ಮೂಲದಲ್ಲಿ ದೈವೀಕ ತತ್ವವನ್ನೇ ಹೊಂದಿದ್ದು, ಆದಿತ್ಯ ಹೃದಯದ ಅಶ್ವ ಪ್ರಾಣವನ್ನು ಧರಿಸಿ, ದಿವ್ಯ ಲೋಕದ ವಾಯುವನ್ನು ಧರೆಯೊಳು ಹರಡಲೆಂದು ಕಲ್ಪಾಂತರಗಳ ಹಿಂದೆಯೇ ಸ್ವರ್ಗದಿಂದಿಳಿದು ಭೂಮಿಗೆ ಬಂದ ವೃಕ್ಷವಾಗಿತ್ತು) ಹಾಗೂ ಅಗ್ನಿಯ ವಿಚಾರಗಳಿಗೆ ಓಗೊಟ್ಟ ಅಶ್ವತ್ಥವು ರುರುವಿನ ಮನೋಕ್ಲೇಶವನ್ನು ಶಮನ–ಗೊಳಿಸಲೆಂದು ಪ್ರಯತ್ನಿಸಿ ರುರುವಿನ ಕೋಪಾಗ್ನಿಗೆ ಕಾರಣವಾಗಿ, ತನ್ನನ್ನು ಪ್ರಚೋದಿಸಲೆಂದು ಬಂದ ಅಗ್ನಿಯಿಂದಲೇ ಸುಟ್ಟುರಿದು ಬೂದಿಯಾಗುತ್ತದೆ.

ಋಷಿ ಪರಂಪರೆಯ ದಿವ್ಯ ಮೂಲದಿಂದ ಅವತರಿಸಿದ್ದ ರುರುವಿನ ಆಂತರ್ಯದಲ್ಲಿ ಕುಲ ಪುರುಷರಿಂದ ದತ್ತವಾಗಿ ಬಂದ ತಪಃಸಿದ್ಧಿಯು ಗುಪ್ತಗಾಮಿನಿಯಾಗಿ ಹರಿಯುತ್ತಿದ್ದು, ಪ್ರಿಯಂವದೆಯ ಮರಣಾನಂತರ ಅದು ನಿಧಾನವಾಗಿ ಚೈತನ್ಯವನ್ನು ಪಡೆಯುತ್ತಾ ಉಸಿರಾಡಲು ಪ್ರಾರಂಭಿಸಿತ್ತು. ತನ್ನ ಕೋಪ ಮಾತ್ರದಿಂದಲೇ ಅಶ್ವತ್ಥವು ದಣದಣನೆ ದಹಿಸಿರುವದನ್ನು ಕಂಡ ರುರುವಿನೊಳಗೆ ಆ ವಿಯೋಗವು ಯೋಗವಾಗಿ ಮಾರ್ಪಟ್ಟು, ತನ್ನ ಅಂತಃಸತ್ವಕ್ಕಿರುವ ಶಕ್ತಿಯ ಅರಿವಾಗುತ್ತದೆ. ಹಾಗೂ ತನ್ನ ತಪಃಶ್ಯಕ್ತಿಯು ವೃಕ್ಷವೊಂದರ ಅಂತ್ಯಕ್ಕೆ ಕಾರಣವಾಗಬಹುದಾದರೆ, ಅದನ್ನು ಸಮರ್ಪಕವಾಗಿ ಬಳಸಿ ಮೃತ್ಯವಶವಾದ ಪ್ರಿಯಂವದೆಯನ್ನು ಆ ಕರಾಳ ಲೋಕದಿಂದ ಹೊರತರಲು ಸಾಧ್ಯವಿಲ್ಲವೇ ಎಂದು ಧೇನಿಸುತ್ತ ನಿಲ್ಲುತ್ತಾನೆ.

(ಸಶೇಷ)

# ತ್ರಾಟಕ ಸೂರ್ಯ

## 6

**– ಪುಟ್ಟು ಕುಲಕರ್ಣಿ**

ಇಂದು ಶುಕ್ರವಾರ. ಮತ್ತೆ ಬರಿಸಾಲ ಕಡೆಗೆ ಪ್ರಯಾಣ ಮಾಡಬೇಕಿದೆ. ಅದೇ ಸ್ಟೀಮರ್‌ದಲ್ಲಿಯೇ ಸಾಗಬೇಕು. ನದಿಯ ಅಲೆಯಗುಂಟ ಸಾಗುತ್ತಿರುವದು ನಮ್ಮ ಜೀವನದ ಪ್ರತಿಬಿಂಬವೋ ಎನಿಸಿತು. ಅಲೆಯ ಮೇಲೆ ನಿಧಾನವಾಗಿ, ಹುಟ್ಟು ಹಾಕುತ್ತಾ, ಅಲೆಯಲೆಯ ತರಂಗಗಳಿಂದ ಉದಿಸುವ ತಾಳಬದ್ಧ ಸಂಗತಿದೊಡನೆ, ತೊಟ್ಟಿಲಿನ ತೂಗುವಿಕೆಯಂತೆಯೇ ಸಾಗುತ್ತಿದ್ದ ಜೀವನ ಇದೀಗ, ನೆಲದೊಡಲನ್ನು ಬಗೆದು ತೆಗೆದ ರಸದಿಂದ, ಸದಾ ಹೊಗೆಯುಕ್ಕಿಸುತ್ತ, ಕರ್ಕಶದ ಶಬ್ದದ ಅಪ್ಪುಗೆಯಲ್ಲಿ ಸಾಗಬೇಕಾದ ಇದನ್ನು ಪ್ರಗತಿ ಎನ್ನಬೇಕೋ ಅಥವಾ ವಿಚಲನೆಗೊಳ್ಳುತ್ತಿರುವ ವಿಕಾಸವೆನ್ನಬೇಕೋ... ಎಲ್ಲ ಯೋಚನೆಗಳ ಮಧ್ಯೆಯೇ ಬರಿಸಾಲ ತಲುಪಿದೆ. ನನ್ನ ಧ್ಯಾನದ ಮುಂದಿನ ಹಂತದಲ್ಲಿ ಸಾಗಬೇಕಿದೆ. ತ್ರಾಟಕ ಸೂರ್ಯ ನನ್ನ ಗಮ್ಯ. ಭ್ರೂಮಧ್ಯದಲ್ಲಿರುವ ಜ್ಞಾನ ನೇತ್ರವನ್ನು ಸ್ವಯಂದರ್ಶನಗೊಳ್ಳುವದೇ ತ್ರಾಟಕ ಸೂರ್ಯನ ಹಂತವೆನ್ನುವದು ಗೋಚರವಾಗುತ್ತಿದೆ. ಅದೋ ಅಲ್ಲಿಯೇ ಸೂಕ್ಷ್ಮ ರೂಪದಲ್ಲಿ ಅಂಡಾಕಾರದ ಸ್ವರೂಪದಲ್ಲಿ ಸೂರ್ಯನ ನೀಲ ವರ್ಣದ ಕಾಂತಿ ಗೋಚರಿಸುತ್ತಿದೆ. ಅದರ ಹಿಂದುಗಡೆಗೆ ತಿಳಿಹಳದಿ ವರ್ಣದ ಆವರಣದಲ್ಲಿ ರಕ್ತ ವರ್ಣದ ಬಾಗುರೇಖೆಗಳು. ನೀಲಲೋಹಿತ ಖಡ್ಗವೊಂದಿದೆ. ಅದೂ ಸಹಿತ ರಕ್ತರಂಜಿತ ವರ್ಣದಲ್ಲಿದೆ. ಇಲ್ಲಿಯೇ ಚಿತ್ತದ ಹಂತದಿಂದಲೇ ಮಸ್ತಿಷ್ಕದಲ್ಲಿ ಧ್ವನಿಯೊಂದು ಉದಿಸಿದೆ. ಕಾಮಾನಂದವು ತಂತಾನೆ ತಾನು ಪ್ರಗತಿಯಲ್ಲಿದೆ, ಜೊತೆಗಿದೋ ಹೌದು ಜೊತೆಗಿದೋ ಕ್ಷಣಾರ್ಧವೊಂದರಲ್ಲಿ ಅದೊಂದು ಚಿಂತನವಾಗಿ ರೂಪ ಪಡೆದುಕೊಂಡಿತು. ಆದರೆ ಅದು ಮೆದುಳಿನಲ್ಲಿ ಮಾತ್ರ. ಉಳಿದಂತೆಲ್ಲ ಇಡೀ ದೇಹವನ್ನು ವ್ಯಾಪಿಸಿದಂತಾದರೂ, ಅವೆಲ್ಲವೂ ಕೇವಲ ಅಂತಿಮದ ಕೆಲವೇ ಕೆಲವು ಕ್ಷಣಗಳಲಿ ಮಾತ್ರ.

ದೈನಂದಿನ ಪದ್ಧತಿಯಂತೆಯೇ ಜ್ಯೋತಿಯನ್ನು ಬೆಳಗಿಸಿ, ನಿಗದಿತ ದೂರದಲ್ಲಿ ಇಟ್ಟುಕೊಂಡು ಧ್ಯಾನಕ್ಕೆ ತೊಡಗಿದೆ. ಪ್ರಯಾಣದುದ್ದಕ್ಕೂ ಉಕ್ಕುಕ್ಕಿ ಬರುತ್ತಿದ್ದ ತೆರೆಗಳ ಜೊತೆಯಲ್ಲಿಯೇ ಕುಣಿಯುತ್ತಿದ್ದ ವಿಚಾರಗಳು ಒಂದೊಂದಾಗಿ ತಹಬಂದಿಗೆ ಬರತೊಡಗಿದವು. ಮನಸ್ಸಿನ ಹಂತದಿಂದ ಮೇಲೇರಿ, ಚಿತ್ತದ

ದ್ವಾರವನ್ನು ತಲುಪುತ್ತಿರುವಂತೆಯೇ ತೆರೆಗಳು ನಿಧಾನವಾಗಿ ನಿಧಾನವಾಗಿ ಮಾಯವಾಗತೊಡಗಿದವು. ನದಿಯ ಮೇಲ್ಭಾಗವೂ ತೆರೆಗಳಿಲ್ಲದ ಸ್ಥಿತಿಯನ್ನು ತಲುಪಿ, ಆಕಾಶವನ್ನೂ ಜೊತೆಗೆ ಸುತ್ತಲೂ ಇದ್ದ ಪ್ರಕೃತಿಯನ್ನು ಪ್ರತಿಬಿಂಬ–ಗೊಳಿಸತೊಡಗಿತು. ಪ್ರತಿಬಿಂಬವೂ ಸಹಿತ ಸ್ಫುಟವಾಗುತ್ತಿದ್ದಂತೆಯೇ, ದೇವರೆಂದರೆ ಯಾರು? ಎನ್ನುವ ಪ್ರಶ್ನೆಗೆ ಉತ್ತರದ ಸ್ವರೂಪದ ವಾತಾವರಣ ಕಾಣತೊಡಗಿತು. ವಿದ್ಯುತ್–ಮಾನವನ ಎದೆ ಭಾಗ ಮಾತ್ರ ಕಾಣುತ್ತಿದೆ. ಚಂದ್ರನು ಈ ವಿದ್ಯುತ್ತನ್ನು ಭರಣಗೊಳಿಸುತ್ತಿದ್ದಾನೆ. ಅಲ್ಲಿರುವ ದೇಹ ಒಮ್ಮೆ ಕಂಡು ಸಂಚಲನಗೊಳುವಂತೆ ಭಾಸವಾಗುತ್ತಿದೆ. ಅಲ್ಲಿ ಅದೆಲ್ಲವೂ ಸದಾ ಸ್ಥಿತವಿದ್ದರೂ, ಸದಾ ಕಾಲವೂ ಗಮನಕ್ಕೆ ಸಿಗುತ್ತಿಲ್ಲ. ಅದೇ ವಿದ್ಯುನ್ಮಂಡಲವಾಗಿದೆ. ಮಿಂಚು ಕಾಂತಿಯಲ್ಲಿ ಸ್ಫುಲಿಂಗಗಳು ಅಲ್ಲಿವೆ – ಇವೇ ವಿಜಸ್. ಕೆಂಪು ವರ್ಣದ ಹಿನ್ನೆಲೆ, ಅದು ರಕ್ತ ವರ್ಣವೋ ಅಥವಾ ಪಿಂಗಳದ ಅಂಶದ ಕೆಂಪು ಎನಿಸುತ್ತಿದೆ. ವಿಶಾಲವಾದ ಸ್ವರ್ಣ ವರ್ಣದ ಆವರಣದೊಳಗೆ ಸೂರ್ಯನು ಕಂದುಗೊಳ್ಳುತ್ತಿದ್ದಾನೆ. ಸ್ವರ್ಣಮಿಶ್ರಿತ ಕೆಂಪು ವರ್ಣದ ಚಂದ್ರಹಾಸ(ಬಾಗು ಖಡ್ಗ)ವೊಂದು ಸತ್ತ್ವ ಮತ್ತು ರಜಸ್ ಪ್ರತೀಕವಾಗಿ ಕಾಣುತ್ತಿದೆ. ವಾಸುದೇವನ ಸಾಕ್ಷಾತ್ಕಾರ! ಅಗ್ನಿಯ, ಜಲದ, ಪೃಥ್ವಿಯ ವಿಜಸ್ (ಸ್ಫುಲಿಂಗಗಳು) ಬಾಹ್ಯದಲ್ಲಿ ಅವಿರತವಾಗಿ ಗೋಚರಿಸುತ್ತಲಿವೆ. ಜೊತೆಜೊತೆಗೆ ಛಾಯಾಪುರುಷನ ಎದೆ ಭಾಗ ಸಹಿತ ಅಲ್ಲಿ ಕಾಣುತ್ತಿದೆ. ಸ್ವರೂಪವೂ ಸಹಿತ ಕೆಂಪು ವರ್ಣದಲ್ಲಿದೆ. ಯು.ಆರ್. ಕಾಮಾನಂದದ ಜೊತೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ಪೃಥ್ವಿಯ ಸುದೀರ್ಘವಾದ ತಂತು, ಮಿಂಚು ಕಾಂತಿಯಲ್ಲಿ ಕುಂಡಲಿಯ ಆಕಾರದಲ್ಲಿ ವಾಯು ಮಂಡಲದಲ್ಲಿದೆ. ಉಜ್ಜ್ವಲದ ಉದಿತವಲ್ಲಿದೆ. ಕಾಳಿಯ ನೀಲಮೇಘ ವರ್ಣದ ಮೇಲ್ಭಾಗ ಸೂರ್ಯನಿಂದ ಮುಕುಟಧಾರಿಯಾಗಿದೆ. ಇದೇ ಶಕ್ತಿಯು ಬುದ್ಧಿಯನ್ನು ಜಾಗ್ರತಿಗೊಳಿಸದೆ – ಆದರೆ ಅದು ಉಗ್ರವಲ್ಲ, ಅತಿ ಸರಳವಾದ ಆವರಣವಾಗಿದೆ. ಇವೆಲ್ಲವೂ ಸವಿಕಲ್ಪ, ಸವಿಚಾರ ಮತ್ತು ಅವಿಚಾರ ಸಮಾಧಿಯ ಹಂತವಾಗಿವೆ, ಅತ್ಯಂತ ಸಂಕ್ಷಿಪ್ತವಾಗಿದ್ದಂತೆ ಕಂಡುಬಂದರೂ ಕರ್ಣಗಳಿಗೆ ಮಾತ್ರ ಕೇವಲ ಅಬ್ಬರದ ಜೋರು ಶಬ್ದವಾಗಿರದೇ ಅತ್ಯಂತ ಗಂಭೀರವಾಗಿದೆ. ಆ ತೇಜಪೂರ್ಣತೆಯ ಶೀತವಾಯುವಿದ್ದರೂ ಶೀತವೆನಿತೂ ಇಲ್ಲ. ಶೀತದ ಸಂವೇದನೆಯೂ ಇಲ್ಲದ ಸಮರ್ಥಪೂರ್ಣ ತೇಜವದು. ಅಪ್ಯಾಯಮಾನವಾದ ಆಹ್ಲಾದಮಯದಿಂದ ಕೂಡಿರುವ ಸುಖೋಷ್ಣತೆಯ ಅನುಭೂತಿ, ಅಲ್ಲಿರುವದೆಲ್ಲ ಕೇವಲ ಅಲ್ಲಿಯೇ ಸಾಂದ್ರಗೊಂಡಿರುವ ಪೇಲವದ ಹಸಿರು ವರ್ಣ. ಇದೇ ಸರೂಪ

ಧ್ಯಾನ, ಆದರೆ ಅಂತರ್ದರ್ಶಿಯಾಗಿದೆ. ಅಲ್ಲಿ ಜಗತ್ತಿನ ಒಡೆಯನ (ಶಾ ಅಲಮ್) ಮುಖ ಕಾಣುತ್ತಿದೆ, ಕುಮುದಿನಿಯ ವದನವೂ ಕಾಣುತ್ತಿದೆ, ಭಾವದಲ್ಲಿ ಕಾಮಾನಂದವು ಹುದುಗಿದಂತೆ ತೋರುತ್ತಿದ್ದರೂ – ಕೊಂಚ ಗಾಬರಿಗೊಳ್ಳುವಂತಿದ್ದರೂ – ವ್ಯಾಪಕವಿದ್ದಂತೆ ತೋರುತ್ತಿತ್ತು. ಅಲ್ಲಿದ್ದ ಹತ್ತಿಯ ಹಾಸಿಗೆಯ ಮೇಲೆ ಇಡಲಾಗಿದ್ದ ದ್ರಾಕ್ಷಿ ತುಂಬಿರುವ ಬುಟ್ಟಿ ಕಾಣುತ್ತಿತ್ತು.

ಎಷ್ಟು ಸಮಯ ಈ ತಲ್ಲೀನತೆಯಲ್ಲಿ ಇದ್ದೇನೋ ಅರಿಯೆ. ಎಚ್ಚರಾದಾಗ ಮತ್ತೆ ಮನಸ್ಸಿನಲ್ಲಿ ಚಿಂತನವು ಪ್ರಾರಂಭಗೊಂಡಿತು, ಈ ಎಲ್ಲ ಸಂಕೇತಗಳು ನನ್ನನ್ನು ಯಾವ ಯಾನಕ್ಕೆ ತೊಡಗಿಸಲು ನಿಯತಿಗೊಂಡಿವೆ? ಇವುಗಳು ಬಿಡಿಬಿಡಿಯಾಗಿ ಕಂಡರೂ ಅಂತರಂಗದಲ್ಲಿ ಸೂತ್ರಬದ್ಧತೆಯಲ್ಲಿಯೇ ಪೋಣಿಸಲ್ಪಟ್ಟಿವೆ. ನಿಯತಿಯ ಯಾವ ಸೂತ್ರದ ಕುರಿತು ನಾನು ಪಾತ್ರ ವಹಿಸಬೇಕಾಗಿದೆ? ಪರಿವರ್ತನೆಯ ಪ್ರಕೃತಿ ಸಹಜ ಕ್ರಿಯೆಗಳೆಲ್ಲವೂ ದೈವ ನಿರ್ಮಿತವಾಗಿ, ಸೂತ್ರಬಂಧಿತವಾಗಿ ಇದ್ದಲ್ಲಿ, ಮಾನವನ ಪಾತ್ರವಾದರೂ ಏನು? ತನಗೆ ಒದಗಿ ಬಂದ ಪಾತ್ರವನ್ನು ಆ ಸೂತ್ರಧಾರ ಯೋಜಿಸಿದ ರೀತಿಯಲ್ಲಿ ಅನುಷ್ಠಾನಗೊಳಿಸುವಲ್ಲಿ ಮಾತ್ರ ಸೀಮಿತವೇ? ಏಕೆ ಈ ಪ್ರಕೃತಿ ಹೀಗೆ ಗುಹ್ಯವಾಗಿ ಇರಲು ಅಪೇಕ್ಷಿಸುತ್ತಿದೆ? ಮಾನವನ ದುರಾಸೆಯ ಕುರಿತು ಎಚ್ಚರಿಕೆಯ ವಿಧಾನವೇ ಇದು? ಏನೆಲ್ಲಾ ಪ್ರಶ್ನೆಗಳು ಉದಿಸತೊಡಗಿದವು. ಆ ಗೂಢವನ್ನೇ ನಾವು ದೇವರು ಎಂದುಕೊಳ್ಳುತ್ತಿದ್ದೇವೆಯೇ? ಹಾಗಾದರೆ ದೇವರೆಂದರೆ ಯಾರು?ಏನು? ಆ ದೇವರಾದರೂ ಸಹಿತ, ಇಲ್ಲಿ ಕೇವಲ ಚಿಂತನವನ್ನು ಮಾತ್ರವೇ ಮಾಡಿಕೊಂಡಿರಲು, ಎಲ್ಲವನ್ನೂ ತತ್ತ್ವ ಜ್ಞಾನದಲ್ಲಿ ಹುದುಗಿಸಿ ಇಡಲು, ಪೌರಾಣಿಕ ಕಲ್ಪನೆಗಳ ಮೂಲಕ ವ್ಯವಸ್ಥೆಯನ್ನು ರೂಪಿಸಲು, ಕೇವಲ ಶಾಬ್ದಿಕ ಜಾಲದಲ್ಲಿ, ತರ್ಕ–ಜಿಜ್ಞಾಸೆಯಲ್ಲಿ ಆಟವಾಡಲೆಂದು ನನ್ನನ್ನು ಸೃಷ್ಟಿಸಿಲ್ಲ. ಆದರೆ ನೇರವಾಗಿ ಪ್ರೇಮ, ತಿಳುವಳಿಕೆ (ಜ್ಞಾನದೊಡನೆ) ಯೊಡನೆ ಕ್ರಿಯಾ ಪ್ರವೃತ್ತನಾಗಲೆಂದು ಸೃಷ್ಟಿಸಿದ್ದಾನೆ ಎನ್ನುವದು ನನಗೀಗ ದೃಷ್ಟಾಂತವಾಗುತ್ತಿದೆ. ಅದಕ್ಕಾಗಿಯೇ ಇವೆಲ್ಲ ಅನುಭವಗಳ ಮೆಟ್ಟಿಲುಗಳನ್ನು ಹತ್ತಲೇಬೇಕಾಗಿದೆ. ಆದರೆ ಮುಖ್ಯವಾಗಿ, ಈ ದಿವ್ಯತ್ವದ ಹಿನ್ನೆಲೆಯಲ್ಲಿಯೇ ನಾನು ಕ್ರಿಯಾ ಪ್ರವೃತ್ತನಾಗಬೇಕಿದೆ. ಇದರಿಂದ ನಾನೂ ಸಹಿತ ಆ ದಿವ್ಯ ಸತ್ತೆ ಹಾಗೂ ಅದರ ಆತ್ಮಾಭಿವ್ಯಕ್ತಿಯಲ್ಲಿಯೇ ದಿವ್ಯವಾಗಿ ಬಿಡುವೆ; ನಾನು ಖಂಡಿತವಾಗಿಯೂ ದೇವರನ್ನು ಕೇವಲ ದೇವರೆಂದು ಮಾತ್ರವೇ ಪ್ರೀತಿಸುವದಕ್ಕಿಂತ, ಇಡೀ ವಿಶ್ವದ ಜೀವಿಗಳಲ್ಲಿ, ದೃಶ್ಯಗಳಲ್ಲಿ, ಅಧಿಕರಣಗಳಲ್ಲಿ, ಸುಭೋಗಗಳಲ್ಲಿ, ಘಟನಾವಳಿಗಳಲ್ಲಿ – ಇವುಗಳನ್ನು ಇತರರು ಒಳ್ಳೆಯವೆಂದೋ ಅಥವಾ ಕೆಟ್ಟ

ಸಂಗತಿಗಳೆಂದು ಪರಿಗಣಿಸಿದರೂ ಸಹಿತ ಮತ್ತು ಅವು ನೈಜವಾಗಿಯೂ ಅಸ್ತಿತ್ವದಲ್ಲಿವೆಯೇ ಅಥವಾ ಕಾಲ್ಪನಿಕವಾಗಿವೆಯೇ, ಅದೃಷ್ಟ ರೂಪದಲ್ಲಿವೆಯೇ ಅಥವಾ ವಿಪತ್ಕಾರಕವಾಗಿವೆಯೋ ಎಂದೆಲ್ಲಾ ಏನೇ ಅಭಿಪ್ರಾಯವಿದ್ದರೂ ಸಹಿತ – ಇವೆಲ್ಲವುಗಳ ಜೊತೆಗೇ ನಾನು ಕಡ್ಡಾಯವಾಗಿ ದೇವರನ್ನು ಅರ್ಥೈಸಿಕೊಳ್ಳಬೇಕಾಗಿದೆ. ಆ ಸಂದರ್ಭದಲ್ಲಿ ಈ ದೇವರು ಸರ್ವ ಸಮತಾ ಭಾವದ ದಿವ್ಯತ್ವದ ಮತ್ತು ಸುವ್ಯವಸ್ಥೆಯ ಪರಿಪಕ್ವತೆಯ ಹಿನ್ನೆಲೆಯಲ್ಲಿಯೇ ಇದ್ದು, ಆಗ ಪರಿಪೂರ್ಣ, ಪರಿಶುದ್ಧ ಮತ್ತು ಅಗಾಧ ಅನಂತತೆಯಲ್ಲಿಯೇ ನಾನೂ ಸಹಿತ ದೇವನನ್ನು ಮೆಚ್ಚುವಂತಹ ಮತ್ತು ಒಂದಿಲ್ಲೊಂದು ದಿನ ಈ ಎಲ್ಲ ಮನುಕುಲವೂ ದೇವರೇ ಆಗಿಬಿಡುವಂತೆಯೇ ಪ್ರೇಮಿಸುತ್ತ ಕಾರ್ಯಪ್ರವೃತ್ತನಾಗಬೇಕಿದೆ. ಇದೇ ತ್ರಾಟಕ ಸೂರ್ಯದ ಮುಕ್ತಾಫಲವೂ ಹೌದು.

* * *

ಇಂಗ್ಲಂಡಿನಿಂದ ಬರುವ ಮುನ್ನ ನನಗೆ ಈ ಯೋಗದ ಕುರಿತು ಏನೂ ತಿಳಿದಿರಲಿಲ್ಲ. ತಂದೆಯ ಇಚ್ಛೆಯೂ ಇದೇ ಆಗಿತ್ತಲ್ಲವೇ? ನಾನು ಯೋಗದ ಕುರಿತು ಸಂವಾದಿಸಬೇಕೆಂದರೆ, ನಾನು ಆ ವಿಷಯದಲ್ಲಿ ಸಂಪೂರ್ಣವಾಗಿ ಅಜ್ಞನೆಂದೇ ಎಲ್ಲರ ಭಾವನೆಯೂ ಇತ್ತಲ್ಲವೇ? ಅದರಲ್ಲಿ ತಪ್ಪೇನೂ ಇಲ್ಲವಲ್ಲ, ಸಂಪೂರ್ಣವಾಗಿ ಆಂಗ್ಲಮಯ ವೇಷ–ಭೂಷಣ–ಚಿಂತನಗಳಲ್ಲಿಯೇ ಸುಖದ ಕಲ್ಪನೆಗಳನ್ನು ರೂಪಿಸಿಕೊಂಡೇ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಇಂಗ್ಲಂಡಿಗೆ ಪ್ರಯಾಣ ಬೆಳೆಸುತ್ತಿದ್ದುದು ಹೊಸ ವಿಷಯವೇನೂ ಆಗಿರಲಿಲ್ಲ. ಅದರಲ್ಲೂ ಡಾ॥ ಕೃಷ್ಣಧನ ಘೋಷರ ಬಗೆಗೆಂತೂ ಇದು ಹೃದಯದ ತುಡಿತವಾಗಿತ್ತು. ಆದರೆ, ಭಾರತಕ್ಕೆ ಬಂದ ಮೇಲೆ, ಯೋಗದ ಕುರಿತು ಅಭೀಪ್ಸೆ ಉದಿಸಿದ್ದು, ಅದರ ಪ್ರಾರಂಭದ ಪಾಠಗಳನ್ನು ಕೆಲವು ಗ್ರಂಥಗಳಿಂದ ಪಡೆದುಕೊಂಡೆ. ಆದರೆ, ಯಾರನ್ನೇ ಕೇಳಿದರೂ, ಅದರಲ್ಲೂ ಗುರು ಮುಖೇನವೇ ಕಲಿಯಬೇಕು ಎನ್ನುವ ನಿಯಮಾನುಸಾರವಾಗಿ, ಯಾರೂ ನನ್ನನ್ನು ಶಿಷ್ಯನನ್ನಾಗಿಸಿಕೊಳ್ಳಲು ಒಪ್ಪಲಿಲ್ಲವೇನೋ ಎನಿಸುತ್ತದೆ. ಅದರಲ್ಲೂ ಹಿಂದೂ ಧಾರ್ಮಿಕ ವಿಧಿ–ವಿಧಾನಗಳು, ಗ್ರಂಥಗಳು, ಆಚರಣೆಗಳ ಕುರಿತು ನನಗಿದ್ದ ಜ್ಞಾನದ ಸೀಮಿತತೆಯನ್ನು ಅರಿತು, ಈ ರೀತಿ ದೂರ ಉಳಿದರೇ? ಆದರೆ ನನ್ನ ಆತ್ಮದ ಅಭೀಪ್ಸೆಯೇ ಇದಾಗಿದ್ದು ನನಗೆ ಸಂಪೂರ್ಣ ಮನದಟ್ಟಾದ ಮೇಲೆ, ಇನ್ನುಳಿದವರನ್ನು ಕೇಳಿ ಸಾಗುವದಕ್ಕಿಂತ, ನನಗೆ ನಾನೇ ಮುಂದುವರೆಯುವದು ಉತ್ತಮವೆನ್ನುವ ಭಾವನೆ ಮೂಡತೊಡಗಿತು. ಹಾಗೆಂದುಕೊಂಡು ನಿರ್ಧಾರ ಮಾಡಿ,

ಪ್ರಯತ್ನ ಪಡುತ್ತಿದ್ದಂತೆಯೇ, ಅಚ್ಚರಿದಾಯಕ ಘಟನೆಯಂತೆ, ಅದರ ಮಾರ್ಗಗಳು ತಂತಾನೇ ಪ್ರತ್ಯಕ್ಷಗೊಳ್ಳುತ್ತ ಬಂದವು. ಆಧ್ಯಾತ್ಮಿಕ ಸ್ವರೂಪದ ಸೂಕ್ಷ್ಮ ಸಂಗತಿಗಳೂ ಸಹಿತ ಪ್ರತ್ಯಕ್ಷವಾಗಿ ಪಥವನ್ನು ತೋರತೊಡಗಿದವು. ಇದೇ ನಿರ್ಧಾರದೊಂದಿಗೆ ಅಧ್ಯಯನ ಮುಂದುವರೆದಂತೆ ಯೋಗವೂ ಸಹಿತ ಸಹಜ ಕ್ರಿಯೆಯಾಗಿ ಸ್ಪಂದಿಸ–ತೊಡಗಿತು. ಹೀಗಾಗಿ, ಈ ದಿನ ಕಾಣ್ಕೆಯಲ್ಲಿ ಕಂಡ ಪ್ರತಿಯೊಂದು ಸಂಕೇತವೂ ಏನನ್ನು ಸಂಕೇತಿಸುತ್ತದೆ ಎನ್ನುವದು ನಿಚ್ಚಳವಾಗಿ ಚಿತ್ತದಲ್ಲಿ ಅಚ್ಚೊತ್ತಲ್ಪಡುತ್ತಿತ್ತು.

ಇದನ್ನೆಲ್ಲಾ ಯೋಚಿಸುತ್ತಿದ್ದಾಗ, ಓ ಅದೇ, ವಡೋದರಾದಲ್ಲಿದ್ದಾಗ ಘಟಿಸಿದ ಘಟನೆ ನೆನಪಾಯಿತು. ಈಗಲೂ ಅದು ಸಂಪೂರ್ಣವಾಗಿ ಕಣ್ಣೆದುರಿಗೇ ಇದೆ, ಅಂದು ಕಾಮಾಟಿಬಾಗ ಮೂಲಕ ಸಾರೋಟದಲ್ಲಿ ಹೋಗುತ್ತಿದ್ದಾಗ, ಇದ್ದಕಿದ್ದಂತೆ ಕುದರೆ ಚಲಿಸದೇ ಕುಸಿದು ಬಿಟ್ಟಿತ್ತಲ್ಲವೇ? ಮೊದಲೇ ಕತ್ತಲೇ ಬೇರೆ, ಸಾಗುತ್ತಿದ ಸಾರೋಟು ಒಮ್ಮೆಲೇ ಕೆಳ ಮುಖವಾಗಿ ಬಿದ್ದದ್ದರಿಂದ, ನಾನೂ ಮುಗ್ಗರಿಸಿದ್ದೆ. ಆದರೆ ನಾನು ಸಾರೋಟಿನ ಒಳಗೆ, ಸಾವರಿಸಿಕೊಂಡು ಹೊರಗೆ ಬರಲು ಯೋಚಿಸುತ್ತಿದ್ದಂತೆಯೇ, ನಿಧಾನವಾಗಿ ಸಾರೋಟಿನ ಬಾಗಿಲನ್ನು ತೆರೆದೆ, ಅಷ್ಟರಲ್ಲಿಯೇ ಸೂಡಿ ಬೆಳಗಿಸಿಕೊಂಡು ಬಂದ ಅಪರಿಚಿತ ವ್ಯಕ್ತಿಯೋರ್ವ, ಕುದುರೆಯ ಕಡಿವಾಣವನ್ನು ಹಿಡಿದು, ನಿಧಾನವಾಗಿ ಕುದುರೆಯನ್ನು ನಿಲ್ಲಿಸಲು ಯತ್ನಿಸಿದ. ಅವನ ಸಹಕಾರದಿಂದ ಮೇಲೆದ್ದು ನಿಂತ ಕುದುರೆ ಒಂದು ಹೆಜ್ಜೆಯನ್ನೂ ಮುಂದೆ ಇಡಲಿಲ್ಲ. ಅಲ್ಲಿ ಘಟಿಸಬಹುದಾಗಿದ್ದ ಘನಘೋರ ದುರಂತವೊಂದನ್ನು ಆ ಅಪರಿಚಿತ ಪುರುಷ ತಪ್ಪಿಸಿದ್ದ. ಅವನು ಮತ್ತೆ ಅಲ್ಲಿ ಕಾಣಲಿಲ್ಲ, 'ಆ ದಿವ್ಯ ಪುರುಷನೇ ದೈವ ಸ್ವರೂಪದಲ್ಲಿ ಆಗಮಿಸಿ ನನ್ನನ್ನು ರಕ್ಷೆ ಮಾಡಿದ್ದಾನೆ ಎನ್ನುವದು ಅನುಭವಕ್ಕೆ ದಟ್ಟವಾಗುತ್ತ ಬಂದಿತು. ಇದೆಲ್ಲವೂ ಯೋಗದಿಂದಲೇ ಸಾಧ್ಯವಾಗುತ್ತಿದೆ ಎನ್ನುವದೂ ಅನುಭವಕ್ಕೆ ಬರುತ್ತಿದ್ದಂತೆಯೇ, ಇನ್ನೂ ತೀವ್ರವಾಗಿ ಯೋಗಾಭ್ಯಾಸವನ್ನು ಮುಂದುವರೆಸಬೇಕು ಎಂದುಕೊಂಡು, ನನಗೆ ನಾನೇ ಪಥವನ್ನು ನಿರ್ಮಿಸಿಕೊಳ್ಳುತ್ತಾ ಸಾಗುವದೆಂದು ನಿರ್ಣಯಿಸಿದ್ದು, ಅದು ಈ ತ್ರಾಟಕ ಸೂರ್ಯನ ಹಂತಕ್ಕೆ ಕರೆ ತಂದಿದೆ.'

ಪರಂಪರಾಗತವಾಗಿ ಅನುಷ್ಠಾನದಲ್ಲಿ ಇರುವ ಆಧ್ಯಾತ್ಮಿಕ ವಲಯದ ಕೆಲವು ಘಟನೆಗಳು ಆಶ್ಚರ್ಯದಂತೆ ಕಂಡರೂ, ಯೋಗದ ಮೂಲಕ ಅದರ ಅಂತರಾರ್ಥವು ಗೋಚರವಾಗತೊಡಗಿತು. ಆದರೂ ಅನುಷ್ಠಾನವನ್ನೇ ಆಧಾರಭೂತವಾಗಿರಿಸಿ–ಕೊಂಡಿರುವ ಅಭಿಪ್ರಾಯವೆಂದರೆ, ಸನ್ಯಾಸ ಎಂದರೆ ಸಂಸಾರವನ್ನು ತ್ಯಜಿಸುವದು

ಎಂದೇ ಹೇಳಲಾಗುತ್ತಿದೆ. ಆದರೆ ನನಗೇಕೋ ಇದು ಒಗ್ಗುತ್ತಿಲ್ಲ. ನಾನು ಹೊಸದೊಂದು ಮಾರ್ಗವನ್ನೇ ಅರಸಬೇಕಿದೆಯೇ? ಎಂದು ಸಂದೇಹವೂ ಆಗ ಉದಿಸಿತ್ತು. ಆದರೆ ಅದೇ ನನ್ನ ಪಥ ಎಂದು ಮನದಟ್ಟಾದಾಗ, ಮತ್ತೆ ಅದರ ಕುರಿತು ಎಂದಿಗೂ ಯೋಚನೆ ಮಾಡಲೇ ಇಲ್ಲ. ಈ ಪಥವೇ ಜಗತ್ತಿಗೂ ಒಂದು ಹೊಸ ದಾರಿಯನ್ನು ಮಾಡಿಕೊಡುತ್ತದೆ ಎನ್ನುವ ವಿಶ್ವಾಸವೂ ಕಂಡಿತು. ಅದರಲ್ಲೂ ನನಗಿರುವ ಮೂಲ ಉದ್ದೇಶ ಭಾರತದ ಸ್ವಾತಂತ್ರ್ಯ ತಾನೆ. ಇಲ್ಲಿ ನನ್ನ ವೈಯಕ್ತಿಕ ಮೋಕ್ಷದ ಮಾತೇ ಇಲ್ಲ.

ಈ ಎರಡು ದಿನಗಳ ಅನುಷ್ಠಾನದಲ್ಲಿಯೇ ನಾನು ಇಟ್ಟಿದ್ದ ಪ್ರಾರಂಭದ ಹೆಜ್ಜೆಗಳು ಸೂಕ್ತವಾಗಿವೆ ಎನ್ನುವದನ್ನು ಗಟ್ಟಿ ಮಾಡಿದ್ದು, ಆ ನಾಗಾ ಸಾಧುವಿನ ಘಟನೆ ಎಂದು ತೋರಿತು. ಸೋದರ ಬರೀಂದ್ರನಿಗೆ, ಬಂಗಾಲದ ಹವಾಮಾನದಿಂದ ದೂರವಿರುವ ವಡೋದರಾ ಹಾಗೂ ಆ ವಿಂಧ್ಯ ಪರ್ವತದ ಶೀತದಿಂದಾಗಿ ಆರೋಗ್ಯದಲ್ಲಿ ವಿಪರೀತ ಏರುಪೇರು ಕಾಣುತ್ತಿತ್ತು. ಒಮ್ಮೆಯಂತೂ, ಬರೀಂದ್ರ ತೀವ್ರ ಜ್ವರದಿಂದ ಬಳಲುತ್ತಿದ್ದಾಗ, ಯಾವುದೇ ಔಷಧೋಪಚಾರವೂ ಪರಿಣಾಮ ಬೀರದೇ ಇದ್ದ ಸಂದರ್ಭದಲ್ಲಿ, ಓರ್ವ ನಾಗಾ ಸಾಧು ಅಲ್ಲಿಗೆ ಬಂದಿದ್ದರು. ನಾನೂ ಅದೇ ತಾನೇ ಯೋಗದ ಪ್ರಥಮ ಹೆಜ್ಜೆಯಲ್ಲಿ ಇದ್ದವನೇ ಆಗಿದ್ದೆ, ಯಾರದು ಅಲ್ಲಿ ಮಲಗಿದವರು? ಎಂದು ಮಲಗಿದವನ್ನೇ ದಿಟ್ಟಿಸುತ್ತ ಕೇಳಿದ, ಬರೀಂದ್ರ ಜ್ವರ, ವಾತಾವರಣದ ಬದಲಾವಣೆ ಕುರಿತು ಆ ನಾಗಾ ಸಾಧುವಿಗೆ ತಿಳಿಸುತ್ತಲೇ, ನಾಗಾ ಸಾಧು, ಔಷಧದಿಂದ ಏನೂ ಉಪಯೋಗ ಕಾಣುವದಿಲ್ಲ, ಆದರೆ ನಾನು ನನ್ನ ಮಂತ್ರ ಶಕ್ತಿಯಿಂದ ಪ್ರಯತ್ನಿಸಬಲ್ಲೆ, ಆದರೆ ಅದನ್ನು ನೀವೇ ಒಪ್ಪಿದರೆ ಮಾತ್ರ .. ಎಂದು ನನ್ನನ್ನೇ ನೇರವಾಗಿ ನೋಡುತ್ತ ನುಡಿದಿದ್ದ. ನಾನೂ ಈ ಮಂತ್ರ ಶಕ್ತಿಯ ಮೂಲಕ ಪರಿಹಾರ ದೊರೆಯುತ್ತದೆ ಎಂದು ಅದಕ್ಕೆ ಸಮ್ಮತಿಸಿದ್ದೆ. ಸನ್ನ್ಯಾಸಿಯ ಅಪೇಕ್ಷೆಯಂತೆಯೇ ಒಂದು ನೀರು ತುಂಬಿದ ಬಟ್ಟಲು ಹಾಗೂ ಒಂದು ಚಿಕ್ಕ ಕತ್ತಿಯನ್ನು ನೀಡಿದ್ದೆ. ಸನ್ನ್ಯಾಸಿ ಆ ನೀರು ತುಂಬಿದ ಬಟ್ಟಲನ್ನು ತೆಗೆದುಕೊಂಡು, ಕೈಲಿದ್ದ ಕತ್ತಿಯನ್ನು ಆ ನೀರಿನಲ್ಲಿ ಅದ್ದಿ ತಿರುಗಿಸಿದ. ಅವನ ತುಟಿಗಳು ಸಹಿತ ಏನನ್ನೋ ಉಸುರುವಂತೆ ಚಲಿಸುತ್ತಿದ್ದವು. ಕೆಲ ಕ್ಷಣಗಳ ನಂತರ 'ಇನ್ನೇನು ಜ್ವರವು ಕಡಿಮೆಯಾಗುತ್ತದೆ' ಎನ್ನುತ್ತಲೇ ಆ ನೀರನ್ನು ಕುಡಿಯಲು ಬರೀಂದ್ರನಿಗೆ ನೀಡಿದ್ದ.

ನಿರೀಕ್ಷೆಯಂತೆಯೇ ಬರೀಂದ್ರನ ಜ್ವರವು ಕಡಿಮೆಯಾಗಿತ್ತು. ಈ ಘಟನೆಯಂತೂ ಯೋಗದ ಶಕ್ತಿಯ ಬಗೆಗೆ ಹಾಗು ಅದರ ಆಧ್ಯಾತ್ಮಿಕ ಶಕ್ತಿಯ ಬಗೆಗೆ ನನಗೆ

ಸಂಪೂರ್ಣವಾದ ವಿಶ್ವಾಸ ಮೂಡಿತು. ಏಕೆಂದರೆ ಯೋಗದ ಮೂಲಕ ಲಭ್ಯವಾಗುವ ಶಕ್ತಿಯು ಆ ಪರಮ–ಶಕ್ತಿಯೇ ಆಗಿದೆ. ಕಾರ್ಯವನ್ನು ಅತ್ಯಂತ ವ್ಯವಸ್ಥಿತವಾಗಿ ಅನುಷ್ಠಾನಿಸಲು ಇದನ್ನು ಪರಿಣಾಮಕಾರಿಯಾಗುವಂತೆಯೇ ಸಾಧನೆಯ ಮೂಲಕ ಸಾಧಿಸಿಕೊಳ್ಳಬಹುದು ಎನ್ನುವದೂ ಮನದಟ್ಟಾಯಿತು. ಇದನ್ನು ಸಾಧಿಸಲು ಪ್ರಾಣಾಯಾಮವೇ ಮುಖ್ಯವಾದ ಕ್ರಿಯೆ ಎನ್ನುವದು ಯೋಗದ ಅನುಷ್ಠಾನದಲ್ಲಿ ಪ್ರಚಲಿತವಿದ್ದ ಸಂಗತಿಯಾಗಿತ್ತು. ಅದಕ್ಕಾಗಿಯೇ ಅಲ್ಲಿಂದಲೇ ಪ್ರಾಣಾಯಾಮದ ಒಂದೊಂದೇ ಮೆಟ್ಟಿಲನ್ನು ಆರೋಹಣ ಮಾಡುತ್ತಾ ಸಾಗಿದೆ. ಆತ್ಮೀಯ ಮಿತ್ರನಾಗಿದ್ದ ಬಾಬಾಜಿ ದೇವಧರ ಈ ಹಂತದಲ್ಲಿ ಸಹಕಾರಿಯಾಗಿದ್ದು, ಅವರು ಪ್ರಾಣಾಯಾಮದ ವಿಷಯದಲ್ಲಿ ಪ್ರಖ್ಯಾತರಾಗಿದ್ದ ಸ್ವಾಮಿ ಬ್ರಹ್ಮಾನಂದರ ಶಿಷ್ಯನೂ ಆಗಿದ್ದರು. ಇದೇ ಬಾಬಾಜಿ ದೇವಧರ ನನಗೆ ಪ್ರಾಣಾಯಾಮದ ಮೊದಲ ಹಂತಗಳನ್ನು ಕಲಿಸಿಕೊಟ್ಟಿದ್ದರು. ದಿನಾಲೂ ಪ್ರಾತಃಕಾಲ ಮೂರು ತಾಸು, ಮತ್ತೆ ಸಾಯಂಕಾಲ ಎರಡು ತಾಸು ಈ ಪ್ರಾಣಾಯಮಕ್ಕೇ ಮೀಸಲಿಟ್ಟಿದ್ದು, ಅದೇ ಈಗಲೂ ಇಲ್ಲಿ, ತ್ರಾಟಕ ಸೂರ್ಯನ ಸಾಕ್ಷಾತ್ಕಾರದ ಹಂತದಲ್ಲಿ ಸುಗಮಗೊಳ್ಳುತ್ತಿರುವದನ್ನು, ಈ ಎಲ್ಲ ಘಟನೆಗಳೂ ಚಿತ್ತದಿಂದ ಮನಸ್ಸಿನಲ್ಲಿ ಪ್ರತ್ಯಕ್ಷಗೊಳ್ಳತೊಡಗಿದವು.

ದಿನಾಲೂ ಆರು ತಾಸು ಪ್ರಾಣಾಯಾಮವನ್ನು ಅನುಸರಿಸಿಕೊಂಡು ಬಂದದ್ದು, ನನ್ನ ಬೌದ್ಧಿಕ ಪರಿಪಕ್ವತೆಗೂ ಮತ್ತು ಮನಸ್ಸನ್ನು ಪ್ರಶಾಂತಗೊಳಸಿಕೊಳ್ಳುವದನ್ನು ಕಲಿಸಿತು. ಪ್ರಾಣಾಯಾಮದ ನಂತರದಲ್ಲಿ ಪ್ರಶಾಂತತೆಯು ಶಾಂತಿಯ ಜೊತೆಯಲ್ಲಿಯೇ ಚಿರಂತನವಾಗಿ ಇರುವದನ್ನು ಕಾಣಬಹುದು, ಈ ಅನುಭಾವವನ್ನೇ ನಾನು ಕಾವ್ಯ ರಚಿಸಲು ಉಪಯೋಗಿಸಿಕೊಂಡೆ. ಈ ಸಾಧನೆಗಿಂತ ಮೊದಲು ಕೆಲವೇ ಕೆಲವು ಸಾಲುಗಳನ್ನು ಮಾತ್ರ ಬರೆಯಲು ಸಾಧ್ಯವಾಗುತ್ತಿತ್ತು. ಆದರೆ ಪ್ರಾಣಾಯಾಮವು ನನ್ನ ಸಾಮರ್ಥ್ಯವನ್ನು ವೇಗೋತ್ಕರ್ಷಗೊಳಸಿತ್ತು, ನನ್ನ ಆರೋಗ್ಯವನ್ನೂ ಸುಧಾರಿಸಿತ್ತು. ಎಷ್ಟೇ ಕೆಲಸ ಮಾಡಿದರೂ ದಣಿವು ಎನ್ನುವದು ಸನಿಹ ಬರುವದಿಲ್ಲ, ಮೋಜಿನ ಸಂಗತಿ ಎಂದರೆ ಸೊಳ್ಳೆಗಳೂ ನನ್ನನ್ನು ಸಮೀಪಿಸುತ್ತಿಲ್ಲ. ಈ ಸಾಧನೆಗಾಗಿ ಮಾಂಸಾಹಾರ ವರ್ಜ್ಯ ಎನ್ನುವದು ಮುಖ್ಯವಾದದ್ದರಿಂದ ಅಂದಿನಿಂದಲೇ ಮಾಂಸಾಹರ ತ್ಯಜಿಸಿದ್ದೆ. ಹಿಂದೂ ಧರ್ಮದಲ್ಲಿ ಉಲ್ಲೇಖಿಸಲಾಗಿರುವ ಈ ಎಲ್ಲ ಸಂಗತಿಗಳೂ ಪ್ರಕಾಶದಷ್ಟೇ ಸ್ಪಷ್ಟವಾಗಿವೆ. ಈ ಎಲ್ಲ ಸಂಗತಿಗಳೂ ಕೇವಲ ಒಂದೇ ತಿಂಗಳಲ್ಲಿಯೇ ಅರಿವಿಗೆ ಬಂದದ್ದು, ಈಗ, ಇಲ್ಲಿ ಈ ಸಪ್ತಾಹದ ಅನುಷ್ಠಾನದಲ್ಲಿ ತುಂಬ ಸಹಕಾರಿಯಾದವು.

ಈ ದಿನದ ಧ್ಯಾನದ ಘಳಿಗೆಯಲ್ಲಿ ದರ್ಶನಕ್ಕೆ ಬಂದ ಸಂಕೇತಗಳ ಅರ್ಥವೇನು? ಇದನ್ನು ಎಲ್ಲರಿಗೂ ಹೇಳಬೇಕೆ...? ಅಥವಾ ಈ ಎಲ್ಲ ದರ್ಶನಗಳ ಮೂಲಕ ಲಭ್ಯವಾಗುವ ಸಂಕೇತಗಳು ಆಯಾ ವ್ಯಕ್ತಿಯ ಸಾಧನಾ ಪಥವನ್ನು ಅನುಸರಿಸಿ ದೃಷ್ಟಗೊಳ್ಳುತ್ತಿವೆ ಎಂದಾದಲ್ಲಿ, ಅವುಗಳ ವಿವರಣೆಯನ್ನು ಕೊಡುವದೂ ಸಮಂಜಸವಾಗುವದಿಲ್ಲ. ಪ್ರಾಣಾಯಾಮವೇನೋ ನನ್ನ ಆಂತರ್ಯ ಶಕ್ತಿಯನ್ನು ಪ್ರಗತಿಗೊಳಿಸಿದೆ. ಇಲ್ಲಿ ಈ ಎಲ್ಲ ಸಂಕೇತಗಳ ಮೂಲವಾಗಿರುವ ಸೂಕ್ಷ್ಮ ಪ್ರಪಂಚವನ್ನೂ ಕಾಣುವದು ಸಾಧ್ಯವಾಗಿದೆ. ಹಲವು ವಿಧದ ಆಕಾರಗಳು; ಹಲವು ವೈವಿಧ್ಯಮಯ ವರ್ಣಗಳು; ಆಯಾಮಗಳು, ಇವೆಲ್ಲವನ್ನೂ ಪ್ರಜ್ಞಾ ಹಂತದ ಭಾಷೆಯಲ್ಲಿಯೇ ವಿವರಿಸಲೂ ಸಾಧ್ಯವಿಲ್ಲ. ಆಧುನಿಕ ಭೌತ ಶಾಸ್ತ್ರವೂ ಸಹಿತ ಇದನ್ನು ವ್ಯಾಖ್ಯಾನಿಸಲು ಸಾಧ್ಯವಾಗುವದಿಲ್ಲ. ಅವರಿಗೆ ಇದರ ವಿವರಣೆಯನ್ನು ರೂಪಿಸಲೇ ಆಗುವದಿಲ್ಲ. ವಡೋದರಾದಲ್ಲಿ ಭೌತ ಶಾಸ್ತ್ರಜ್ಞನಾದ ಮಿತ್ರನಿಂದ ಬಂದ ಪ್ರಶ್ನೆ, 'ನಾವು ಮೊದಲು ವಸ್ತುವನ್ನು ಗಮನಿಸುತ್ತೇವೆ; ತದನಂತರವಷ್ಟೇ ಎರಡನೇ ಆಯಾಮದಲ್ಲಿ ಸಂಸ್ಕಾರವನ್ನು ಕಾಣುತ್ತೇವೆ ಎಂದೇ ಹೇಳಿದ್ದು, ಹೀಗಾಗಿಯೇ ನೀವು ಈ ವರ್ಣಗಳನ್ನು ಕಾಣಲು ಸಾಧ್ಯವಾಗಿದೆ' ಎಂದೇ ಅಭಿಪ್ರಾಯ ಕೊಟ್ಟಿದ್ದರು. ಹಾಗಾದರೆ ನಾನು ಈ ಎರಡನೇ ಹಂತದ ಸಂಸ್ಕಾರದ ಸ್ವರೂಪವನ್ನು ಕೇವಲ ಕೊನೆಯ ಎರಡು ನಿಮಿಷಗಳಲ್ಲಿ ಮಾತ್ರವೇ ಎಂದೇ ಕೇಳಿದ್ದು ನೆನಪಾಗಿ, ಒಂದು ಕ್ಷಣ ಒಳಗೇ ನಗೆ ಉಕ್ಕಿತು.

'ಅದು ಅಷ್ಟು ದೀರ್ಘ ಅವಧಿಗೆ ಕಾಣಲು ಸಾಧ್ಯವೇ ಇಲ್ಲ, ಅದೇನಿದ್ದರೂ ಕೇವಲ ಕೆಲವೇ ಕೆಲವು ಕ್ಷಣಗಳು ಮಾತ್ರ' ಎನ್ನುವ ಉತ್ತರ ಬಂದಿತ್ತು. ಹಾಗಾದರೆ 'ಅಲ್ಲಿ ಕಂಡ ಆಕಾರಗಳು ಮತ್ತು ವರ್ಣಮಯ ವಸ್ತುಗಳು ಈ ಭೂಮಿಯ ವಲಯದಿಂದ ಆಚೆ ಆಚೆ ಇದ್ದಲ್ಲಿ, ಅವೆಲ್ಲವೂ ಈ ಭೂಮಿಯ ವಸ್ತುಗಳ ಮೂಲಕವೇ ಗೋಚರಿಸುತ್ತವೆಯೇ?' ಎಂದು ಮರು ಪ್ರಶ್ನೆ ಮಾಡಿದ್ದೆ. 'ಇಲ್ಲ ಇಲ್ಲ ಹಾಗೆ ಇರಬೇಕೆಂದೇನೂ ಇಲ್ಲ' ಎಂದು ಮಾತು ಸಂಪೂರ್ಣ ಮಾಡುವದಕ್ಕಿಂತ ಮೊದಲೇ, ನಾನೇ,' ಸೂಕ್ಷ್ಮ ಜಗತ್ತಿನ ಗೂಢ ಸ್ವರೂಪವನ್ನು ಭೌತ ಶಾಸ್ತ್ರವೂ ಸಹಿತ ವ್ಯಾಖ್ಯಾನಿಸಲಾರದು, ಎಂದು ಉತ್ತರಿಸಿ ಮಾತು ಮುಗಿಸಿದ್ದೆ.

**(ಸಶೇಷ)**

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 05–01–2024 ರಂದು ಮಧ್ಯಾಹ್ನ 4.00 ರಿಂದ 5.00 ಗಂಟೆಗೆ ಮೀರಾಂಬಿಕಾ ಶಾಲೆ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್, ಪ್ರಾಂಶುಪಾಲರು, ಶಿಕ್ಷಕರು, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್ ಸದಸ್ಯರು ಹಾಜರಿದ್ದರು. ಶಿಕ್ಷಕರು ಸಂಸ್ಥಾಪಕರ ದಿನದ ಮಹತ್ವವನ್ನು ಕುರಿತು ಮಾತನಾಡಿದರು ಹಾಗೂ ಶಾಲೆಯ ಸಂಸ್ಥಾಪನೆಗೆ ದುಡಿದ ಸ್ಥಾಪಕರು ಮತ್ತು ಸಹ ಸಂಸ್ಥಾಪಕರನ್ನು ಸ್ಮರಿಸಿದರು. ಕಾರ್ಯಕ್ರಮವು ಒಂದು ನಿಮಿಷದ ಧ್ಯಾನದೊಂದಿಗೆ ಮುಕ್ತಾಯವಾಯಿತು.

ದಿನಾಂಕ 26–01–2024 ಶುಕ್ರವಾರ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲೆಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಪ್ರಾಂಶುಪಾಲರು ಧ್ವಜಾರೋಹಣ ಮಾಡಿದರು. ಶಾಲಾ ವಿದ್ಯಾರ್ಥಿ ವೃಂದ ದೇಶಭಕ್ತಿ ಗೀತೆ ಮತ್ತು ಗಣರಾಜ್ಯದ ಮಹತ್ವ ಕುರಿತು ಭಾಷಣ ಮಾಡಿದರು. ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



ಫೋಟೊ: ಇಮೇಜಿಂಗ್ ಸಾವಿತ್ರಿ

ನವ್ಯಾತಿನವ್ಯ ಗೂಢತೆಯ ಅರಿವಿನಾಗಮನ ಪ್ರಭೆಯ ಕಂಡು

**– ಪುಟ್ಟು ಕುಲಕರ್ಣಿ**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಆರೋಹ ಪಥದ ಯಾತ್ರಿಕನು ಈಗ ಅನಿವಾರ್ಯವಾಗಿ ಇಲ್ಲಿ–

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 7 ಪುಟ 210)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.